ಕಾಕನಕೋಟೆ

ಶ್ರೀನಿವಾಸ

ಮುನ್ನುಡಿ

ಕಾಕನಕೋಟೆ ಮೈಸೂರು ಡಿಸ್ಟ್ರಿಕ್ಟಿನ ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಒಂದು ಸ್ಥಳ. ಈ ಪ್ರಾಂತ ಮಲೆನಾಡು. ಇದರ ಸುತ್ತಿನ ಕಾಡನ್ನು ಕಾಕನಕೋಟೆ ಕಾಡು ಎಂದು ಕರೆಯುತ್ತಾರೆ. ಕಾಡುಕುರುಬರೆಂಬ ಜನಕ್ಕೆ ಇದೂ ನೆರೆಯ ಕಾಡುಗಳೂ ವಾಸಸ್ಥಾನಗಳು. ನಾನು ಈ ಪ್ರಾಂತದಲ್ಲಿ ಹತ್ತು ವರುಷದ ಹಿಂದೆ ಸುತ್ತಿದಾಗ ಕಾಕ ಯಾರು ಕೋಟೆ ಎಲ್ಲಿ ಹೆಗ್ಗಡೆ ದೇವಣ್ಣ ಯಾರು ಎಂದು ಮುಂತಾಗಿ ತೋರಿದ ಪ್ರಶ್ನೆಗಳಿಗೆ ಉತ್ತರವಾಗಿ ಒಂದು ಕತೆ ಬರೆಯಬೇಕೆಂದು ಯೋಚಿಸಿದೆನು. ಆರು ವರುಷದ ಹಿಂದೆ ಇತ್ತ ಹೋಗಿದ್ದಾಗ ಕಾಡುಕುರುಬರ ಮೂಲ ಪುರುಷನೊಬ್ಬನ ಮಾತನ್ನು ಕೇಳಿ ಕರಿಹೈದ ಎಂಬ ಒಂದು ಕಾವ್ಯವನ್ನು ಬರೆಯಬೇಕೆಂದು ತೋರಿತು. ಆಮೇಲೆ ಈ ಜನರ ರೀತಿ ನೀತಿಯನ್ನು ಕುರಿತು ಒಂದು ಲೇಖನ ಬರೆಯುವ ಯೋಚನೆಮಾಡಿದೆನು. ಇದೆಲ್ಲ ಕಲೆತು ಕಳೆದ ಫಾಲ್ಗುಣದಲ್ಲಿ ಪ್ರಸ್ತುತ ನಾಟಕವಾಗಿ ಪರಿಣಮಿಸಿತು. ಅದನ್ನು ಪರಿಷ್ಕರಿಸಿ ಈಗ ಪ್ರಕಟಿಸುವುದಾಗಿದೆ.

ನಾಟಕಕಾರನು ಪ್ರಸಿದ್ಧವಾದ ಇತಿವೃತ್ತವನ್ನು ವಸ್ತುವಾಗಿ ತೆಗೆದುಕೊಳ್ಳಬೇಕೆಂದು ನಮ್ಮ ಪೂರ್ವಿಕರ ಸೂತ್ರವೊಂದಿದೆ. ಇದರ ಕತೆ ಹಾಗೆ ಪ್ರಸಿದ್ಧ ಇತಿವೃತ್ತವಲ್ಲದ್ದರಿಂದ ಎರಡು ಮಾತಿನಲ್ಲಿ ಇದರ ಕಲ್ಪನೆ ಏನೆಂದು ತಿಳಿಸಬಹುದು. ಈಗ ಕಾಡುಕುರುಬರೆಂದು ನಮಗೆ ಕಾಣುವ ಜನ ಹಿಂದೆ ಇನ್ನೂ ಹೆಚ್ಚು ಸಂಖ್ಯೆಯದಾಗಿತ್ತೆಂದೂ ಇವರದೊಂದು ಸಂಸ್ಕೃತಿಯಿತ್ತೆಂದೂ ಶ್ರೀಮನ್ಮಹಾರಾಜ ಶ್ರೀರಣಧೀರ ಕಂಠೀರವ ನರಸರಾಜರ ಆಳ್ವಿಕೆಯಲ್ಲಿ ಈ ಜನರಿಗೂ

ಹೆಗ್ಗಡದೇವನಕೋಟೆಯ ಹೆಗ್ಗಡೆಗೂ ಇವರು ಕೊಡಬೇಕಾದ ಕಪ್ಪದ ವಿಷಯದಲ್ಲಿ ವಿವಾದ ಬಂದಿತೆಂದೂ ಈ ಜನರ ಮುಖಂಡನಾದ ಕಾಚನೆಂಬವನು ಮೈಸೂರಿನಲ್ಲಿದ್ದಿದ್ದು ರಾಜರನ್ನು ಬಲ್ಲವನಾಗಿದ್ದ ಕಾರಣದಿಂದ ಅವರ ಸಹಾಯವನ್ನು ಬೇಡಿ ತನ್ನ ಜನವನ್ನು ಆ ಕಷ್ಟದಿಂದ ಪಾರುಮಾಡಿಸಿದನೆಂದೂ ಇಲ್ಲಿ ಕಥಾವಸ್ತು. ಇದನ್ನು ಇತಿಹಾಸದ ಆಧಾರದಿಂದ ಬರೆದಿಲ್ಲ. ಇಲ್ಲಿ ಇತಿಹಾಸದ ವ್ಯಕ್ತಿ ರಣಧೀರ ರಾಜರಲ್ಲದೆ ಮತ್ತೊಬ್ಬರಿಲ್ಲ. ಹೀಗೆಂದ ಮಾತ್ರಕ್ಕೆ ಇದನ್ನು ಒಪ್ಪಿಕೊಂಡ ಒಂದು ತಪ್ಪೆಂದಾಗಲಿ ಕೊಚ್ಚಿದ ಜಂಭವೆಂದಾಗಲಿ ಯಾರೂ ಎಣಿಸಬಾರದೆಂದು ನಾನು ಪ್ರಾರ್ಥಿಸುತ್ತೇನೆ.

ನಮ್ಮಲ್ಲಿ ಕತೆ ಕಾವ್ಯ ನಾಟಕ ಹೆಚ್ಚಾದುವೆಂದು ಬಲ್ಲ ಹಿರಿಯರು ಕೆಲವರ ಅಭಿಪ್ರಾಯ. ಇನ್ನು ಕೆಲವರ ಮಾತಿನಲ್ಲಿ ನನ್ನ ಪುಸ್ತಕಗಳ ಸಂಖ್ಯೆ ಹೆಚ್ಚಾಯಿತೆಂಬ ಅಭಿಪ್ರಾಯದ ಧ್ವನಿ ಕಂಡಿದೆ. ಎಲ್ಲ ಹಿರಿಯರೂ ಹೀಗೆ ಅಭಿಪ್ರಾಯಪಡಲಾರರೆಂದು ನಮ್ಮಂತವರು ನಿರೀಕ್ಷಿಸಬಹುದು. ಅದು ಹೇಗಾದರೂ ಇರಲಿ. ಒಂದೊಂದು ಪುಸ್ತಕವನ್ನು ಒಂದೊಂದು ತಪ್ಪು ಎಂದ ಕಾಲಕ್ಕೂ ನನ್ನ ಪುಸ್ತಕಗಳ ವಿಷಯವಾಗಿ ಮುಖ್ಯವಾದ ಒಂದು ಸಮಾಧಾನವನ್ನು ಹೇಳಬಹುದು. ಈ ನನ್ನ ತಪ್ಪು ಎಲ್ಲ ಸಣ್ಣವು; ಇವುಗಳಲ್ಲಿ ನೂರು ಪುಟದಷ್ಟು ಇರುವವು ಅಪೂರ್ವ. ಈ ಕಾರಣದಿಂದಲೂ ಇಂತ ಪುಸ್ತಕಗಳು ಹೆಚ್ಚಾದುವೆಂಬವರು ಕೆಲವರಿರುವಂತೆ ಇನ್ನೂ ಸಾಲವು ಎಂಬವರು ಕೆಲವರು ಇರಬಹುದೆಂಬ ಕಾರಣದಿಂದಲೂ ನಾನು ಶಂಕೆಯುಳಿದು ಈ ನಾಟಕವನ್ನು ಅಚ್ಚು ಹಾಕಿಸುತ್ತಿದೇನೆ.

ಎಲ್ಲ ನಾಟಕದಂತೆ ಈ ನಾಟಕವಾದರೂ ರಂಗದಲ್ಲಿ ಕಾಣುವವರೆಗೆ ಪೂರ್ಣವಾಗಲಾರದು. ಆದರೆ ಈಗಣ ನಮ್ಮ ಸ್ಥಿತಿಯಲ್ಲಿ ಇಂಥ ಕೃತಿಯನ್ನು ಆಡಿ ತೋರಿಸುವ ಬಗೆಯ ಸೌಕರ್ಯಗಳು ಕಡಮೆ. ಪರಿಸ್ಥಿತಿ ಎಂದಿಗೂ ಹೀಗೆಯೇ ಇರಲಾರದು ಎಂಬ ಆಸೆ ನಮ್ಮೆಲ್ಲರ ಮನಸ್ಸಿನಲ್ಲೂ ಇದ್ದೇ ಇದೆ. ರಂಗದಲ್ಲಿ ನೋಡುವುದಕ್ಕಾಗದಿದ್ದರೂ ಇದನ್ನು ಓದಿ ನಮ್ಮ ಜನಕ್ಕೆ ಸ್ವಲ್ಪವಾದರೂ ಸುಖಕಾಣಲೆಂದು ನಾನು ಬಹು ಆತುರದಿಂದ ಅಪೇಕ್ಷಿಸುತ್ತೇನೆ.

ಈಶ್ವರ ಸಂ॥ ಪುಷ್ಯ ಶ್ರೀನಿವಾಸ

ಬಹುಳ ದ್ವಾದಶೀ ಶುಕ್ರವಾರ

ಶ್ರೀನಿವಾಸ ರಚಿತ

ಕೆಲವು ಸಣ್ಣಕತೆಗಳು

ಬಿನ್ನಹ (ಗೀತೆಗಳು)

ಶಾಂತಾ (ಸಣ್ಣ ದೃಶ್ಯ)

ಸಾವಿತ್ರಿ (“)

ಸಣ್ಣ ಕತೆಗಳು

ಸಾಹಿತ್ಯ (ಉಪನ್ಯಾಸ)

ಅರುಣ (ಪದ್ಯಗಳು)

ವಿಮರ್ಶೆ ೧ (ಲೇಖನಗಳು)

ಉಷಾ (ಸಣ್ಣ ದೃಶ್ಯ)

ಸುಬ್ಬಣ್ಣ (ಕತೆ)

ತಾಳೀಕೋಟೆ (ಐತಿಹಾಸಿಕ ದೃಶ್ಯ)

ವಿಮರ್ಶೆ ೨ (ಲೇಖನಗಳು)

ನಾಲ್ಕು ಸಣ್ಣ ಕತೆಗಳು

ಕನ್ನಡದ ಸೇವೆ (ಭಾಷಣ)

ಮಂಜುಳಾ (ಸಾಮಾಜಿಕ ದೃಶ್ಯ)

ತಾವರೆ (ಪದ್ಯಗಳು)

ಕರ್ಣಾಟಕದ ಜನತೆಯ ಸಂಸ್ಕೃತಿ

ಚೆಲುವು (ಪದ್ಯಗಳು)

ಶಿವ ಛತ್ರಪತಿ (ಐತಿಹಾಸಿಕ ದೃಶ್ಯ)

ವಿಮರ್ಶೆ ೩ (ಲೇಖನಗಳು)

ಯಶೋಧರಾ (ನಾಟಕ)

ಮಲಾರ (ಪದ್ಯಗಳು)

ಸಣ್ಣ ಕತೆಗಳು ೪

ರವೀಂದ್ರನಾಥ ಠಾಕೂರರು

ಸಣ್ಣ ಕತೆಗಳು ೫

ಶ್ರೀ ರಾಮಕೃಷ್ಣ

ತಿರುಪಾಣಿ (ಗೀತ ಪ್ರಧಾನ ದೃಶ್ಯ)

ಕರ್ಣಾಟಕದ ಜನಪದ ಸಾಹಿತ್ಯ

Popular Culture in ”Karnataka”

(ಇಂಗ್ಲೀಷಿನಲ್ಲಿ)

ಪಾತ್ರ, ಸ್ಥಳ, ಕಾಲ್ಕ ಇವುಗಳ ವಿವರ

ಕಾಚ - ಕಾಡುಕುರುಬರ ಮುಖಂಡ. ಹುಡುಗನಾಗಿ ಮೈಸೂರಿಗೆ ಹೋಗಿದ್ದು ಪ್ರಾಯದಲ್ಲಿ ಕೆಲವು ವರುಷ ಹಿಂದಕ್ಕೆ ಬಂದಿದ್ದು ಮರಳಿ ಮೈಸೂರಿಗೆ ಹೋಗಿ ಮಧ್ಯವಯಸ್ಸಿನಲ್ಲಿ ಮತ್ತೆ ತನ್ನ ಜನವನ್ನು ಬಂದು ಸೇರಿ ಅವರ ಬುದ್ಧಿವಂತ, ದೇವರಗುಡ್ಡ ಆಗಿದಾನೆ.

ಮಾಚನಾಯಕ - ಹೆಗ್ಗಡದೇವನಕೋಟೆಯ ಹೆಗ್ಗಡೆಯ ದಲಾಯಿತ.

ಕರಣೀಕ - ಹೆಗ್ಗಡೆಯ ಮಂತ್ರಿ.

ಗೌಡ - ಕಾಡುಕುರುಬರ ಬೂಡು(ಹಳ್ಳಿ)ಗಳ ಹಿರಿಯ.

ತಮ್ಮಗೌಡ - ಗೌಡನಿಗೆ ಎರಡನೆಯವನಾದ ಕಾಡುಕುರುಬರ ಹಿರಿಯ.

ಹೆಗ್ಗಡೆ - ಹೆಗ್ಗಡದೇವನಕೋಟೆಯನ್ನು ಕಟ್ಟಿದ ಹೆಗ್ಗಡೆಯಿಂದ ಮೂರನೆಯ ತಲೆಯ ಹೆಗ್ಗಡೆ.

ಚಿಕ್ಕಯ್ಯ - ಹೆಗ್ಗಡೆಯ ಮಗ.

ನಾಕ - ಕುರುಬರ ಪುಂಡ (ತರುಣ).

ಮೊಲ್ಲೆ - ಕಾಚನ ಮಗಳು.

ಮೋನಿ - ಕಾಚನ ತಂಗಿಯ ಮಗಳು. ನಾಕನ ಹೆಂಡತಿ.

ಮೋನ - ಮೋನಿಯ ಅಣ್ಣ.

ಮಾವ - ಕಾಚನಿಗೆ ಮೊದಲು ಈ ಜನಕ್ಕೆ ಬುದ್ಧಿವಂತ ದೇವರಗುಡ್ಡ ಆಗಿದ್ದವನು. ಇವನು ಬಿಟ್ಟಿದ್ದ ಹೆಣ್ಣನ್ನು ಕಾಚನು ಹರೆಯದಲ್ಲಿ ಬಂದಿದ್ದಾಗ ಕೂಡಿದ್ದನು. ಆ ಸಂಬಂಧದ ಮಗುವೇ ಮೊಲ್ಲೆ.

ರಣಧೀರ - ಮೈಸೂರ ಮಹಾರಾಜ ರಣಧೀರ ಕಂಠೀರವ ನರಸರಾಜ ಒಡೆಯರು.

ಶಿಂಗಾಜೆಟ್ಟಿ - ಅರಸನ ಮೈಗಾವಲ ಜೆಟ್ಟ.

ಕುರುಬ ಹುಡುಗಿಯರು; ಹುಡುಗರು; ಮುದುಕರು;

ತಮಟೆಯ ಮುದುಕ ಒಬ್ಬ.

ಸ್ಥಳ-ಕಾಕನಕೋಟೆಯಲ್ಲಿ ಹೆಗ್ಗಡೆ ಬಂದು ಇಳಿದಿರುವ ಪಾಳ್ಯ ಒಂದು; ಅದರಿಂದ ಸ್ವಲ್ಪ ದೂರದಲ್ಲಿರುವ ಕುರುಬರ ಬೂಡು (ಹಳ್ಳಿ) ಒಂದು.

ಕಾಲ-ಮಹಾರಾಜ ರಣಧೀರ ಕಂಠೀರವ ನರಸರಾಜರು ಆಳುತ್ತಿದ್ದ ಕಾಲ.

ಕಥಾ ವಸ್ತು ಮೊದಲಿಂದ ಕೊನೆಯವರೆಗೆ ಸುಮಾರು ಹದಿನೈದು ದಿನದಲ್ಲಿ ನಡೆಯತಕ್ಕದ್ದು.

ಕಾಕನಕೋಟೆ

ಕಾಕನಕೋಟೆ

೧

[ಕಾಕನಕೋಟೆಯ ಕಾಡಿನಲ್ಲಿ. ಹೆಗ್ಗಡೆ ದೇವಣ್ಣನ ಪಾಳೆಯದ ಮುಂದೆ.]

ಕಾಚ	(ಹಾಡುತ್ತಿದಾನೆ) ಬೆಟ್ಟದಾ ತುದಿಯಲ್ಲಿ ಕಾಡುಗಳ ಎದೆಯಲ್ಲಿ ಕಪಿನೀಯ ನದಿಯೆಲ್ಲಿ ಉಗುತಿರುವುದಲ್ಲಿ; ಎಲ್ಲಿ ನೋಡ ನೋಡ ಕರ್ರ ಕಾರುವ ಮೋಡ ಪಡೆಗೂಡುವುದು ಗಾಡ ಒಟ್ಟೊಟ್ಟೆ ಅಲ್ಲಿ; ಎಲ್ಲಿ ಕೊಂಬಿನ ಸಲಗ ಹೆಣ್ಣಾನೆ ಮರಿ ಬಳಗ ಬೆಳುತಿಂಗಳಿನ ತಳಗ ನಡೆಯುವುದು ಅಲ್ಲಿ; ಯಾವಲ್ಲಿ ಸಾರಂಗ ಕೆಚ್ಚು ಕೋಡಿನ ಸಿಂಗ ನೋಡುತ ನಿಂತ್ಹಂಗ ನಿಲ್ಲುವುದು ಅಲ್ಲಿ; ಎಲ್ಲಿ ಎರಳೆಯ ಹಿಂಡು ಹುಲಿಯ ಕಣ್ಣನು ಕಂಡು ಹೆದರಿ ಹಾರುವ ದಂಡು ಚೆಲ್ಲುವುದು ಅಲ್ಲಿ; ಗಿಳಿ ಗೊರವ ಕೋಗೀಲೆ ಹಾರು ಹಕ್ಕಿಯ ಮಾಲೆ ಹಾಡುತಿದೆ ದನಿಮೇಲೆ ದನಿಯೇರಿ ಎಲ್ಲಿ; ಎಲ್ಲಿ ಏಕಾಏಕಿ ಗಂಡು ನಮಿಲಿಯ ಕೇಕಿ ಬೋರಗಲ್ಲಿಗೆ ತಾಕಿ ಗೆಲ್ಲುವುದು ಅಲ್ಲಿ;

	ಹೆಜ್ಜೇನು ಯಾವಲ್ಲಿ ಇದ್ದಲ್ಲೆ ಹೂವಲ್ಲಿ ಕದ್ದೊಂದು ಮೇವಲ್ಲಿ ತಣಿದಿರುವುದಲ್ಲಿ; ದಿನದಿನಾ ಸಂಪಂಗಿ ಇರುವಂತಿ ಮಲ್ಲಂಗಿ ಮೊಲ್ಲೆ ಅದರ ತಂಗಿ ಅರಳುವುದು ಏಲ್ಲಿ; ಯಾವಲ್ಲಿ ಜಾಲಾರಿ ಎದೆಯ ಕಂಪನು ಕಾರಿ ತನ್ನ ತಾಣವ ಸಾರಿ ಬಾ ಎಂಬುದಲ್ಲಿ; ಯಾವಲ್ಲಿ ಹೆಬ್ಬಲಸು ಕೈಗೆ ಕಾಲಿಗೆ ಗೊಲಸು ಅಂತ ಹಣ್ಣನು ಹುಲುಸು ಹೊತ್ತಿರುವುದಲ್ಲಿ; ಎಲ್ಲಿ ಕರಿ ಸಿರಿಗಂಧ ಮರ ಬೆಳೆದು ತಾ ಮುಂದ ಮಾದೇಶ್ವರಗೆ ಚೆಂದ ಮೆಚ್ಚುವುದು ಅಲ್ಲಿ
ಮಾಚಣ್ಣ	(ಬಂದು) ಎಲಾ ಯಾರೋ ನೀನು?
ಕಾಚ	ಬುದ್ದಿ ನಾ ಕಾಚ.
ಮಾಚಣ್ಣ	ಏನೋ ಕಾಚ ಅಂದರೆ.
ಕಾಚ	ನಮ್ಮಲ್ಲಿ ಅದೊಂದು ಹೆಸರು ಬುದ್ಧಿ, ಮಾಚ, ರಾಚ, ಅನ್ನೋಹಂಗೆ.
ಮಾಚಣ್ಣ	ಎಲಾ ಎಷ್ಟೋ ಮಾತು ? ನನ್ನ ಮಾಚ ಅಂತೀಯ?
ಕಾಚ	ಬುದ್ದಿ ದಣೀ ಹೆಸರು ಮಾಚ ಒಡೇರು ಅಂತಲಾ?
ಮಾಚಣ್ಣ	ಒಡೇರು ಅಂತ ಯಾರು ಹೇಳಿದರೊ? ನಾ ಹೆಗ್ಗಡೆಗಳ ದಳಾಯಿತ ಮಾಚನಾಯಕ ಅಂತ ಕಾಣೆಯಾ?

ಕಾಚ	ನಾಯಕರೆ ನಾ ಒಂದು ಕಾಡು ಕೋಳಿ; ಊರ ಹುಂಜನ ನಾ ಏನು ಬಲ್ಲಿ?
ಮಾಚಣ್ಣ	ಅಲ್ಲವೊ ಅಲ್ಲಿ ಹೆಗ್ಗಡೆಗಳು ಗೌಡರು ಮಾತನಾಡುತ ಇದ್ದರೆ ಇಲ್ಲಿ ನೀನು ಪದಾ ಹಾಡುತಾ ಇದೀಯಲ್ಲೊ!
ಕಾಚ	ಇಲ್ಲಿ ನಾ ಹಾಡಿದರೆ ಅಲ್ಲಿ ಅವರಿಗೆ ಕೇಳಿಶ್ಯಾತ ನಾಯಕರೆ.
ಮಾಚಣ್ಣ	ಯಾಕೊ ಮಗನೆ ನೀ ಬಹಳ ಮೆಲ್ಲಗೆ ಹಾಡುತಿದ್ದೀ ಅಂತ ತಿಳಿದ್ಯಾ? ನಾ ಅಲ್ಲಿ ಬಾಗಲತಾವ ನಿಂತಿದ್ದರೆ ಏನೋ ರಂಪ ಕೇಳಿಸಿತು, ಏನು ಇದು ಎಂತ ಬಂದರೆ ಇಲ್ಲಿ ನೀ ಹಾಡುತಿದೀಯಾ.
ಕಾಚ	ರಂಪ ಕೇಳಿಸಿದ್ದು ನಾ ಹಾಡಿದ್ದಲ್ಲವಾದೀತು, ನಾಯಕರೆ.
ಮಾಚಣ್ಣ	ಇನ್ನೇನು?
ಕಾಚ	ಗೌಡುಗಳೊ ಹೆಗ್ಗಡೆಗಳೊ ಕೋಪದಲ್ಲಿ ಮಾತಾಡಿದ್ದಿರಬೇಕು.
ಮಾಚಣ್ಣ	ಎಲಾ ನೀನು ಏನು ಪೂರಾ ಬುದ್ದಿವಂತನ ಹಂಗಿದ್ದೀಯಾ!
ಕಾಚ	ಹೌದು ನಾಯಕರೆ, ನನ್ನ ಹಂಗೇ ಕರೀತಾರೆ.
ಮಾಚಣ್ಣ	ಏನು ಬುದ್ಧಿವಂತಾ ಅಂತ?
ಕಾಚ	ಹೌದು ನಾಯಕರೆ ನಮ್ಮ ಹಾಡೀಗೆ ನಾನೇ ಬುದ್ದಿವಂತ. ನಿಮ್ಮ ಊರಾಗೂ ಒಬ್ಬ ಬುದ್ಧಿವಂತ ಇರಬೇಕಲ್ಲ.
ಮಾಚಣ್ಣ	ಇದಾನೆ; ಅಂದರೆ ಅವನು ನಿನಗೆ ಸಮ ಆಗೋದಿಲ್ಲ.
ಕಾಚ	ಯಾಕ ನಾಯಕರೆ ಅವನಿಗೆ ಹಾಡೋಕೆ ಬರೋಲ್ಲೆ?
ಮಾಚಣ್ಣ	ಎಲಯ್ಯ ಸುಮ್ಮನಾಗು. ಕರಣೀಕರು ಬಂದರು.

	(ಕರಣೀಕ್ಕ ಗೌಡರು, ಬರುವರು)
ಕರಣೀಕ	ಏನಯ್ಯ, ಗೌಡರೆ, ಹೆಗ್ಗಡೆಗಳು ಮಾಡಿದ ಅಪ್ಪಣೆ ತಿಳಿಯಿತೊ?
ಗೌಡ	ತಿಳೀತು, ಒಡೆಯ.
ಕರಣೀಕ	ತಪ್ಪೀರಿ ಜೋಕೆ. ಎಂಟು ಊರಿನ ಕಡೆಯಿಂದ ಬರುವ ಅರಮನೆ ಕಾಣಿಕೆ ನೇರವಾಗಿ ಹೆಗ್ಗಡೆಗಳ ಕೋಟೆಗೆ ಬರಬೇಕು. ಅದನ್ನು ತರುವುದು ನಿಮ್ಮ ಹೊಣೆ. ಕಾಣಿಕೆ ಸೇರದೆ ಇದ್ದರೆ ದೊರೆಗಳು ಕಿಡಿಕಿಡಿ ಆಗುತಾರೆ. ಅವರೇನು ಕೊಂಚದವರಲ್ಲ. ರಣಧೀರರು ಎಂತ ಹೆಸರಾಗಿದಾರೆ ತಿಳೀತೊ?
ಗೌಡ	ಹೆಗ್ಗಡೆಗಳ ಮಾತು ದೊರೆಗಳ ಮಾತು ಹೇಳುತಿದೀರ ಸರ್ರಿ, ನಮ್ಮ ಮಾತೂ ಹೇಳಬೇಕೊ ಅಲ್ಲೊ ಕರಣೀಕರು.
ಕರಣೀಕ	ಅದೆಲ್ಲಾ ಆಗೋಲ್ಲ. ಇದೇ ಕೊನೇ ಮಾತು.
ಕಾಚ	ಅದ್ಯಾಕ ನನ್ನೊಡೆಯ ಹಂಗಂತೀರ? ಜೀವ ಇರಬೇಕಾದರೆ ಇದನ್ಯಾಕ ಕೊನೇ ಮಾತು ಅಂತೀರ?
ಕರಣೀಕ	ಯಾರಯ್ಯ, ಇವನು?
ಗೌಡ	ಮಾಸ್ವೋಮಿ, ಅವನು ನಮ್ಮೂರ ಬುದ್ಧಿವಂತ.
ಕರಣೀಕ	ಲೋ ಬುದ್ಧಿವಂತ, ನಿನ್ನ ಮಾತು ನಿಮ್ಮೂರಾಗೆ ಆಡು, ಇಲ್ಲಿ ನಮ್ಮ ಮಾತಿಗೆ ಬರಬೇಡ.

ಕಾಚ	ಕೊನೇ ಮಾತಾಗ ಬ್ಯಾಡ ಅಂದಿ ಬುದ್ದಿ. ಕೊನೇ ಮಾತಾಗೋದೆ ನಿಮಗೆ ಚಂದ ಅಂದರೆ ಹಂಗೆ ಆಗಲೇಳಿರ. ಅಮ್ಮಾವರ ತಾತಿಬಲ ಎಷ್ಟೋ ಅಷ್ಟೆ ಆಯಿತು.
ಕರಣೀಕ	ಯಾರೋ ಇವ ಬಂದಿರೋನು ಅಪಶಕುನದ ಹಕ್ಕಿ? ಎಲಯ್ಯ ಮಾಚಣ್ಣ ಇವನ್ನ ಅತ್ತ ಒಯ್ಯಬಾರದೇ?
ಮಾಚಣ್ಣ	ಲೋ ಬುದ್ದಿವಂತಣ್ಣ, ನಡೀ ಅತ್ತಲಾಗಿ (ಎಂದು ಅವನನ್ನು ಬೇರೆ ಕಡೆಗೆ ದೂಡಲು ನೋಡುವನು).
ಕಾಚ	(ಅವನಿಂದ ತಪ್ಪಿಸಿಕೊಂಡು) ನನ್ನ ಮುಟ್ಟಬ್ಯಾಡಿರ, ಊರ ಕುರುಬರು ಮುಟ್ಟಿದರೆ ನಾವು ಕಾಡಿನೋರು ಮೀಯಬೇಕಾಗುತದೆ. ಸಾಯೋದು ಬೇಡ ಅಂದರೆ ಕೋಪಮಾಡುತಾರೆ ಕರಣೀಕರು. ಅವರಿಷ್ಟ ಇದ್ದಂಗೆ ಆಗಲಿ ಬಿಡಿರ (ಎಂದು ಬಾಯಿಗೆ ಕೈ ಅಡ್ಡ ಇಟ್ಟುಕೊಂಡು ತಾನು ಮಾತಾಡುವುದಿಲ್ಲವೆಂದು ತೋರಿಸುವನು).
ಕರಣೀಕ	ಏನಯ್ಯ, ಗೌಡರೆ?
ಗೌಡ	ನನ್ನೊಡೆಯ.
ಕರಣೀಕ	ನಾವು ಹೇಳಿದಹಂಗೆ ಮಾಡಿಬಿಡಬೇಕು.
ಗೌಡ	ನಾವು ಮಾಡಿದರೂ ಮಾಡ್ಯೇವು ಬುದ್ದಿ, ಆ ಕಾಕನಿಗೆ ಯಾರು ಸಮ್ಮತಿಪಡಿಸೋರು?
ಕರಣೀಕ	ಕಾಕ ಗೀಕ ನಮಗೆ ತಿಳಿಯದು. ನಿಮ್ಮ ಕಡೆಯಿಂದ ನಮಗೆ ಬರೋ ಕಾಣಿಕೆ ಸರಿಯಾಗಿ ಸಂದಾಯವಾಗಬೇಕು. ಇದು ನಿಮ್ಮ ಭಾರ.

ತಮ್ಮಗೌಡ	ಬಾರ ದಿಟ ನನ್ನೊಡೆಯ.
ಗೌಡ	ನೀವು ಬಂದು ನಮ್ಮೂರಾಗೆ ಸಂದಾಯಮಾಡಿಕೊಳ್ಳಿರ, ಕೊಟ್ಟುಬಿಡುತೀವಿ.
ಕರಣೀಕ	ಅದೇನು ಮಾತು? ನೀವೇ ತಂದರೆ ಆಗದು ಯಾಕೆ?
ಗೌಡ	ನೀವು ಬಂದರೆ ನಮ್ಮಮೇಲೆ ತಪ್ಪಿಲ್ಲ. ಬಂದರು ಕೊಟ್ಟಿವಿ ಅಂತೀವಿ. ನಾವೇ ತಂದರೆ ಕಾಕ ನಮ್ಮಮೇಲೆ ತಪ್ಪು ಹಾಕುತಾನೆ. ಅವರಿಗೆ ಕೊಟ್ಟಿದ್ದು ನಿಮ್ಮ ಇಷ್ಟ, ನೀವೇ ಕೊಟ್ಟಿರಿ, ನನಗೂ ಕೊಡಿ, ಅಂತಾನೆ. ಎರಡುಸಲ ಹೆಂಗೆ ಕೊಡೋಕಾಗತದೆ?
ಕರಣೀಕ	ಅವನಿಗೆ ಕೊಡಬೇಡಿ.
ತಮ್ಮಗೌಡ	ನನ್ನೊಡೆಯ ನಿಮಗಾದರೆ ನಾವು ಕೊಡೋದು ನೀವು ತಗೋಳೋದು ಉಂಟು. ಕಾಕನಿಗೆ ನಾವು ಕೊಡಬೇಕಾದ್ದೆ ಇಲ್ಲ. ಅವನೇ ತಕೋತಾನೆ. (ಹೆಗ್ಗಡೆ ಬರುತ್ತಾನೆ; ಅವನ ಜೊತೆಗೆ ಮಗ ಚಿಕ್ಕಯ್ಯ)
ಕರಣೀಕ	ಹೆಗ್ಗಡೆಗಳು ಬಂದರು.
ಹೆಗ್ಗಡೆ	ಏನು ಕರಣೀಕರೆ ಇನ್ನೂ ಮಾತನಾಡತಲೇ ಇದೀರಿ.
ಕರಣೀಕ	ಈ ಮಾತು ಮುಗಿಯುವ ಹಾಗಿ ಕಾಣಲಿಲ್ಲ ಒಡೆಯರೆ, ಕಾಕನ್ನ ಒಪ್ಪಿಸೋಕೆ ಆಗೋಲ್ಲ. ನೀವೇ ಬಂದು ಕಂದಾಯ ತಕ್ಕೊಂಡು ಹೋಗಿ, ಅಂತಾರೆ ಇವರು. ಇವರೇ ತಂದು ಕೊಟ್ಟರೆ ಅವನಿಗೆ ತಿರಗಾ ಕೊಡಬೇಕಾಗತದೆ ಅಂತಾರೆ. ದ್ಯಾವಣ್ಣ ಹೆಗ್ಗಡೆಗಳು ಕೋಟೆ ಕಟ್ಟಿ

	ಅರವತ್ತು ವರುಷ ಆಯಿತು; ಈಗ ಹೊಸದಾಗಿ ಇಲ್ಲಿಗೇ ಬಂದು ಕಾಣಿಕೆ ತಕ್ಕೊಳ್ಳಿ ಅಂತಾರೆ.
ಹೆಗ್ಗಡೆ	ಬಂದೇ ತಕ್ಕೊಂಡರೆ?
ಕಾಚ	ಅದ ನೋಡೋಣ ಅಂತಾನೆ ಕಾಕ.
ಕರಣೀಕ	ಎಲಾ ಇವನ್ಯಾರೊ?
ಕಾಚ	ಬುದ್ಧಿ ನಾ ಕಾಚ.
ಕರಣೀಕ	ಎಲಾ ಮುಚ್ಚು ಬಾಯಿ. ಹೆಗ್ಗಡೆಗಳು ಮಾತಾಡುವಾಗ ಮಧ್ಯೆ ಬಾಯಿಹಾಕಬೇಡ.
ಕಾಚ	ಮಾತು ಅಂತನ್ನೋದು ತಣಿಗೆ ಹಿಟ್ಟಾಯಿತು ಗೌಡರೆ. ದೊಡ್ಡ ನಾಯಿ ತಿನ್ನತಿರಬೇಕಾದರೆ ಚಿಕ್ಕದು ನೋಡತಾ ಇರಬೇಕು.
ಹೆಗ್ಗಡೆ	ಇವನ್ಯಾರು?
ಗೌಡ	ಅವ ನಮ್ಮ ಬುದ್ಧಿವಂತ ನನ್ನೊಡೆಯ.
ಹೆಗ್ಗಡೆ	ಅವನು ಹೇಳಿದ್ದು ಏನು?
ಕರಣೀಕ	ಸರಿ ಅವ ಕೆಟ್ಟ.
ಕಾಚ	ನನ್ನೊಡೆಯ ನಾನ್ಯಾಕೆ ಕೆಟ್ಟ. ಕಾಕನಕೋಟೆಗೆ ಬಂದು ಕಂದಾಯ ತೆಗೆಯೋರು ಕೆಟ್ಟ.
ಹೆಗ್ಗಡೆ	ಯಾಕೊ ಬುದ್ಧಿವಂತ, ತೆಗೆದರೇನಾಗತದೆ?
ಕಾಚ	ನಿಮ್ಮವರು ಕಂದಾಯ ತೆಗೆದರೆ ಕಾಕ ಅವರ ಉಸುರು ತೆಗೀತಾನೆ.
ಕರಣೀಕ	ಏನು ಗೌಡರೆ ಇವನ್ನೇ ಮಾತಾಡೋಕೆ ಬಿಟ್ಟಿದೀರಾ?

ಗೌಡ	ನನ್ನೊಡೆಯ, ಅವ ನಮ್ಮ ಬುದ್ಧಿವಂತ, ಅವನು ಹೇಳೋದು ಕೇಳಿರ.
ಕರಣೀಕ	ಯಾತರದಯ್ಯ ಕೇಳೋದು? ಹೆಗ್ಗಡೆಗಳ ಅಪ್ಪಣೆಗೆ ಕಾಕ ಅಂತ ಯಾರನ್ನೋ ಅಡ್ಡ ಹಾಕುತಿದೀರಿ, ಕಾಕ ಅನ್ನೋನು ಇದ್ದರೆ ಕರತನ್ನಿ. ನಾಲ್ಕು ದಿನ ಹೆಗ್ಗಡೆಗಳ ಕೋಟೇಲಿಟ್ಟು ಬುದ್ಧಿ ಕಲಿಸುತೀವಿ.
ಕಾಚ	ಒಡೆಯ ಇದ್ಯಾತರ ಮಾತು? ಕಾಕನ್ನ ಕರತರೋದೇನಂತೆ. ನೀವು ಆಶೆಪಟ್ಟಿರಿ ಆಂತ ತಿಳಿದರೆ ಅವನೇ ಬರತಾನೆ. ಅಂದರೆ ಬರೋಕೆ ಮೊದಲೇ ಕನಸಿನಾಗ ಕಂಡು ಬೆಚ್ಚೇರ ಅಷ್ಟೆ.
ಕರಣೀಕ	ಯಾಕೊ ಬೆಚ್ಚೋದು? ಏನು ಅಂತ ಭಯ?
ಕಾಚ	ಹಂಗಾದರೆ ಅಕೋ ಕಾಕ (ಎಂದು ಕರಣೀಕನ ಹಿಂದುಗಡೆಗೆ ಬೆರಳು ತೋರಿಸುವನು. ಕರಣೀಕನು ಬೆಚ್ಚಿ ಇತ್ತ ಸರಿಯುವನು. ಹೆಗ್ಗಡೆಯೂ ಅವನ ಮಗನೂ ಕೂಡ ಸ್ವಲ್ಪ ಬೆಚ್ಚುವರು. ಅಲ್ಲಿ ಯಾರೂ ಇರುವುದಿಲ್ಲ. ಏನು ನನ್ನೊಡೆಯ ಭಯ ಇಲ್ಲ ಅಂತೀರ. ಬೆರಳು ತೋರಿದರೆ ಬೆದರುತೀರೆ! ಇದಕೇನು ಹೇಳೋದು?
ಹೆಗ್ಗಡೆ	ಅಯ್ಯ, ಗೌಡರೆ, ಇದೇನು ಮಕ್ಕಳಾಟ ಆಯಿತು? ನಿಮ್ಮ ಬುದ್ಧಿವಂತನ ಮಾತು ಸಾಕು. ಆ ಕಾಕನ್ನ ಕರತನ್ನಿ, ಅವನ ಸಂಗಡಲೇ ಮಾತನಾಡೋಣ.
ಗೌಡ	ಏನು ಕಾಚ?
ಕಾಚ	ಆಗಲಿ ಗೌಡರೆ, ಕಾಕ ಊರಾಗೆ ಇದಾನೋ ಇಲ್ಲೋ, ಎಂದು ಬರುತಾನೋ ನೋಡಿ ಹೇಳೋಣಂತೆ.

ಗೌಡ	ಆಗಲಿ ಒಡೆಯ ನೋಡಿ ಹೇಳುತೀವಿ.
ಕಾಚ	ಇವರು ಇಲ್ಲೇ ನಾಲ್ಕು ದಿನ ಇರಬೇಕಾದೀತು.
ಗೌಡ	ಒಡೆಯರು ಇಲ್ಲೇ ನಾಲ್ಕು ದಿನ ಇರಬೇಕಾದೀತು.
ಹೆಗ್ಗಡೆ	ನಾಲ್ಕು ದಿನ ಇರೋಕಾಗುತದೋ ಇಲ್ಲೋ. ನಾಳೆ ನಾಡಿದ್ದು ಇರತೀವಿ. ಅಷ್ಟರಲ್ಲಿ ಈ ಮಾತು ಮುಗಿಸಿ ರಾಜಪಾಲು ಸಲ್ಲಿಸಿ.
ಗೌಡ	ನೋಡತೀವಿ ಒಡೆಯರೆ.
ಹೆಗ್ಗಡೆ	ಹಾಗಾದರೆ ನಾಳೆ ನಾಡಿದ್ದರಲ್ಲಿ ಇಲ್ಲಿಗೆ ಹೇಳಿಕಳುಹಿಸಿ.
ಗೌಡ	ಆಯಿತು ನನ್ನೊಡೆಯ. (ಎಂದು ಇವರು ಇತ್ತ ಅವರು ಅತ್ತ ಹೊರಡುವರು. ತನ್ನನ್ನು ಅವಮಾನಪಡಿಸಿದನಲ್ಲಾ ಎಂದು ಕೋಪದಿಂದ ಕರಣೀಕನು ಕಾಚನ ಕಡೆಗೆ ದುರುಗುಟ್ಟಿಕೊಂಡು ನೋಡುತ್ತಾ ಮರೆಯಾಗುವನು. ಕಾಚನು ಏನೂ ಅರಿಯದವನಂತೆ ಆಕಾಶವನ್ನು ನೋಡುತ್ತ ತನ್ನ ದಾರಿ ಹಿಡಿಯುವನು.)

[ಕಾಕನಕೋಟೆಯ ಕಾಡಿನಲ್ಲಿ. ಕುರುಬರ ಒಂದು ಹಾಡಿ. ತರುಣರ ಚಾವಡಿಯ ಮುಂದೆ. ದೊಡ್ಡವರು ಕೆಲವರು ಕುಳಿತಿದ್ದಾರೆ; ಕಾಚ ಅಲ್ಲಿದಾನೆ. ಹೆಣ್ಣುಮಕ್ಕಳು ನಾಲ್ವರು ಕೋಲಾಟ ಆಡುತ್ತಾರೆ.]

ಹೆಣ್ಣುಮಕ್ಕಳು	(ಹಾಡುತ್ತಾರೆ) ಕರಿಹೈದ ಹುಟ್ಟಿದಾ ತಿಂಗಳು ದಿನದಮ್ಯಾಲೆ ಅವರವ್ವ ಒಂದು ದಿನ ಕಾಡೀಗೆ ಹೊಂಟಾಳೆ; ಗುಡಲಲ್ಲಿ ಕಂದನ್ನ ಒಬ್ಬನ್ನ ಬಿಟ್ವಾಳೆ, ಹಸುಳೇನ ಮಾದೇಶ್ವರನ ಕೈಲಿ ಇಟ್ವಾಳೆ; ಹಾಡೀಯ ದೇವರೇ ಬೂಡೀನ ಬಗವಂತ ನಿನ್ನ ಈ ಕಂದನ್ನ ನೀನೆ ನೋಡಿಕೊ ಅಂತ, ಗೆಣಸನ್ನ ತಿರಿಯಾಕೆ ಕಾಡೀಗೆ ನಡದಾಳೆ; ಎಳಗೂಸು ಒಬ್ಬೊಂಬಿಯಾಗದೇ ಆ ವ್ಯಾಳೆ; ಮಾದೇಶ್ವರನ ಮಗ ಹಸುಗೂಸು ಕರಿಹೈದ ಗುಡಲಲ್ಲ ಒಂಟಿಯಾಗಿದ್ದ ಚೆಲುವ ಮೈದ. ಕರಿಹೈದನೆಂಬೋರು ಮಾದೇಶ್ವರಗೆ ಶರಣು ಮಾದೇಶ್ವರಗೆ ಶರಣು, ಮಾದೇಶ್ವರಗೆ ಶರಣು ॥ ಗುಡಲಲ್ಲಿ ಕರಿಹೈದ ಮಲಗಿರಲು ಒಬ್ಬೊಂಟ ಕಾಡಿನಲಿ ಹುಲಿರಾಯ ಸುತ್ತಿ ಸುಳಿಯಲು ಹೊಂಟ,

	ಕಾಡಿನಾ ದಣಿಯವನು ಹತ್ತು ಹೆಜ್ಜೆಯ ಗಂಡು, ಅವನೆದುರು ಯಾರದೂ ಇಲ್ಲ ಇಷ್ಟೂ ಪುಂಡು. ಹಾಡೀಗೆ ಬಂದು ಹುಲಿರಾಯ ಬೂಡನು ಹೊಕ್ಕ, ಮನೆ ಕಾಯುತಿರುವಂತ ಮಗನ ನೋಡಿದನಕ್ಕ; ಕೂಸು ಮಲಗಿದ ಬದಿಗೆ ಬಂದು ಮೂತಿಯ ಮೂಸಿ ಉಳಿದೆಲ್ಲ ಊಟ ಏನ ಎಳೆಯ ಹಸುಳೆಯೆ ವಾಸಿ, ಈವತ್ತು ಇಲ್ಲಿ ದೊರಕಿತ್ತು, ಒಳ್ಳೇ ಆಯ, ಅಂತ ಬಾಯನ್ನ ಚಪ್ಪರಿಸಿದನು ಹುಲಿರಾಯ, ಕರಿಹೈದನೆಂಬೋರು ಮಾದೇಶ್ವರಗೆ ಶರಣು ಮಾದೇಶ್ವರಗೆ ಶರಣು, ಮಾದೇಶ್ವರಗೆ ಶರಣು ॥ ಹುಲಿರಾಯ ಮೊಗವಿಡಲು ಕರಿಹೈದ ಹಸುಗೂಸೆ, ಪುಟ್ಟ ಎಡದಾ ಕೈಲಿ ಹಿಡಿದಾ ಅವನ ಮೀಸೆ; ನನ್ನ ಮೀಸೆಯ ಮುಟ್ಟತಾನೆ ಏನಿದು ಕೆಚ್ಚು, ಅನ್ನುತ ಹುಲಿರಾಯ ಮುನಿದ ಹುಚ್ಚು ಹುಚ್ಚು; ಮುನಿಯುತ ಹುಲಿರಾಯ ಕೆರಳಿ ಬಾಯನು ಬಿಟ್ಟ; ಕರಿಹೈದ ಬಾಯೊಳಗೆ ಬಲದ ಕೈಯನು ಇಟ್ಟ; ಮೀಸೇನ ಬಿಡಿಸಿಕೊಳ್ಳೋಣೆ ಅದು ಬಾರದು ಪುಟ್ಟಾನ್ನ ಕೈಯ ಕಡಿವನೆ ಬಾಯಿ ಬಾರದು; ಯಾವ ದೇವರ ಮೆಚ್ಚು ಮಗನೊ ಈ ಕೂಸಂತ

	ಹುಲಿರಾಯ ಏನೇನು ತೋಚದಲ್ಲೇ ನಿಂತ. ಕರಿಹೈದನೆಂಬೋರು ಮಾದೇಶ್ವರಗೆ ಶರಣು ಮಾದೇಶ್ವರಗೆ ಶರಣು, ಮಾದೇಶ್ವರಗೆ ತರಣು ॥ ಎಡಗೈಗೆ ಮೀಸೇನು ಬಲದ ಕೈಗೆ ಬಾಯ ತೆತ್ತವನು ಬೆಚ್ಚಂತೆ ನಿಂತಿರಲು ಹುಲಿರಾಯ, ಕರಿಹೈದನವ್ವಯ್ಯ ಗೆಣಸನ್ನ ತಿರಿದೋಳೆ ಹೊತ್ತು ಹೋಯಿತು ಅಂತ ಬೂಡೀಗೆ ಬರುತಾಳೆ; ಬೂಡೀನ ಒಳಕಡೆಗೆ ಒಂದು ಹೆಜ್ಜೆಯನಿಕ್ಕಿ ಹತ್ತೆಜ್ಜೆ ಹುಲಿರಾಯನನ್ನ ಕಂಡಳು ಸೊಕ್ಕಿ; ಮಾದೇಶ್ವರಾ ನಿನ್ನ ಮಗನ ಕಾಯಿಕೊ ಅಂತ ಹುಯಿಲಿಟ್ಟಳೋ ಅಪ್ಪ ಬಗವಂತ ಬಗವಂತ; ಹುಯಿಲು ಕೇಳಿದ ಕೂಸು ಮೀಸೆ ಬಾಯನ ಬಿಟ್ಟ ಹುಲಿರಾಯ ನಿಲ್ಲದೆ ನಡೆದ ಕಾಡಿಗೆ ನೆಟ್ಟ. ಕರಿಹೈದನೆಂಬೋರು ಮಾದೇಶ್ವರಗೆ ಶರಣು ಮಾದೇಶ್ವರಗೆ ಶರಣು, ಮಾದೇಶ್ವರಗೆ ಶರಣು॥ ಕರಿಹೈದನವ್ವನಾ ಹೆಸರೆಂದು ನಿಲ್ಲಲಿ, ಅವನ ಬಳಿಯೆಂದೆಂದು ಒಳ್ಳಿದನು ಮೆಲ್ಲಲಿ; ಅವನ ಹೆತ್ತಾ ಕಾಡು ಎಂದೆಂದು ಚಿಗುರಲಿ, ಅವನ ಬಳಿ ಎಂದೆಂದು ಮಿಕ್ಕಿರಲಿ ಹೊಗರಲಿ;

	ಅವನ ಹಾಡಿಗಳಿರಲಿ ಎಂದೆಂದು ಸೊಗದಲಿ, ಅವನ ಬಳಿಗೆಂದೆಂದು ನಗೆಯಿರಲಿ ಮೊಗದಲಿ; ಅವನ ಹೊಗಳುವ ಹಾಡು ಎಂದೆಂದು ಹಾಡಲಿ, ಅವನ ಬಳಿ ಎಂದೆಂದು ಹಬ್ಬವನು ಮಾಡಲಿ; ಕರಿಹೈದನಪ್ಪಾಜಿ ಮಾದೇಶ್ವರಗೆ ಶರಣು. ಮಾದೇಶ್ವರಗೆ ಶರಣು ಮಾದೇಶ್ವರಗೆ ಶರಣು. ಕರಿಹೈದನೆಂಬೋರು ಮಾದೇಶ್ವರಗೆ ಶರಣು ಮಾದೇಶ್ವರಗೆ ಶರಣು, ಮಾದೇಶ್ವರಗೆ ಶರಣು ॥
ಗೌಡ	ಬಂದು ಕಾಕನಿಗೆ ಮೊಕ್ಕಿ ನಡೀರ ಇನ್ನು. ನಮಗೆ ಬೇರೆ ಕೆಲಸ ಅದೆ.
ಹುಡುಗರು	ನಾವಾಡೋದು ಬ್ಯಾಡಾ ಈ ಹೊತ್ತು?
ಗೌಡ	ಏನು, ಕಾಚ?
ಕಾಚ	ಈವೊತ್ತು, ಬೇಡೇಳು, ಹಂಗಾದರೆ. (ಎಲ್ಲರೂ ಬಂದು ನಮಸ್ಕಾರ ಮಾಡುತ್ತಾರೆ.) ಓಹೊ ಮೋನಿ ಬಂದಾಳೆ. ಏನವ್ವಾ, ಯಾವಾಗ ಬಂದೆ? ನಾಕ ಎಲ್ಲಿ? (ಹುಡುಗರ ಮಧ್ಯದಿಂದ ಒಬ್ಬನು ಮುಂದಕ್ಕೆ ಬರುತ್ತಾನೆ. ಅವನು ನಾಕ)
ನಾಕ	ಇಕೊ ಇಲ್ಲಿದೀನಿ ಮಾವಯ್ಯ.
ಕಾಚ	ಗುಡಲು ಮಾಡಿದಾರೊ ಹೈಕಳು?

ಗೌಡ	ಸರ್ಕ್ಯೆ ಇವರಿಬ್ಬರೂ ಆಡುತಿದ್ದ ಆಟದಾಗೆ ಮೂರು ತಿಂಗಳ ಹಿಂದೇನೆ ಕಾಡಿಗೆ ಹೊಂಡತಾರೆ ಅಂತಿದ್ದಿವಿ. ಅದೇನೊ ಈಸು ದಿನ ತಡೀತು. ಓಡೋಕೆ ಮೊದಲೇ ಇವರೇ ತಟ್ಟಿ ತಡಿಕೆ ಸೇರಿಸಿದರು.
ನಾಕ	ಇನ್ನು ಈ ಹೈಕಳು ಮಾಡದೀರ ಹೋದರೆ ಏನು ಗತಿ ಅಂತ ನಾನೂ ಮೋನಿ ತರಗು ತಡಿಕೆ ಸೇರಿಸಿಟ್ಟು ಹೋದಿವಿ. ಬರೋ ಹೊತ್ತಿಗೆ ಒಂದು ಗುಡಲು ಆಗಿತ್ತು. ಇಲ್ಲದೀರಾ ಇದ್ದರೆ ಇವರೆಲ್ಲ ಮಾಡಿರೋರೇನು? ಮೊಲ್ಲೆ ಮನಸುಮಾಡಿ ಮೋನೀಗೆ ಅಂತ ಅಟ್ಟಕೂಳು ಕಳುಹಿಸಿದ್ದಳು. ಸ್ವಲ್ಪ ಉಂಡು ಬದುಕಿಕೊಂಡಿವಿ.
ಮೊಲ್ಲೆ	ಮತ್ತಿನ್ನು ಪುಂಡ ಮಿಂಡಿ ಗಂಡ ಹೆಂಡಿರಾಗಿ ಬಂದರೆ ಇಷ್ಟು ಅಟ್ಟ ಕೂಳಿಲ್ಲದೆ ಹೋದಾತ?
ಮೋನಿ	ನಾಳೆ ನನ್ನಣ್ಣಾ ಮೊಲ್ಲೆ ಕಾಡಿಗೆ ಓಡಿಹೋಗಿ ತಿರಿಗಿ ಬಂದಾಗ ನಾನು ಕೊಡೊಲ್ಲೆ ಅಟ್ಟ ಕೂಳು?
ನಾಕ	ಕಾಕನ ಮಗಳಿಗೆ ಅಟ್ಟ ಕೂಳು ನೀ ಕೊಡ ಒಲ್ಲಿ ಯಾಕೆ? ಊರೇ ಕೊಡುತೀನಿ ಅಂತದೆ. ಏನೋ ಮೋನ, ಎಂದು ಹೋಗುತೀರಾ ಕಾಡಿಗೆ?
ಮೋನ	ಅದೇನೋ ನಾ ಕಾಣೆ. ಮೊಲ್ಲೆ ಹೇಳಬೇಕು, ಏನು ಮೊಲ್ಲೆ?
ಮೊಲ್ಲೆ	(ತಲೆಯನ್ನು ಕೊಡವಿ) ಹೋಗೊರೆಲ್ಲಾ ಹೇಳಿ ಹೇಳಿ ಹೋಗುತಾರೇನೊ? ನೀ ಏನ ಮಾಡೀಯ?

ಗೌಡ	ಹೇಳಿ ಮಾಡೋರುಂಟೇನೊ ಮೋನ? ಹೇಳದಹಂಗೆ ಮಾಡಬೇಕು. ನಾವೆಲ್ಲ ಹಂಗೇ ಮಾಡಿದ್ದು. (ಎಲ್ಲರೂ ನಗುತ್ತಾರೆ) ಇನ್ನು ನಡೀರಾ ಹಂಗಾದಮ್ಯಾಲೆ. ನಮಗೆ ಕೆಲಸ ಅದೆ. (ಎಲ್ಲ ಹೊರಡುತಾರೆ)
ಕಾಚ	(ಮೊಲ್ಲೆಯನ್ನು) ಮೊಲ್ಲೆ (ಎಂದು ಕರೆಯುತ್ತಾನೆ).
ಮೊಲ್ಲೆ	(ಹಿಂದಕ್ಕೆ ಬಂದು) ಏನಪ್ಪಾಜಿ?
ಕಾಚ	ಮೋನ ನಿನ್ನ ಮೆಚ್ಚಿದಾನ?
ಮೊಲ್ಲೆ	ನಾ ಕಾಣೆ, ಅಪ್ಪಾಜಿ.
ಮೋನ	(ಹತ್ತಿರ ಬಂದು) ಹೌದು ಕಾಕ, ಮೆಚ್ಚಿ ಜೊತೆಯಾಗು ಅಂದಿದೀನಿ.
ಕಾಚ	ಅದಕೇನಂದವ್ವ? (ಮೊಲ್ಲೆ ಏನನ್ನೂ ಹೇಳುವುದಿಲ್ಲ.)
ಮೋನ	ಏನೂ ಅಂದಿಲ್ಲ.
ಕಾಚ	ಯಾಕೆ ತಾಯಿ.
ಮೊಲ್ಲೆ	ನನಗ್ಯಾಕೊ ಒಲ್ಲದು ಅಪ್ಪಾಜಿ.
ಕಾಚ	ಹಂಗಂದಮ್ಯಾಲೆ ಈ ಮಾತು ಆಡಲೇಬಾರದು. ಏನೋ ಮೋನ?
ಮೋನ	ಇಲ್ಲ ನಾನು ಆಡಲಿಲ್ಲ ನನ್ನ ತಂಗಿ ಇರಲಾರದೆ ಏನೋ ಹೇಳ್ಯಾಳೆ. ನಾವು ಯಾರೂ ಈ ಮಾತು ಆಡೋಲ್ಲ.
ಕಾಚ	ಅದು ಜಾಣ, ಗಂಡಾಗಲಿ ಹೆಣ್ಣಾಗಲಿ ಮನಸು ಕಾಯಬೇಕು. ಮನಸು ಕಾಯಬೇಕು, ಮನಸು ಬೆರೆಯಬೇಕು. ಮನಸು ಬೆರೆತಮೇಲೆ ಕಾಡಿಗೆ ಹೋಗಬೇಕು. ಕಾಡಿಗೆ ಹೋಗಿದ್ದು ಬೂಡಿಗೆ

	ಬರಬೇಕು. ಬೂಡಿಗೆ ಬಂದಮೇಲೆ ಜೊತೆಯಾಗಿ ನಡೀಬೇಕು. ಒಬ್ಬರು ಮೆಚ್ಚಿದೀವಿ ಅಂದರೆ ಸಾಲದು; ಇಬ್ಬರೂ ಮೆಚ್ಚಬೇಕು. ಇಬ್ಬರೂ ಮೆಚ್ಚಿದ ಮೇಲೆ ಮೈ ಕೂಡಬೇಕು. ಮಿಗ ನೋಡ ಹಕ್ಕಿ ನೋಡು, ಆಕಾಸ ಬೂಮಿ ನೋಡು, ಅಂತ ಹಿರೇರು ಹೇಳ್ಯಾರೆ. ತಿಳೀತೆ ಮೋನ?
ಮೋನ	ತಿಳೀತು ಕಾಕ.
ಕಾಚ	ತಿಳೀತೆ ಮೊಲ್ಲೆ?
ಮೊಲ್ಲೆ	ತಿಳೀತು ಅಪ್ಪಾಜಿ.
ಕಾಚ	ನನ್ನ ಮಗಳು ಅಂತ ನೀನು ಮೋನನ್ನ ಹಂಬಲುಪಡಿಸೋದು ಬಾರದು.
ಮೊಲ್ಲೆ	ಇಲ್ಲ ಅಪ್ಪಾಜಿ.
ಕಾಚ	ಒಲ್ಲದೀರ ಇದ್ದರೆ ಒಲ್ಲೆ ಅನ್ನಬೇಕು. ಸುಮ್ಮಕಿರಬಾರದು. ಸುಮ್ಮತಿದ್ದರೆ ಗಂಡು ಪರದಾಡುತಾನೆ, ಬೂಡು ಆಡಿಕೋತದೆ. ಏನು?
ಮೊಲ್ಲೆ	ತಿಳೀತು ಅಪ್ಪಾಜಿ.
ಕಾಚ	ಸರಿ ಇನ್ನು ನಡೀರ. (ಅವರು ಹೋಗುವರು) ಏನು ಗೌಡಣ್ಣ ಇನ್ನು ಈ ಮಾತಾಡೋಣೆ? ಮಾವ ಬರುತಾನಂದ್ಯೆ; ಎಲ್ಲಿ?
ಗೌಡ	ಹಕ್ಕಳು ಹೋದಮೇಲೆ ಕೂಗು, ಬರುತೀನಿ, ಅಂದ. ಲೋ, ಮೋನ, ಮಾವನ್ನ ಒಸಿ ಬರಹೇಳು.

ಮೋನ	(ದೂರದಿಂದ) ಹೇಳತೀನಿ ಮಾವ.
ಗೌಡ	ಹೆಗ್ಗಡೆ ಬಂದು ನಮ್ಮನ್ನ ಕಾಡೋವ್ಯಾಳ್ಯಾಕ್ಕೆ ಸರಿಯಾಗಿ ಇಲ್ಲಿ ಈ ಮಾವ ಏನೋ ಮಾತು ತೆಗೆದದಾನಲ್ಲ. ಇದಕೇನು ಮಾಡೋದು?
ಕಾಚ	ಮಾಡೋದು ಏನ. ತೆಗೆದ ಮಾತು ಆಡೋದು. ಏನಾದರೂ ಆಗಬೇಕೆಂದರೆ ಆದರೆ ಕೊಡೋದು.
ಗೌಡ	ಆದರಲ್ಲವೆ ಕೊಡೋದು? ಸತ್ತೋಳನ ತಾ ಅಂತಾನೆ.
ಕಾಚ	ಯಾಕೆ, ಆ ಮಾತೂ ಎತ್ತತಾನೇನು?
ಗೌಡ	ಸರ್ರ್ಯೆ, ಅವ ಎತ್ತದ ಮಾತಿಲ್ಲ.
ಕಾಚ	ಆಯಿತು ಕೇಳೋಣಂತೆ. (ಅಸಮಾಧಾನದ ದೃಷ್ಟಿಯಿಂದ ನೋಡುತ್ತ ಮಾವನು ಪ್ರವೇಶಿಸುತ್ತಾನೆ.)
ಗೌಡ	(ಕಾಚನಿಗೆ ಅವನ ರೀತಿಯನ್ನು ಸೂಚಿಸುತ್ತ? ಬಾ ಮಾವಯ್ಯ.
ಮಾವ	ಬಂದೀ ಕಾಣಪ್ಪ.
ಗೌಡ	ಅದೇನೋ ಹೇಳಬೇಕು ಅಂದ್ಯೆ ಕಾಕನಕೂಟೆ.
ಮಾವ	ಹೌದು ಹೇಳಬೇಕು. ಕೇಳುತಾನೋ ನಿಮ್ಮ ಕಾಕ?
ಗೌಡ	ಓ ಕೇಳೋದು ಅಂತಲೇ ಕುಂತವ್ನೆ, ನಾನೂ ಕುಂತದೀನಿ.
ಮಾವ	ಮತ್ತೆ ಅವ ಏನೂ ಹೇಳೊಲ್ಲ.
ಕಾಚ	ನಾ ಹೇಳೋದು ಏನು ಮಾವ? ನೀ ಹೇಳೋದು, ನಾವು ಕೇಳೋದು, ಅಂತ ಅಲ್ಲೆ ಇಲ್ಲಿ ಕಲೆತಿರೋದು?

ಮಾವ	ಹೆಗ್ಗಡೆಗಳು ಬಂದರಂತೆ, ಕಂದಾಯದ ಮಾತು ಆಡಿದರಂತೆ, ಹೌದೊ?
ಗೌಡ	ಹೌದು.
ಮಾವ	ಹಿಂದಲಾ ಕಾಲಕ್ಕೆ ಇಂತಾ ಮಾತು ಬಂದಾಗ ನನ್ನ ಕರೆದು ಕೇಳುತಾ ಇದ್ದಿರಿ. ಈಗ ಯಾಕೊ ಕೇಳಲ್ಲ.
ಗೌಡ	ನಿನ್ನ ಕರೀರಿ ಅಂತ ಕಾಕ ಹೇಳಿದ. ನೀ ಆ ಹೊತ್ತಿಗೆ ಸರಿಯಾಗಿ ಎತ್ತಾಗೋ ಹೋಗಿದ್ದ್ಯೆ?
ಮಾವ	ಒಳ್ಳೇತಾತು. ಮುಂದಾಗಿ ಹೇಳಿದ್ದರೆ ನಾನ್ಯಾಕೆ ಎತ್ತಾಗೊ ಹೋಗುತಾ ಇದ್ದಿ? ನೀವು ಹೇಳಲ್ಲ. ನಾ ಇರಲ್ಲ. ಹೆಗ್ಗಡೆಗಳ ಕಾಣಿಕೆ ಕೊಡೋದು ಬೇಡ ಅಂತ ನಿಮ್ಮ ಕಾಕ ಹೇಳತಾ ಅದಾನಂತಲ್ಲ. ನಮ್ಮ ಕುರುಬರು ಈ ಕಾಡಾಗೆ ಇರೋದೇ ಬಿಡೋದೇ? ಏನು ಅಂತ ಏರುಪಾಡು.
ಗೌಡ	ಬ್ಯಾಡ ಅನ್ನಲಿಲ್ಲೇ? ಹಾಡೀ ಗೌಡರೆಲ್ಲ ನಾಳೆ ಕಲೆತು ಆ ಮಾತು ಆಡಬೇಕು ಅಂತ ಮಾಡ್ಯದಾರೆ.
ಮಾವ	ಸರ್‍ಯೆ, ಆಡಿರ. ಅಂದರೆ, ಕಾಕ ಮೈಸೂರು ಕಂಡೋನು ಅಂತ ಹೆಗ್ಗಡೆ ಇಲ್ಲ ಅನಬೇಡಿರ.
ಗೌಡ	ಕಾಕನೇ ಹಂಗನಲಿಲ್ಲಪ್ಪ.
ಮಾವ	ಸರ್‍ಯೆ. ಕಾಕ ಅಂದನೋ ಇಲ್ಲೋ ಹಕ್ಕಳು ಅಂತಾರೆ. ಹೆಗ್ಗಡೆ ಏನು ಗಿಗ್ಗಡೆ ಏನು ಅನ್ನೋದು ನನ್ನ ಕಿವೀಗೆ ಬೀಳತಾ ಅದೆ. ಹಿಂದಲ

	ಕಾರಾಗೆ ಅಂದರು ಮಾವ ಬೇಡ ಕಾಕ ಇರಲಿ ಅಂತ. ಈಗ ಅಂತಾ ಅದಾರೆ ಹೆಗ್ಗಡೆ ಬೇಡ ಕಾಕ ಇರಲಿ ಅಂತ. ಕಾಕನ್ನ ತಕೊಂಡುಹೋಗಿ ದೇವರು ಅಂದರೆ ಆಗೋಲ್ಲ. ನನ್ನ ಕಳುವಿದಹಂಗೆ ಹೆಗ್ಗಡೇನ ಕಳುವಬೇಡಿರ.
ಗೌಡ	ಕಾಕನ್ನ ದೇವರು ಅನಲಿಲ್ಲ. ಅಂದರೆ ಕಾಕ ಹಾಡೀಗೆ ಬಹಳ ಒಳ್ಳೇದ ಮಾಡಿದಾನೇ?
ಮಾವ	ಒಳ್ಳೇತ ಮಾಡಿದ್ದೇನ? ನನ್ನ ಬೂಡಿನ ಬಟ್ಟೆಗೆಡಿಸಿದ. ಈಗ ಹಾಡೀನ ಬಟ್ಟೇ ಕೆಡಸತಾ ಇದಾನ.
ಕಾಚ	ಏನು ಮಾವ ನಾ ಬಟ್ಟೆಗೆಡಿಸಿದ್ದು?
ಮಾವ	ಯಾಕ, ನೀ ಕೆಡಿಸಿದ ಬಟ್ಟೆ ನಿನಗೆ ತಿಳೀದಾಹೋಯ್ತು?
ಕಾಚ	ಹೇಳಪ್ಪ ಕೇಳೋಣಂತೆ.
ಮಾವ	ಎಲಾ ನೀ ಎಂಟು ಕಾರಿನ ಹೈದ ಕಾಡು ಬಿಟ್ಟು ಹೊಂಟು ಹೋದೆ. ಏನಾದೆ ಅನ್ನೋದು ಯಾರಿಗೂ ತಿಳಿದಿರಲಿಲ್ಲ. ಹದಿನೈದು ಕಾರು ಬಿಟ್ಟುಕೊಂಡು ತಿರಗಾ ಬೂಡಿಗೆ ಬಂದು ನಾನೂ ಕುರುಬರ ಹೈದ ಅಂತ ಸೇರಿಕೊಂಡೆ. ಮುತ್ತು ಮಣಿ ತೋರಿಸಿ ಬೂಡುಗಳನ್ನೆಲ್ಲ ಕೆಡಿಸಿದೆ….
ಕಾಚ	ಕೆಡಸಲಿಲ್ಲ ನಾನು. ಇಲ್ಲದ್ದ ಆಡಬ್ಯಾಡ.
ಮಾವ	ಇಲ್ಲದ್ದ ನಾ ಆಡಲ್ಲ. ಆದದ್ದನ ಹೇಳುತೀನಿ ಕೇಳು. ನನ್ನ ಜೊತೆ ಹೆಂಡರ ನೀನು ಬೆಳ್ಳಿಸಿ ಕರಕೊಂಡ್ಯೋ ಇಲ್ಲೊ?

ಕಾಚ	ಅವಳು ಸತ್ತು ಈಗ ಮಣ್ಣಿನ ಮರೆಯಾಗದಾಳೆ. ಅವಳ ಹೆಸರು ಅನ್ನೋದು ಅವಳ ಮಾತು. ಇವತ್ತು ನಾವು ಅವಳ ಮಾತು ಯಾಕೆ ಎತ್ತಬೇಕು?
ಮಾವ	ಅವಳ ಮಾತು ಬೇಡ. ನಿನ್ನ ಮಾತು ಹೇಳು. ನೀನು ಬೆಳ್ಳಿಸಿದ್ದು ಕರಕೊಂಡದ್ದು ಉಂಟೋ ಇಲ್ಲೋ?
ಕಾಚ	ಗೌಡಣ್ಣ ಇದು ನನ್ನದು ಮಾವನದು ಇಬ್ಬರದೇ ಮಾತಾಯಿತು.
ಮಾವ	ಎಲವೋ ನೀ ನನಗೆ ಮಾವ ಮಾವ ಅಂತ ಮರುವಾದಿ ಬಾಸಿಂಗ ಕಟ್ಟಬೇಡ ಕಾಣ. ಇಬ್ಬರದೇ ಯಾಕೆ ಮಾತು? ಊರು ಕೇಳಲಿ ಹೇಳು.
ಕಾಚ	ಊರು ಕೇಳಲಿ ಅಂತೀಯಾ?
ಮಾವ	ಹೌದು ಕೇಳಲಿ ಹೇಳು.
ಕಾಚ	ಸರಿ, ಹಂಗಾದರೆ ಹೇಳು ಇನ್ನೂ ನೀ ಹೇಳೋದನೆಲ್ಲ. ಕೇಳಿಬಿಟ್ಟು ಆಮೇಲೆ ಹೇಳೋಣಂತೆ.
ಮಾವ	ಆವೊತ್ತು, ನನ್ನ ಹೆಣ್ಣನ ಬೆಳ್ಳಿಸಿ ಕರಕೊಂಡೆ. ನಾಲ್ಕು ಕಾರ ಹಿಂದೆ ಬಂದವನೆ ನೀನೇ ದೇವರಗುಡ್ಡ ಅಂದೆ, ನನ್ನ ಆಚೇಗೆ ದೂಡಿದೆ. ನಿನ್ನ ಹೊನ್ನು ತೋರಿದೆ, ಹಾಡೀನ ಮರುಳು ಮಾಡಿದೆ. ತೊಗಟೆ ಬಿಟ್ಟದ್ದಾಯಿತು; ತೊಗಲು ಬಿಟ್ಟದ್ದಾಯಿತು; ಕಂಬಳಿ ಬಿಟ್ಟದ್ದಾಯಿತು. ಇನ್ನು ಬಿಳೇ ಬಟ್ಟೆ ಮಾತ್ರ ಯಾಕೆ ಬಣ್ಣದ ಬಟ್ಟೇನೂ ಉಡಿರ ಅಂದು ಹಾಡೀ ಜನಕೆಲ್ಲ ನೀನು ನಿನ್ನ ಮೈಸೂರು ಮಂಕುಬೂದಿ ಚೆಲ್ಲಿದೆ.

	ಈಗ ಅವರಿಗೆ ಹೇಳುತಾ ಇದೀಯಾ ಹೆಗ್ಗಡೆ ಅಲ್ಲ ಅಂತ; ನೀನೆ ಹೆಗ್ಗಡೆ ಆದಹಂಗೆ. ಈ ಬಳಿ ಏನು ಬಾಳಬೇಕು ಅಂತಲಾ ಬೇಡ ಅಂತಲಾ ನಿನ್ನ ಮನಸು?
ಕಾಚ	ಆ ಮಾತು ನಾಳೆ ಬಳೀಮಂದಿ ಕಲೆತಾಗ ಅವರನ್ನೆ ಕೇಳೋಣಂತೆ. ಇದಕ್ಯಾಕೆ ಕದದು? ಏನು ಗೌಡಣ್ಣ ಇದೆಲ್ಲಾನೂ ನಾಳೆ ಮಂದೀಗೆ ಹೇಳೋಣ. ಅವರು ಏನಂತಾರೊ ಕೇಳೋಣ. ಮಾವನೂ ಬರಲಿ ಹೇಳಲಿ. ನಾನೂ ಹೇಳತೀನಿ. ನೀನೂ ಹೇಳು. ಅದಾದಮೇಲೆ ಅವರು ಹೇಳಿದಂತೆ ಆಗಲಿ. ಏನಂತೀಯಾ?
ಗೌಡ	ಈ ಮಾತೆಲ್ಲ ಮಂದಿಗೆ ಹೇಳಬೇಕು?
ಕಾಚ	ಮಾವ ಹೇಳತಾನೆ ಹೇಳೋಣ ಅಂತ; ಹೇಳೋಣ. ಮಂದೀ ಎಲ್ಲಾನೂ ಕೇಳಿ ಹೆಂಗೆ ಮನಸುಮಾಡುತಾರೋ ಹಂಗೆ ಆಗಲಿ ಏನು ಮಾವ?
ಮಾವ	ಎಲಾ ನಿನ್ನ ಮಾವನೆ! ಆಗಲಿ ಏಳು. ಹೇಳೋಣ, ನೋಡೋಣ.
ಕಾಚ	ಆಗಲಿ. (ಎಂದು ಏಳುವನು. ಮೂವರೂ ಹೋಗುವರು.)

೩

[ಅದೇ ಸ್ಥಳ. ಮಾರನೆಯ ಮಧ್ಯಾಹ್ನ. ಹಾಡಿಗಳ ಮುಖಂಡರು ಕೆಲ ಹೆಂಗಸರು ಹುಡುಗರು ಹುಡುಗಿಯರು ಇದಾರೆ. ಗೌಡ ಮಾವ ಒಂದು ಕಡೆ ಕುಳಿತಿದ್ದಾರೆ. ಕುಣಿಯುತ್ತಿದಾನೆ. ಒಬ್ಬ ಮುದುಕನು ಸಣ್ಣ ತಮಟೆ ಹೊಡೆಯುತ್ತಿದಾನೆ.]

ಮೋನ	ಒಂದು ದಿನ ಕರಿಹೈದ ಕಾಡಲ್ಲಿ ಅಲೆದಾನೊ, ಅಲೆಯೂತ ಹತ್ತ್ವೆಜ್ಜೆ ಹುಲಿಯೊಂದ ಕಂಡಾನೊ; ಹುಲಿರಾಯ ಕಾಡಲ್ಲಿ ಧೀರಾಗಿ ನಡೆಯೂತ ಎದುರೀಲಿ ಹೈದನ್ನ ಝುಗ್ಗಂತ ನೋಡ್ಯಾನೊ; ಝುಗ್ಗಂತ ನೋಡೂತ ನಿಂತಲ್ಲೆ ನಿಂತಾನೊ ನಿಂತಲ್ಲೆ ನಿಂತೋನು ಬಾಲಾನ ಮಿಸುಕ್ಯಾನೊ; ಬಾಲಾನ ಮಿಸುಕಾದೆ ಕಿಮಿಯನ್ನು ನಿಮಿರ್ಯಾನೊ ಹೈದನಾ ಮೊಕದಲ್ಲಿ ನೋಟಾನ ನಟ್ಟಾನೊ. ಬಿಡು ಬಟ್ಟೆ ಬಿಡು ಬಟ್ಟೆ ಅನ್ನೂತ ಇದೆ ಕಣ್ಣು; ಬಿಡನಲ್ಲ ಬಿಡನಲ್ಲ ಅನ್ನೂತ ಇದೆ ಜೀವ. ಬಿಡು ಬಟ್ಟೆ ಬಿಡನಲ್ಲ ಬಿಡು ಬಟ್ಟೆ ಬಿಡನಲ್ಲ, ಬಿಡನಲ್ಲ ಬಡುವೊಲ್ಲ ಬಿಡಲಿಲ್ಲ ಬಿಡಲಿಲ್ಲ; ಬಿಡಲಿಲ್ಲ ಬಿಡಲಿಲ್ಲ; ಅಂದಾನೊ ಹುಲಿರಾಯ. ಹೈದನ್ನ ನೋಡೂತ ನೋಡೂತ ಇದ್ದಾನೊ, ನೆಟ್ಟನ್ನ ನೋಟಾನ ಹಿಂದಕ್ಕೆ ಸೆಳೆದಾನೊ,

	ಹತ್ತ್ವೆಜ್ಜೆ ಒಡಲನ ಒಂದ್ವೆಜ್ಜೆ ಮಾಡ್ತ್ಯಾನೊ, ಒಂದ್ವೆಜ್ಜೆ ಒಡಲಾಗಿ ಚಿಮ್ಮಂತ ಚಿಗಿದಾನೊ; ಚಿಮ್ಮಂತ ಚಿಗಿದೋನು ಅಡವ್ಯಾಗೆ ಕೆಡೆದಾನೊ, ಅಡವ್ಯಾಗೆ ಕೆಡೆದೋನು ಎತ್ತಾಗೊ ನಡೆದಾನೊ, ಕಾಡಿನದು ಈ ಬಟ್ಟೆ ಹೈದನದು ಅಂದಾನೊ, ಕರಿಹೈದ ನಡೆಯೂವ ಬಟ್ಟೆಲ್ಲ ಹೈದಂದು, ಹೈದ ನಡೆಯುವ ಹೊತ್ತು ಆ ಬಟ್ಟೆ ನನತಲ್ಲ, ಹೈದನ ಬಟ್ಟೆಗೆ ಹುಲಿರಾಯ ಅಡ್ಡಲ್ಲ, ಅನ್ನೂತ ಕಾಡಾಗೆ ಗುಡುಗಿಟ್ಟು ಮೊಳಗ್ಯಾನೊ; ಗುಡುಗಿಟ್ಟು ಮೊಳಗೂತ ಕಾಣದೆ ಮರೆದಾನೊ ಕರಿಹೈದ ಉಸುಕದೆ ಮಿಸುಕದೆ ಇದ್ದಾನೊ ಹುಲಿರಾಯ ಚಿಗಿದಾನೆ ಮುಂದಾಳೆ ನಡೆದಾನೊ ಮುಂದಾಕೆ ನಡೆದಾನೆ........ (ಕಾಚ ಒಂದು ಕಡೆಯಿಂದ ಬರುತ್ತಾನೆ.)
ಗೌಡ	ಮೋನ, ಸಾಕು ಬಿಡಲಾ, ಕಾಕ ಬಂದ. ನಿಲ್ಲಿಸಣ್ಣ. (ಮೋನ ಮಂಗಳ ಕುಣಿದು ನಿಲ್ಲಿಸುತ್ತಾನೆ.)
ಮೋನ	ಕರಿಹೈದ ನಡೆದಂತ ಬಟ್ಟೆಯೆ ಬಟ್ಟೆ; ಕರಿಹೈದ ಆಡಿದ ಮಾತೇ ಮಾತು; ಕರಿಹೈದ ಹಾಕಿದ ಕಟ್ಟೆಯೇ ಕಟ್ಟೆ; ಕರಿಹೈದ ನೋಡಿದ ಗಿಡವೆಲ್ಲ ಕಾತು

	ಕಾಯಾತು ಹಣ್ಣಾತು ಬಳ್ಳ್ಯೆಲ್ಲ ಹೂತು; ಬಳ್ಳ್ಯೆಲ್ಲ ಹೂತು ಕಾಡೆಲ್ಲ ನಾತು. ಹೈದನ ಬಳಿಯೆಲ್ಲ ಎಂದಿಗೂ ಮುಂದಾ ಬಳಿಯೆಲ್ಲ ಎಂದಿಗೂ ಬಾಳಲಿ ಚೆಂದಾ. (ಕುಣಿತ ತಮಟೆ ನಿಲ್ಲುತ್ತವೆ. ಕಾಚನು ಆ ವೇಳೆಗೆ ಗೌಡ ಮಾವ ಇರುವ ಕಡೆಗೆ ಬಂದು ಕುಳಿತುಕೊಳ್ಳುತ್ತಾನೆ.)
ಗೌಡ	(ಮೆಲ್ಲನೆ ಕಾಚನಿಗೆ) ಹೇಳುತೀಯಾ ಮಂದಿಗೆ?
ಕಾಚ	ಹೇಳುತೀನಿ, ಮಾವ ಏನಾರಾ ಹೇಳುತಾನೇ ಕೇಳು.
ಗೌಡ	ಅವನ ಮಾತು ಏನೂ ಬೇಡಾಪ್ಪ. ಮುಂದಿ ಮನಸು ಕದಡಿ ಬಿಡುತಾನ.
ಕಾಚ	ಕದಡಲಿ ಬೇಕಾರೆ. ಅದಕಾಗ್ಯೆ ಗುಡಿಯಾಗೆ ಕೂತಿದ್ದು ಬಂದಿವಿನಿ. ಇವತ್ತು ಏನು ಆದರೂ ಆಯಿತೆ. ಮಂದಿ ಅವನ ಮಾತು ಇರಲ್ಲ ಅಂದರೆ ಹಂಗೇ ಅನ್ನಲಿ. ನಾ ಕಾಡಿಗೆ ಬೇಕಾದರೆ ನಡೀತೀನಿ. ಅಂತೂ ಇವತ್ತು ಎಲ್ಲಾ ಮನಸು ಮಾಡಬೇಕು, ಮುಗಿಸಬೇಕು.
ಗೌಡ	ಯಾಕ, ಕಾಕ, ಅವ ಮಾತಾಡೋದು ಬೇಡ ಅಂತೀನಿ. ಇದರಮೇಲೆ ನಿನ್ನ ಮನಸು.
ಕಾಚ	ಇಲ್ಲ, ನೀ ಬೆದರಬೇಡ ಕೇಳು.

ಗೌಡ	ಸರ‍್ಯಪ್ಪ (ಎಂದು) ಮಾವ, ಮಂದಿ ಎಲ್ಲಾ ಕಲೆತಾರೆ, ನೀ ಹೇಳೋದು ಏನಾರಾ ಇದ್ದರೆ ಹೇಳು, ಆಮೇಲೆ ಕಾಕ ಮಾತನಾಡತೀನಿ ಅಂತಾನೆ.
ಮಾವ	ನಾ ಏನೂ ಹೇಳಲ್ಲ. ನನ್ನ ಇವರು ಬ್ಯಾಡ ಅಂದು ನಾಲ್ಕು ಕಾರು ಆತು. ನಾ ಹೇಳೋದು ನಿಮ್ಮ ಕಾಕನಿಗೆ ಹೇಳಿವಿನಿ. ಅವ ಏನು ಹೇಳುತಾನೋ ಹೇಳಲಿ.
ಗೌಡ	ಕೇಳಿದ್ಯ ಕಾಕ? ನೀನೇ ಹೇಳಬೇಕಂತೆ.
ಕಾಚ	ಆಯಿತು. ಏನರಯ್ಯ, ಬೂಡಿನ ಮಂದಿ ಮುಂದಾಳು ಮಕ್ಕಳು, ಎಲ್ಲಾರೂ ನಾ ಹೇಳೂದ ಕೇಳಬೇಕು. ಕರಿಹೈದನ ಮಕ್ಕಳು ಅಂತಾ ನಾವು ಎಂಟು ಹಾಡಿಯವರು ಇಲ್ಲಿ ಕಲೆತಿದೀವಿ. ನಿಮ್ಮಲ್ಲಿ ನಾ ಒಬ್ಬ ಈಗೆ ಇರುತಿದೀನಿ. ಹೈದನಾಗಿದ್ದು ನಾ ಆನೆಕೂಟೆ ಮೈಸೂರಿಗೆ ಹೋದಿ. ಅಲ್ಲಿ ಆನೆ ಕರಹಟ್ಟಿ ಮಾವುತಿಗರ ನಾಯಕನಾದಿ. ದಿನ ಹೋಗಿ ಬೂಡಮೇಲೆ ಮನಸಾತು, ನಾಲ್ಕು ವರಸದ ಹಿಂದಾಗಿ ಇಲ್ಲಿಗೆ ಬಂದಿ. ನೀವೆಲ್ಲ ನನ್ನ ಕಾಕ ಅಂದಿರಿ ದೇವರಗುಡ್ಡ ಅಂದಿರಿ. ಈಗಲಾದರೂ ನಾ ಆ ದೇವರ ತಾವಿಂದಲೇ ಬಂದಿದೀನಿ (ಒಂದು ನಿಮಿಷ ಸುಮ್ಮನಾಗುತ್ತಾನೆ).
ಗೌಡ	ಓ ಅದು ಎಲ್ಲ ಬಲ್ಲರು. ಈಗತಾನೇ ಗುಡಿಯಿಂದ ಬಂದಿದೀಯಾ ನೋಡಲಿಲ್ಲೆ?
ಕಾಚ	ಸರ‍್ಯೆ... ನಾ ಮೈಸೂರಿಂದ ಬಂದವನೆ ನಿಮಗೆ ಹೇಳಿದಿ. ಅಣ್ಣಾ ನನ್ನ ಮಂದಿ, ನಾ ಮೈಸೂರಾಗಿದ್ದು ನೋಡಿವಿನಿ. ಎಂಟು ಹಾಡಿ

	ಕುರುಬರದು ಅಂತ ಅರಸರಿಗೆ ಸಲುವಳಿ ಆಗೋದು ಎರಡು ಜೋಡಿ ಆನೆಕೊಂಬು ಎಂಟು ಸರವಿ ಜೇನು. ನೀವು ಹೆಗ್ಗಡೆಯೋರಿಗೆ ಕೊಡೋದು ಎರಡು ಜೋಡಿ ನಾಲ್ಕು, ಎಂಟು ಸರವಿ ನಾಲ್ಕು. ಹೆಗ್ಗಡೆ ದೊಡ್ಡೋರು. ಹೆಗ್ಗಡೆ ಇರಲಿ. ಅರಸರ ಪಾಲು ನಾಲ್ಕಾದರೆ ಹೆಗ್ಗಡೆ ಪಾಲು ಒಂದು ತಕ್ಕೊಳ್ಳಲಿ. ಹೆಚ್ಚು ಅವರು ಕೇಳೋದು ಬಾರದು. ಹೆಚ್ಚು ನೀವು ಕೊಡೋದು ಬಾರದು. ಕೊಡಲೇಬೇಕು ಅಂತ ಹೆಗ್ಗಡೆ ಹೇಳೋ ವ್ಯಾಳ್ಯಾಕ್ಕೆ ಅರಸರ ಕೇಳಿಕೊಳ್ಳೋಣಂತೆ. ಹಿಂಗಂತ ಹೇಳಿ ನಾ ಮಂದೀನ ಏನಂತೀರಾ ಅಂತ ಕೇಳಿದಿ. (ಒಂದು ಕ್ಷಣ ಸುಮ್ಮನಾಗುತ್ತಾನೆ.)
ಗೌಡ	ಹೌದು ಕೇಳಿದ್ದುಂಟು. ನಾವೆಲ್ಲ ಆಗಲಿ ಅಂದಿವಿ. ಹೌದೇನರಣ್ಣ?
ಎಲ್ಲರೂ	ಹೌದು.
ಕಾಚ	ನೀವು ಆಗಲಿ ಅಂದಿರಿ. ಹೆಗ್ಗಡೆಗೆ ಹಂಗಂತ ನಾವು ಹೇಳಿದಿವಿ. ಹೆಗ್ಗಡೆ ಒಪ್ಪಲ್ಲ. ಅವರಿಗೆ ಒಂದುಸಲ ಸಲ್ಲೋ ಕೊಂಬನ್ನ ಸರವೀನ ಅವರೇ ಕಳುವಿದರು ಅಂತ ಹೇಳಿ ಅರಸರ ಪಾಲು ಅಂತ ಮೈಸೂರಿಗೆ ಕಳವಿದಿವಿ. ಒಪ್ಪಿಸಿದ ಕಪ್ಪಾನ ಅರಮನೆಯೋರು ಸಲಿಕೆ ತಕ್ಕೊಂಡರು. ಎಂಟು ಹಾಡೀ ಕಂದಾಯ ಸಂದಾಯ ಆಯಿತು. ಒಂದು ವರಸದ ಹೆಗ್ಗಡೆ ಪಾಲು ನಾಲ್ಕು ವರಸದ ರಾಜಪಾಲು ಆಯಿತು,
ಗೌಡ	ಹೌದು, ಹೌದು ಅನ್ನಿರೋ.
ಎಲ್ಲರೂ	ಹೌದು.

ಕಾಚ	ಮೂರು ವರಸದ ಕಂದಾಯ ಸರಗೂರಾಗೆ ಕೊಟ್ಟು ಬೂಡಿನ ಮಂದಿಗೆಲ್ಲಾ ಅರಿವೆ ಅಚ್ಚಡ ತಂದದ್ದಾಯಿತು.
ಗೌಡ	ಹೌದು.
ಕಾಚ	ಈಗ ಹೆಗ್ಗಡೆ ಬಂದದಾರೆ. ಅರಸರಿಗೆ ಒಂದು ಪಾಲು ನನಗೆ ಮೂರು ಪಾಲು ಕೊಟ್ಟರೆ ಸೈ, ಇಲ್ಲಿದೀರಾ ಇದ್ದರೆ ನಮ್ಮ ಕಾಡಾಗೆ ಇರಬೇಡಿರ, ಅಂತಾರೆ. ಕಾಡು ನಿಮ್ಮತಲ್ಲ ಅರಸರದು ಅಂತೀರಾ? ಇಲ್ಲ, ಕಾಡು ನಿಮ್ಮದೇ ಹೌದು ಕೇಳಿದ್ದು ಕೊಡುತೀವಿ ಅಂತೀರಾ? ನಾ ಹೇಳುತೀನಿ ಅರಸರದು ಅನ್ನೋಣ ಅಂತ; ಮಾವ ಹೇಳುತಾನೆ, ಹೆಗ್ಗಡೇನ ಒಪ್ಪೋನ ಅಂತ. ಏನಂದರೂ ಹೆಗ್ಗಡೆ ಹೆಗ್ಗಡೆ, ಅವ ಎದೆಮೇಲೆ ಕೂತರೆ ಮಂದಿಗೆ ಉಬ್ಬಸ ಆಗುತದೆ, ಹೆಂಗೊ ಸರಿಸಿಕೊಂಡುಹೋಗಬೇಕು, ತಿಕ್ಕಾಟ ಬೇಡ, ಅಂತಾನೆ. ಅವನ ಮಾತು ಇರಲೆ ನಿಮಗೆ? ನನ್ನ ಮಾತು ಇರಲೆ? (ಒಂದು ಕ್ಷಣ ಸುಮ್ಮನಾಗುತ್ತಾನೆ.)
ಗೌಡ	ಏನು ಹೇಳುತೀರಾ?
ಎಲ್ಲರೂ	ಕಾಕನ ಮಾತು ಇರಲಿ.
ಕಾಚ	ಅರಿವೆ ಅಚ್ಚಡ ಬೇಕು ಅನ್ನೋ ಆಸರಿಗೆ ಕಾಕನ ಮಾತು ಇರಲಿ ಅಂದರೆ ಆಗದು. ಇವತ್ತು ಅರಿವೆ ಅಚ್ಚಡ ಚಂದ ಆದಹಂಗೆ ನಾಳೆ ಕಾಡು ಬಿಡೋ ಬಂದ ಬಂದಾತು. ಹೆಗ್ಗಡೆ ಬಂದು ಹಾಡೀಗೆ ಬೆಂಕೀ ಹಚ್ಚತೀನಿ ಅಂದರೆ ನಿಂತು ಕಾದಬೇಕು, ಸೋತರೆ ಓಡಬೇಕು. ಇದೂ ಇರಲಿ ಅಂತೀರೋ?

ಎಲ್ಲರೂ	ಇರಲಿ ಅಂತೀವಿ.
ಕಾಚ	ಇನ್ನು ನನ್ನ ಮಾವನಾ ಮಾತು ಬೇರೆ ಒಂದೆಡೆ. ಅದನ್ನೂ ಕೇಳಿ ಬೂಡಿನ ಮಂದಿ ತೀರುಮಾನ ಮಾಡಿಬಿಡಿರ. ಮಾವ ಹೇಳತಾನೆ, ನಾನವನ ಹೆಂಡರನ ಬೆಳ್ಳಿಸಿ ಕರಕೊಂಡಿ ಅಂತ. ನಾನು ಹಂಗೆ ಕರಕೊಂಡೋನಲ್ಲ. ಅವ ಅವಳ ಹೊಡೆದ ಅಂತ ಅವ ಅವನ್ನ ಬ್ಯಾಡ ಅಂದಲು. ದೊಡ್ಡವರು ಸೇರಿ ಅವಳನ ಬಿಡಿಸಿದರು. ಆಮೇಲೆ ಅವಳು ನನ್ನ ಕೂಡಿದಳು. ಹಾಡೀಲಿ ಹೆಣ್ಣ ಕಳುವೋದು ಸಲ್ಲ, ಬೂಡಲ್ಲಿ ಬುವ್ವ ಕಳುವೋದು ಸಲ್ಲ, ನಾ ಸಲ್ಲದ ಕೆಲಸಾನ ಮಾಡಿದೋನಲ್ಲ. ಕಂಡೋರು ಇದ್ದರೆ ಹೇಳಿರ.
ಮುದುಕರು	ಹೌದು ಹೌದು.
ಮಾವ	ಯಾತರದೊ ಹೌದು ಹೌದು? ಏನು ಹೌದಂತೀರಿ? ಯಾತರದು ಕಂಡಿರಿ?
ಕಾಚ	ಆಯಿತು. ಆ ಮಾತು ಬೇಕಾದರೆ ಆಮೇಲೆ ಆಡೋಣಂತೆ. ಇದು ಹೆಂಗಾರ ಇರಲಿ, ಮಾವನ್ನ ದೇವರಗುಡ್ಡನ್ನ ಮಾಡಿಕೊಳ್ಳಿ.
ಎಲ್ಲರೂ	ಬೇಡ.
ಒಬ್ಬನು	(ಮುಂದಕ್ಕೆ ಬಂದು) ಮಾವ ಹಾಡೀಲಿ ಇರಲಿ, ಬೂಡಿಗೆ ಬರಲಿ, ಮುಂದಾಳಾಗಿ ಇರಲಿ. ಅಂದರೆ ನಮಗೆ ಕಾಕಾ ದೇವರ ಗುಡ್ಡಾ ನೀನೇ ಆಗಿರಬೇಕು.

ಕಾಚ	ಅದೂ ಆಗಬಹುದು. ಅಂದರೆ ಮಾವನಿಗೆ ಹೇಳಿರ. ನನಗೇನೋ ಸಂತೋಸ ನಿಮ್ಮ ಕಾಕ ಅಂತ ಇರೋಕ. ಮಂದಿ ಅರಿವೆ ಅಂಗರೇಕ ಹಾಕ್ಕೊಂಡದ ನೋಡಿದರೆ ನನ ಕಣ್ಣು ಹಬ್ಬ ಕಂಡಂಗ ನಲೀತಾದ. ಅಂದರೆ ಮಾವನಾದರೂ ಸರ್ರೈ, ಯಾರಾದರೂ ಸರ್ರೈ, ನಾ ಈ ಪಟ್ಟಕ ಆಸೆಪಡುತೀನಿ ಅಂತ ತಿಳಿಯೋ ಹಂಗಿದ್ದರೆ ನನಗೆ ಇದರ ಮಾತೇ ಬೇಡ, (ಮಾವನು ಎದ್ದು ಎತ್ತಲೋ ಹೋಗುವನು.) ನೋಡಿರ ಮಾವನಿಗೆ ಮನಸು ಚೆಂದಾಗಿಲ್ಲ.
ಗೌಡ	ಆಯಿತು. ಇಂದಲ್ಲದಿದ್ದರೆ ನಾಳೆ ಚಂದಾಗತದೆ. ಈಗ ಇನ್ನು ಏನುಮಾಡೋಣ ಹೇಳು.
ಕಾಚ	ಅದ ಹೇಳತೀನಿ ಈಗ ಹೋಗಿ ಒಸಿ ಮಾವನ ಒಪ್ಪಿಸೋಣ ಬಾ. (ಎಂದು ಅವರಿಬ್ಬರೂ ಹೊರಡುವರು.)
ಮುದಕ	ಹಿರಿಯೋರು ಅಂದದ ಕೇಳಿವಿನಿ. ಪಾಂಡ್ಯ ಬಂದ ಅಂತ ಕುರುಬ ನಾಡು ಬಿಟ್ಟು ಕಾಡು ಸೇರಿದನಂತೆ. ತೋಡ ಬಂದ ಅಂತ ಕಾಡಿನಾಗೆ ಸರಿಪಾಲು ಬಿಟ್ಟನಂತೆ. ಇನ್ನು ಕುರುಬ ಬಂದ ಅಂತ ಮಾವ ಕಾಡನೇ ಬಿಡು ಅಂತಾನೆ. ಇವನ ಮಾತಿಗೆ ಏನು ಅನ್ನೋದು? ಕಾಚ ಇರೋ ಹೊತ್ತಕ ಈಗ ನಾವು ಬದುಕಿಕೊಂಡಿವಿ. ತೆಗೀರಲಾ ಕಾಚನ ಒಸಗೆ. ಲೋ ಮೋನ.
ಮೋನ	(ಹಾಡಿಕೊಂಡು ಕುಣಿಯುತ್ತಾನೆ. ತಮಟೆಯ ಮುದುಕ ತಮಟೆ ಹೊಡೆಯುತ್ತಾನೆ.)

	ಕಾಕ ಇರಲಿ ನಮಗ ಎಂದೆಂದು ಇರಲಿ ನಮ್ಮ ಕಾಕ ನಮ್ಮ ಇರಲಿ ನಮಗೆ ಎಂದಿಗೂ ಇರಲಿ ಕಾಕ ಇರಲಿ ನಮಗ.
ಮುದುಕ	ಬನ್ನಿರೋ ಎಲ್ಲಾ ಕುಣೀರ. (ಮಕ್ಕಳೆಲ್ಲ ಸೇರುತ್ತಾರೆ. ಹೇಳಿದ ಮಾತನ್ನೇ ಹೇಳುತ್ತ ಮೋನ ತೋರಿಸಿದಂತೆ ಕುಣಿಯುತ್ತಾರೆ. ಕುಣಿಯುತ್ತ ಕುಣಿಯುತ್ತ ಹೊರಟುಹೋಗುತ್ತಾರೆ.)

೪

[ಅದೇ ಸ್ಥಳ. ಅದೇ ಸಂಜೆ.]

(ಕಾಚ, ಗೌಡ, ಬರುತ್ತಾರೆ.)

ಗೌಡ	ಏನು ತಡಕಾಡಿದರೂ ಸಿಕ್ಕಲಿಲ್ಲಲ್ಲ. ಮಾವಾ ಅಂತ ಕೂಗಿದ್ದಾಯಿತು. ಅತ್ತ ಇತ್ತೆಲ್ಲ ನೋಡಿದ್ದಾಯಿತು. ಇನ್ನೇನು ಮಾಡೋದು?
ಕಾಚ	ಹೌದು. ಮಾವ ಮುನಿಸಿಕೊಂಡರೆ ಬೂಡುಗಳಿಗೆ ಒಳ್ಳೇದಲ್ಲೇ. ಏನು ಮಾಡೋದು.
ಗೌಡ	ಓ ಅವ ಮುನಿಸಿಕೊಂಡಿದ್ದರೆ ಬೂಡುಗಳಿಗೆ ಏನಾಯಿತು? ಅದಿರಲಿ, ಯಾರನೋ ಅರಸರ ಬಳಿಗೆ ಅಟ್ಟಬೇಕಂದ್ಯೆ ಏನು ಅದು?
ಕಾಚ	ಈಗ ಮಂದಿ ಎಲ್ಲ ನಮ್ಮ ಹಂಗೆ ಹೇಳುತಾರೆ. ಅಂದಮೇಲೆ ಹೆಗ್ಗಡೆಗೆ ಈ ಮಾತು ತಿಳಿಸಬೇಕು. ತಿಳಿಸಿದೆವಂದರೆ ಅವರು ಬೆಂಕಿಯ ಹಂಗೆ ಕಾಯುತಾರೆ. ಜನಾನ ಕರಕೊಂಡು ಬೂಡುಗಳಮೇಲೆ ಬಂದರೂ ಬಂದರೆ. ಅದಕ್ಕೆ ಮುಂದಾಗಿ ಈ ಮಾತು ಅರಸರಿಗೆ ತಿಳಿಯೋ ಹಂಗೆ ಮಾಡಬೇಕು. ನೀ ಹೋದರೂ ಹೋಗಬಹುದು. ಅಂದರೆ ನೀ ಇಲ್ಲಿ ನನ್ನ ಜೊತೆಗೆ ಇರೋದು ಒಳ್ಳೇದಂತ ತೋಚತದೆ.
ಗೌಡ	ನೀನೇ ಹೋದರೆ?
ಕಾಚ	ಇಲ್ಲಿ ಹೆಗ್ಗಡೇಗೆ ಹೇಳೋರು? ಹೆಗ್ಗಡೆಗಾದರೂ ಹೇಳೀಯೆ. ಆ ಕರಣೀಕ ಏನಾದರೂ ಮಾಡುತಾನೇ, ಅವನಿಗೆ ಹೇಳೋರು?

ಗೌಡ	ಅದೇನೋ ಮೆಯ್. ತಮ್ಮ ಗೌಡನ್ನ ಕಳುವಿದರೊ? ಅರಸರು ಅವನ್ನ ಕಾಣಿಸಿಕೊಳ್ಳುತಾರೋ ಇಲ್ಲೊ? ಹೇಗೆ ಕಾಣಬೇಕು, ಏನು ಹೇಳಬೇಕು, ಏನು, ಅನ್ನೋದನೆಲ್ಲಾ ಅವನಿಗೆ ಹೇಳಿಕೊಡಬೇಕು.
ಕಾಚ	ಹೇಳುತೀನಿ. ಅರಸರು ಎರಡು ದಿನ ಮೂರು ದಿನಕೆ ಒಮ್ಮೆ ಆನೇಮನೆಗೆ ಬರುತಾರೆ. ಆ ಹೊತ್ತಿನಾಗ ಅಲ್ಲಿದ್ದು ಮೊಕ್ಕಿ ನನ್ನ ಹೆಸರು ಹೇಳಿ ಕಳುವಿದಾನೆ ಅಂದರೆ ಏನು ಅಂತಾರೆ. ಹಿಂಗೆ ಕಷ್ಟದಾಗೆ ಇದೀವಿ, ನಮ್ಮ ಕಾದುಕೋಬೇಕು ಅಂತ ಕೇಳಿಕೋತಾನೆ ಅಂದರೆ ಬಂದುಬಿಡುತಾರೆ.
ಗೌಡ	ಏನು! ಅರಸರು ತಾವೇ ಬಂದುಬಿಡುತಾರಾ?
ಕಾಚ	ತಾವೇ ಬಂದುಬಿಡುತಾರೆ. ಎಲ್ಲಿ ಆದರೂ ಸರ್ರೆ. ಯಾತರದಾದರೂ ಸರ್ರೆ. ಇಲ್ಲಿ ಕಷ್ಟ ಅಂದರೆ ಅದು ನಂದು ಅಂತ ಬರೋರು ರಣಧೀರ ಅರಸರು. ಹೋಗಿ ಹೇಳಿದರೆ ಸರಿ. ನಾನು ಇತ್ತ ಬರೋಕಾಲಕ ಇಂತದೇನಾದರೂ ವ್ಯಾಳ್ಯ ಒದಗ್ಯಾತು ಅಂತ, ನಾ ಬೇಡಿದಾಗ ಬರಬೇಕು ಅಂತ ಕೇಳಿಕೊಂಡಿನಿ. ಆಗಲಿ ಅಂದರು. ತಮ್ಮ ಗೌಡನ್ನ ಅತ್ತ ಅಟ್ಟಿ ಎರಡು ದಿನ ಬಿಟ್ಟುಕೊಂಡು ಇತ್ತ ಹೆಗ್ಗಡೇ ಹತ್ತಿಲಿ ಹೋಗೋಣ. ಏನಾಗತದ ಅಂತ ನೋಡೋಣ. ಅವರು ಮುನಿದು ಏನಾದರೂ ಮಾಡೋ ವ್ಯಾಳ್ಯಕ್ಕೆ ನಮ್ಮ ಮಾತು ಅರಸರಿಗೆ ಮುಟ್ಟಿ ಅವರು ಬಂದಿರತಾರೆ. ಎಲ್ಲಾ ಸರಿಯಾಗತದೆ.
ಗೌಡ	ಅವರು ಬರದೇ ಇದ್ರೆ?
ಕಾಚ	ಇಲ್ಲ, ಬರತಾರೆ.

ಗೌಡ	ಅವರು ಬರೋಕಂಟ ನಾವು ಹೆಗ್ಗಡೇನ ನೋಡೋದು ಬೇಡ.
ಕಾಚ	ಅವರು ಬರೋಕಂಟ ನಾವು ಹೆಗ್ಗಡೇನ ನೋಡದೀರ ಇರೋದು ಆಗೊಲ್ಲ. ನಾಳೆ ನಾಡದು ನಾವು ಹೋಗದಾ ಇದ್ರೆ ಅವರು ಜನಾನ ಕಟ್ಟಿಕೊಂಡು ಹಾಡಿಮ್ಯಾಲೆ ಬರಬಹುದು.
ಗೌಡ	ಕಾಕನ್ನ ಕರತರತೀವಿ ಅಂದಿವೆ, ನೀನು ಕಾಕ ಅಂತ ಹೇಳಬೇಕಲ್ಲ.
ಕಾಚ	ನಮ್ಮ ನಮ್ಮ ಮಾತಿಗೆ ಬೇಕಾರೆ ನಾ ಕಾಕ ಆದೇನು. ಹೆಗ್ಗಡೇಗೆ ತೋರಿಸೋಕೆ ಕಾಕ ನಾನಲ್ಲ. ಅವ ಬೇರೆ ಅದಾನೆ.
ಗೌಡ	ಬೇರೆ ಯಾರು ಕಾಕ?
ಕಾಚ	ಅವ ಬರುತಾನೆ, ಬಂದಾಗ ಹೇಳುತೀನಿ.
ಗೌಡ	ಏನು ಕಾಕ ನೀನು ನನಗೇ ಮಂಕುಮಾಡುತಿದೀಯಲ್ಲ.
ಕಾಚ	ಹೌದು ಗೌಡಣ್ಣ ಮುನಿಸುಕೋ ಬೇಡ. ಇವತ್ತು ತಮ್ಮಗೌಡನ್ನ ಮೈಸೂರಿಗೆ ಅಟ್ಟು. ಇದು ಯಾರಿಗೂ ತಿಳಿಯಬಾರದು. ಮುಂದಿನ ಮಾತು ಹೇಳೋಕೆ ನಾಳದ್ದು ಬರುತೀನಿ ಅಂತ ಹೆಗ್ಗಡೇ ಕಿವಿ ಮುಟ್ಟಿಸು. ಮೂರು ದಿನ ಬಿಟ್ಟುಕೊಂಡು ನಾನೂ ನೀನೂ ಹೋಗೋಣ. ಜೊತಗೆ ನಾಲ್ಕು ಹೈಕಳು ಬರಲಿ. ಈ ಮಾತು ಆ ಮಾತು ಆಗಿ ಅವರು ಹಾಂ ಹೂಂ ಅನ್ನೋಹೊತ್ತಿಗೆ ತಮ್ಮಗೌಡ ಅರಸರನ ಕರತರು ತಾನೆ. ಎಲ್ಲಾ ಸರಿಯಾಗುತದೆ.
ಗೌಡ	ಕಾಕ ನಾ ಅಲ್ಲ ಇನ್ನೊಬ್ಬ ಅದಾನೆ ಆಂತ ನೀ ಅಂದರೆ ಮಂದಿ ಒಪ್ಪತದೆಯಾ?

ಕಾಚ	ಅದರ ಮಾತು ಹೇಳತೀನಿ ಬಾ. ತಮ್ಮಗೌಡನ್ನ ಅಟ್ಟೋ ಕೆಲಸ ನೋಡು ಮೊದಲು. (ಎಂದು ಮುಂಂದುವರಿಯುವನು.)
ಗೌಡ	ಹಂಗೇ ಆಗಲಪ್ಪ, ಯಾವದೂ ನೀ ಹೇಳಿದ ಹಂಗೆ. (ಇಬ್ಬರೂ ಹೋಗುವರು.)

[ಹೆಗ್ಗಡೆಯ ಪಾಳೆಯದ ಮುಂದೆ. ಹೆಗ್ಗಡೆ, ಕರಣೀಕ ಮಾತನಾಡುತ್ತ ಬರುತ್ತಾರೆ.]

ಕರಣೀಕ	ಕಾಕ ಅನ್ನೋನು ಬೇರೆ ಅಲ್ಲ. ಆ ಜಂಬದ ಕೋಳಿ ಇದಾನಲ್ಲ ಅವನೇ ಅಂತ ಇವ ಹೇಳತಾನೆ.
ಹೆಗ್ಗಡೆ	ಇಲ್ಲಿ ಕಂದಾಯ ಎತ್ತಿದರೆ ಕಾಕ ನಿಮ್ಮ ಉಸಿರು ತೆಗೆಯುತಾನೆ ಅಂದನಲ್ಲ. ತಾನೇ ಕಾಕನಾಗಿ ತಾನೇ ಹೀಗೆ ಹೇಳುತಾನೆಯೆ ?
ಕರಣೀಕ	ಅವನ ಸ್ವಭಾವ ಬಹಳ ಜಂಭದ ಸ್ವಭಾವ. ಇವ ಹೇಳುತಾನೆ, ಈ ಕಾಕ ಅನ್ನೋನು ಮೈಸೂರಲ್ಲಿ ಆನೇಮನೆ ಹತ್ತಿರ ಕಸಗಿಸ ಗುಡಿಸುತ ಇದ್ದನಂತೆ. ಈಗ ನಾಲ್ಕು ವರ್ಷದ ಹಿಂದೆ ಬಂದು ತಾನು ಬಹಳ ಮೈಸೂರು ಕಂಡೋನು ಅಂತ ಗ್ರಾಮಗಳವರಿಗೆ ಹೇಳಿ ಇವರನ್ನ ಎತ್ತಿಕಟ್ಟಿದಾನೆಯಂತೆ. ಇವರು ತಿಳಿಯದವರು. ಇರಬಹುದೇನೋ ಅಂತ ಅವನ ಮಾತಿಗೆ ಮರುಳಾಗಿದಾರೆಯಂತೆ.
ಹೆಗ್ಗಡೆ	ಹೌದು, ಈಗ ಬಂದಿರೋನು ಏನಾದರೂ ನಮಗೆ ಮೋಸ ಮಾಡೋಕೆ ಬಂದಿದ್ದರೆ?
ಕರಣೀಕ	ಅದಿಲ್ಲ ಅಂತ ಕಾಣುತ್ತೆ. ಮೊದಲು ಇವನೇ ಬುದ್ಧಿವಂತ ದೇವರಗುಡ್ಡ ಆಗಿದ್ದನಂತೆ. ಈ ಕಾಕ ಬಂದಮೇಲೆ ಗ್ರಾಮಗಳವರು ಇವನ್ನ ಬೇಡ ಅಂತ ಹೇಳಿ ಅವನ್ನ ಕಾಕ ಕಾಕ ಅಂತ ಬುದ್ಧಿವಂತನ್ನ ದೇವರಗುಡ್ಡನ್ನ ಮಾಡಿಕೊಂಡರಂತೆ. ತನ್ನ ಕೆಡಿಸಿದ ಅಂತ ಇವನಿಗೆ ಅವನಮೇಲೆ ಕೋಪ. ಅದರಿಂದಲೇ ಇಲ್ಲಿ ಬಂದು ನಮಗೆ ಇದನೆಲ್ಲಾ ಹೇಳುತಾ

	ಇದಾನೆ.
ಹೆಗ್ಗಡೆ	ಒಳ್ಳೇದು. ಅವನ್ನ ಕರೆಯಿಸಿರಿ ನೋಡೋಣ.
ಕರಣೀಕ	ಆಯಿತು. (ಎಂದು ಒಳಕ್ಕೆ ಕೂಗಿ ಹೇಳುತ್ತಾನೆ.) ಎಲಯ್ಯ ಮಾಚನಾಯಕ.
ಮಾಚ	(ಒಳಗಿಂದ) ಸ್ವಾಮಿಗಳೆ (ಎಂದು ಮುಂದೆ ಬರುತ್ತಾನೆ.)
ಕರಣೀಕ	ಆ ದೇವರಗುಡ್ಡನ್ನ ಕರತಾ.
ಮಾಚ	ಅಪ್ಪಣೆ. (ಎಂದು ಒಳಗೆ ಹೋಗಿ ಮಾವಯ್ಯನನ್ನ ಕರೆದುಕೊಂಡು ಬರುವನು.)
ಕರಣೀಕ	(ಮಾವಯ್ಯನಿಗೆ) ಅಣ್ಣಾ, ದೇವರಗುಡ್ಡ, ನನಗೆ ಹೇಳಿದ ಮಾತು ಹೆಗ್ಗಡೆಗಳಿಗೆ ತಿಳಿಯಹೇಳು.
ಮಾವ	ಇನ್ನೇನು ಹೇಳೋದು. ಈ ಮೊಂಡಾಟ ಬಂದಿರೋದೆಲ್ಲ ಈ ಕಾಕನಿಂದ. ಮೈಸೂರಾಗಿದ್ದು ಮೂರು ಹೊನ್ನು ತಂದವನೆ. ಮಂದಿ ಮರುಳಾಗಿ ಇವ ಹೇಳಿದ ಹಂಗೆ ಕುಣೀತವರೆ. ಅವನ್ನ ಹಿಡಿದರೆ ಎಲ್ಲಾ ಸರಿಹೋಗತದೆ. (ಮೋನ ಒಂದು ಕಡೆಯಿಂದ ತಲೆಹಾಕಿ ಇವರನ್ನೆಲ್ಲ ನೋಡಿ ಮರೆಯಾಗುತ್ತಾನೆ.)
ಹೆಗ್ಗಡೆ	ನಿಮ್ಮ ಈ ಬುದ್ಧಿವಂತ ಅನ್ನೋನೇ ಕಾಕನೆ ಹಂಗಾದರೆ?
ಮಾವ	ಇನ್ಯಾರು ಕಾಕ?
ಹೆಗ್ಗಡೆ	ಕಾಕನ್ನ ಕರತಾ ಅಂದರೆ ಅವನು ಇಲ್ಲಿ ಇದಾನೊ ಇಲ್ಲೋ ನೋಡಿಬಂದು ಹೇಳುತೀನಿ ಅಂತ ಅವನೇ ಹೇಳಿದನೇ.

ಮಾವ	ಊಂ. ಹೇಳುತಾನೆ.
ಕರಣೀಕ	ಅವನಿಗೆ ಸುಳ್ಳು ಹೇಳೋದು ಕಷ್ಟಾನೆ? ಬೇಕಾದರೆ ನಾ ಅರಸರನ ಕರಸುತೀನಿ ಅಂತಾನಂತೆ. ಅವನ ಮಾತಿಗೇನು?
ಹೆಗ್ಗಡೆ	ಒಳಿತಾಯ್ತು. ಅವನ್ನ ಅತ್ತಲಾಗಿ ಕಳುಹಿಸಿ (ಕರಣೀಕನು ಸನ್ನೆಮಾಡುತ್ತಾನೆ. ಮಾಚನಾಯಕ ಮಾವನನ್ನು ಕರೆದುಕೊಂಡು ಆಚೆಗೆ ಹೋಗುತ್ತಾನೆ.) ಇದೇನೋ ಈ ಮಾತೆಲ್ಲ ಕಟ್ಟಿದ ಮಾತು ಅಂತ ಕಾಣತದೆಯಲ್ಲ. ಇದರಲ್ಲೇನೂ ಮೋಸ ಇಲ್ಲ ಅಂತೀರಾ? ಅರಸರನ ಕರಸತೀನಿ ಅಂತ ಇವ ಹೇಳೋದುಂಟೆ?
ಕರಣೀಕ	ಈಗಿನ ಅರಸರನ್ನ ಅಂದರೂ ಅಂದರೆ. ಎಲ್ಲಿಯಾದರೂ ತುಂಟರಿಬ್ಬರು ಕಾದುತಾರೆ ಅಂದರೆ ಇವರು ವಿನೋದ ನೋಡೋಕೆ ಹೋಗುತಾರಂತೆ. ನಾವು ಜಗಳವಾಡುತೀವಿ ನೋಡಿ ಬನ್ನಿ ಅಂತ ಇವ ಹೇಳಿಕಳುಹಿಸಿದರೆ ಅವರು ಬಂದರೂ ಬರಬಹುದೇನೋ!
ಹೆಗ್ಗಡೆ	ನಾಲ್ಕು ವರುಷದಿಂದ ಇವರಕಡೆ ಕಂದಾಯ ನಾವು ಸಲ್ಲಿಸಿಲ್ಲ. ಯಾಕೆ ಸಲ್ಲಿಸಲಿಲ್ಲ ಅಂತ ಕೇಳದಿದ್ದ ಅರಮನೆ ಈ ಮಾತಿಗೆ ಬಂದೀತೆ?
ಕರಣೀಕ	ಹುಂಜದ ಕಾಳಗ ನೋಡುತಿರೋರಿಗೆ ಕಂದಾಯ ಸಂದಿತೋ ಇಲ್ಲವೋ ಕೇಳೋಕೆ ಹೊತ್ತಿರುತದೆಯೇ? ಉಳಿದದ್ದ ಕಳಹೋವಾಗ, ಇದು ಬಂದಿಲ್ಲ ಬಂದಾಗ ಕಳುಸುತೀವಿ, ಅಂದಿವಿ. ಅಷ್ಟೇ ಆಯಿತು. ಬಂದಿಲ್ಲ ಕಳಿಸಿಲ್ಲ ಅಂತ ಸುಮ್ಮನಿದ್ದಾರೆ.

ಹೆಗ್ಗಡೆ	ಊರಾಗಿರುತಾ ಕಾಣಿಕೇ ಕೇಳದೋರು ಕುರುಬರನ್ನ ಹೊರೆಯೋಕೆ ಕಾಡಿಗೆ ಬಂದಾರೆ? ಅಂತೂ ಇದು ನೋಡಬೇಕು. ಗೌಡರೂ ಈವತ್ತು ಬರಬೇಕಲ್ಲ?
ಕರಣೀಕ	ಹೌದು. ಮಧ್ಯಾಹ್ನ ಬರಬೇಕು. ಬರತಾರೆ ಅಂತ ಅವರಕಡೆ ಮನುಷ್ಯ ಬಂದು ಹೇಳಿದ. ಮಾಚನಾಯಕನ್ನ ಆ ಕಾಕನ ಹಿಂದೇನೇ ನಿಂತಿರು ಅಂತ ಹೇಳುತೇನೆ. ಅವನ್ನ ಇವತ್ತು ಹಿಡಿಯಬೇಕು. ಕಂದಾಯ ಕೊಡೋದು ತಪ್ಪಿಸಿದೋನು ಅಂತ ಅವನ್ನ ಕೋಟೆಯಲ್ಲಿ ಸೆರೇಗಿಟ್ಟರೂ ಆಯಿತೆ. ಮೈಸೂರಿಗೆ ಕಳುಹಿಸಿದರೂ ಆಯಿತೆ. ಇವರ ಪುಂಡಾಟ ಮುಗಿಯುತ್ತದೆ.
ಹೆಗ್ಗಡೆ	ಒಳಿತು ಹಾಗೇ ಮಾಡಿ, ಕೆಲ ಜನ ಸಿದ್ಧವಾಗಿರಲಿ, ಚಿಕ್ಕಯ್ಯನಿಗೂ ಹೇಳಿ ಏರ್ಪಾಡು ಮಾಡಿ (ಎಂದು ಬಿಡಾರದ ಒಳಕ್ಕೆ ಹೋಗುವನು).
ಕರಣೀಕ	ಎಲಯ್ಯ ಮಾಚನಾಯಕ.
ಮಾಚ	ಅಯ್ಯನೋರೆ (ಎಂದು ಬರುತ್ತಾನೆ).
ಕರಣೀಕ	ಇನ್ನು ಸ್ವಲ್ಪಹೊತ್ತಿಗೆ ಆ ಗೌಡ, ಕಾಕ ಬರುತ್ತಾರೆ. ಆ ಹೊತ್ತು ನಮ್ಮನ್ನೆಲ್ಲಾ ಬೆದರಿಸಿದನಲ್ಲಾ ಆ ಬುದ್ಧಿವಂತ, ಅವನೇನಂತೆ ಕಾಕ. ಮಾತುಕತೆ ಏನಾಗುತದೆ ನೋಡುತೀನಿ. ನೀನು ಅವನ ಹಿಂದಾಕಡೆಗೇ ನಿಂತಿರು. ಅತ್ತಾಗೆ ನಾಲ್ಕು ಜನಾನ ನಿಲ್ಲಿಸಿರು. ನಾನು ಸನ್ನೆ ಮಾಡಿದಾಗ ಅವನನ್ನ ಹಿಡಿದುಕೊ. ನಾನು ಸನ್ನೆಮಾಡದೇ ಇದ್ದರೆ ಹೊರಟು ಹೋಗಲಿ ಬಿಟ್ಟುಬಿಡು. ಅನಕಾ

	ಅವನ ಹಿಂದಾಕಡೆ ನಿಂತು ಅತ್ತ ಇತ್ತ ನೋಡುತಿರೊ ಹಂಗೆ ನೋಡುತಾ ಕಾದಿರಬೇಕು.ತಿಳಿಯಿತೆ?
ಮಾಚ	ತಿಳೀತು ಅಯ್ಯನೋರೆ.
ಕರಣೀಕ	ಇಲ್ಲೇ ಇರು ನೀನು. ಅವರು ಬಂದರೆ ಬಿಡಾರದಾಕ್ಕೆ ಬಂದು ತಿಳಿಸು. ಅವರ ಕೂಟೆ ಇಲ್ಲೇ ಮಾತನಾಡೋಣಂತೆ, ನಾ ಹೋಗಿ ಚಿಕ್ಕಯ್ಯಗಳಿಗೆ ಇದನ್ನೆಲ್ಲಾ ಹೇಳಿರುತೀನಿ (ಎಂದು ಒಳಗೆ ಹೋಗುವನು).
ಮಾಚ	(ಒಂದೆರಡು ಹೆಜ್ಜೆ ಹಾಗೆ ಹೀಗೆ ನಡೆದು) ಓಹೊ ಇವರು ಬಂದರು. ಇದೇನೊ ಗುಟ್ಟಾಗಿ ಮಾತನಾಡಿಕೋತಾ ಇದಾರೆ. ಇದನೆಲ್ಲ ಕೇಳಿ ತಿಳಿದರೆ ಚೆನ್ನಾಗಿದ್ದೀತು. ನೋಡೋಣ (ಎಂದುಕೊಂಡು ಒಳಕ್ಕೆ ಹೋಗುವನು). (ಕಾಚ ಗೌಡ ಮೋನ ಬರುವರು.)
ಮೋನ	ನಾನು ಕಣ್ಣಿಂದ ನೋಡಿದಿನಿ. ಮಾವಯ್ಯ ಇವರ ಕೂಟ ಮಾತನಾಡುತ ಇದ್ದವನ್ನ.
ಕಾಚ	ಅನಕಾ ಮಾವನ ಉಮ್ಮಳ ಈಸು ದೂರ ಮುಟ್ಟಿತಲ್ಲ. ಏನಂತಾ ಇದ್ದರು ಮಾತು ಗೀತು ಕೇಳಿತಾ?
ಮೋನ	ಅವನ್ನ ಹಿಡಿದರೆ ಎಲ್ಲಾ ಸರಿಹೋಗುತದೆ ಆಂತಾ ಇದ್ದರು.
ಗೌಡ	ಯಾರನ್ನ ಅಂದಿರಬಹುದು ಅವರು?
ಕಾಚ	ಆಮೇಲೆ?

ಮೋನ	ನಾನು ತಲೆಹಾಕಿ ಮಾವನ್ನ ಇವರನ್ನ ಕಂಡಿ. ಈ ಮಾತು ಕೇಳಿಸಿತು. ಬೇರೆ ಏನಾನ ಕೇಳೋಕೆ ಮೊದಲು ಅವರು ಈ ಕಡೇಕೆ ತಿರುಗಿದ ಹಂಗಾಯಿತು, ನಾ ಮರೆ ಆದಿ. ಇನ್ನೇನೂ ತಿಳೀಲಿಲ್ಲ.
ಕಾಚ	ಹಿಡೀಬೇಕು ಅಂದರೋ? ನನ್ನ ಹಿಡೀತಾರಂತ ಕಾಣುತದೆ. ಸರ್ರೈ. ಗೌಡಣ್ಣ ಆ ಹಾವು ನಾವು ಕಂಡದ್ದು ಯಾವ ಮರದಡೀಲಿ. ದೊಡ್ಡ ತ್ಯಾಗದಡೀಲಿ ಅಲ್ಲೆ? (ಎಂದು ಮೋನನನ್ನು ಒಂದು ಕಡೆಗೆ ಕರೆದು ಕಿವಿಯಲ್ಲಿ ಏನೋ ಹೇಳಿ) ಹೋಗಿ ಬೇಗನೇ ತರಬೇಕು. ನೀ ಬರೋತನಕ ನಾವು ಅವರ ಕೂಟೆ ಮಾತಿಗೆ ಮೊದಲುಮಾಡೋಲ್ಲ. ನಾ ಹುಯಿಲಿಟ್ಟಾಗ ನಾ ಹೇಳಿದಂಗೆ ಮಾಡು, ಏನು?
ಮೋನ	ಆಗಲಿ ಕಾಕ, ನನಗೆ ಇಂತ ಕೆಲಸ ಮಾಡೋಕೆ ಬಾಳ ಸಂತೋಸ. (ಎಂದು ಹೋಗುವನು.)
ಕಾಚ	ಗೌಡಣ್ಣ, ನೋಡಿದೋ ಮಾವಯ್ಯ ಎಂತಾ ಕೆಲಸ ಮಾಡಿದಾ? ತನ್ನೊಬ್ಬನ ಮುನಿಸಿಗಾಗಿ ಬಳೀನೇ ಕೆಡಿಸುತೀನಿ ಅಂತಾನೆಯೆ! ಈಗೇನು ಮಾಡೋದು?
ಗೌಡ	ಇವರನ್ನ ಈಗ ಕಂಡರಲ್ಲೇ ಇವರು ನಿನ್ನ ಹಿಡಿಯೋದು? ಸುಮ್ಮನೆ ಹಾಡೀಗೆ ನಡಿ, ಹೆಂಗೆ ಹಿಡೀತಾರೆ?
ಕಾಚ	ನಾವು ಇವರನ್ನ ಕಾಣದೀರ ಹಂಗೇ ಹೋದರೆ ಅವರು ನನ್ನ ಇಲ್ಲಿ ಹಿಡಿಯೋಲ್ಲ, ಹಿಂದೆ ಬರುತಾರೆ. ಹಾಡೀ ಬೂಡು ಸುಡುತಾರೆ. ಇವನನ್ನ ಕರತನ್ನಿ, ಇಲ್ಲದಿದ್ದರೆ ಜೀವ ತೆಗೀತೀವಿ, ಅಂತಾರೆ. ಹಾಡೀಗೆ ಹೊಂಟೋದರೆ ಏನಾದಹಂಗಾಯಿತು?

ಗೌಡ	ಮತ್ತಿನ್ನು ಕಾಣಿಸಿಕೊಂಡಿವಿ ಅಂದರೆ ನಿನ್ನ ಹಿಡೀತಾರಲ್ಲ! ನಿನ್ನ ಹಿಡಿದಮೇಲೆ ನಾವೇನು ಮಾಡೋದು? ಎಲ್ಲಾ ಆದಹಂಗೇ ಆತು.
ಕಾಚ	ಹಿಡಿದರೇನೊ ಕಷ್ಟಾ ಅನ್ನು. ನೀನು ಮೈಸೂರಿಗೆ ಹೇಳಿ ಕಳುವಿ ಅರಸರನ್ನ ಬರಮಾಡಿಕೊಂಡು ನನ್ನ ಉಳುಹ ಬೇಕಾಗುತದೆ.
ಗೌಡ	ಆವರೆಗೆ ಇವರು ನಿನ್ನ ಉಳಿಸಿದ್ದರೆ.
ಕಾಚ	ಹೌದು. ಉಳಿಸದೀರಾ ಬಿಟ್ಟರೆ ನನ್ನ ಕೆಲಸ ಏನೋ ಚಂದೇ ಆಯಿತು. ಅಂದರೆ ಹಾಡೀ ನನ್ನಿಂದ ಕೆಟ್ಟಂತ ಆದಾತು. ಆಗ್ಯೆ ಇನ್ನ ತಿರಗಾ ಇವರನ್ನ ಮೇಲೆ ಹಾಕಿಕೊಳ್ಳದೆ ಕಂದಾಯ ಕೊಡುತೀವಿ ಅನ್ನಬೇಕು. ಅರಸರಿಗೆ ಕೇಳಿಕೊಂಡು ಕಡಮೆ ಮಾಡಿಸಿಕೊಬೇಕು. (ಮಾಚನಾಯಕ ಒಂದು ಕಡೆಯಿಂದ ಇಣಿಕಿನೋಡಿ ಮೆಲ್ಲಗೆ ಬರುತ್ತಿರುವುದನ್ನು ತಿಳಿದು) ಗೌಡಣ್ಣ, ನಮ್ಮ ನಾಯಕರು ಹೊಂಚಿ ಕೇಳುತವರೆ. ಎರಡು ಮಾತು ಹೇಳುತೀನಿ. ನಿನಗೆ ತಿಳಿಯೋಲ್ಲ. ಸುಮ್ಮನೆ ಹೂಂಕುಟ್ಟು.
ಗೌಡ	ಹೂಂ. (ಈ ವೇಳೆಗೆ ಮಾಚ ಇವರ ಹಿಂದೆ ಒಂದು ಪೊದೆಯ ಮರೆಗೆ ಸೇರಿ ನಿಲ್ಲುತ್ತಾನೆ.)
ಕಾಚ	ಬೇಡ ಬೇಡ ಆಂದರೂನೂವೆ ನಮ್ಮ ಕಾಕ.....
ಗೌಡ	ಹೂಂ.

ಕಾಚ	ನಾ ಬೇಡ ಅಂದಿ; ನೀ ಬೇಡ ಅಂದಿ; ನಮ್ಮ ಮಾತು ಕೇಳದೀರ ತಾನೊಬ್ಬವನೇ ಮುಂದಾಗಿ ಬಂದು ಇಲ್ಲಿ ಸಿಕ್ಕಿ ಕೊಂಡಿದಾನೆಯೇ ಇದಕೇನು ಮಾಡೋದು?
ಗೌಡ	ಏನು ಮಾಡೋದು?
ಕಾಚ	ಇವ ಕಾಕ ಅಂತ ಅವರಿಗೆ ತಿಳಿಯೋಕಂಟ ಆಗಲಿ ಅನ್ನಬಹುದು. ಕಾಕ ಅಂತ ಅವನ್ನ ನೇಣಿಗೆ ಹಾಕಿದರೆ ನಮಗೆ ದಿಕ್ಕು ಯಾರು?
ಗೌಡ	ದಿಕ್ಕೋ ಗಿಕ್ಕೋ.
ಕಾಚ	ಕಾಕ ಬರಲ್ಲ ಅನ್ನೋಣೆ ಅಂದೆ. ಬೇಡ ಅಂದ. ಕಾಕ ಊರಾಗಿಲ್ಲ ಅನ್ನಿ ನೀವು, ಆ ಕಾಚನೇ ಕಾಕ ಅಂತೀನಿ ನಾನು, ನಿನ್ನ ಅವರು ಹಿಡಿದರೂ ಭಯ ಇಲ್ಲ, ನಾ ಬಿಡಿಸಿಕೋತೀನಿ, ನಾ ಇಲ್ಲಿ ಇದ್ದು ಇವರ ಬಾಳು ಬಟ್ಟೆ ತಿಳುಕೊಳ್ಳುತೀನಿ, ಹೆಗ್ಗಡೇನ ಕೊಂದರೂ ಕೊಂದಿ ರಾತ್ರೀಕೆ, ಅಂದನಲ್ಲ. ಇದೆಲ್ಲಾ ಮಾಡತಾ ಇವನೇನಾದರೂ ಆದರೆ ಕೆಲಸ ಕೆಟ್ಟಿತೇ? ಇದಕೆ ಹೆಂಗೆ?
ಗೌಡ	ಹೆಂಗಪ್ಪಾ ಇದಕೆ? ಹೇಳಿದ ಮಾತು ಕೇಳೋಲ್ಲೆ!
ಕಾಚ	ಯಾವಾಗಲೂ ನಮ್ಮ ಕಾಕನ ಕೆಲಸ ಹಿಂಗೇ ಆಯಿತು. ಬೆಂಕಿಯಾಕ್ಕೆ ಹೋಗೋದು. ಅರ್ದ ಸುಟ್ಟುಕೊಂಡು ಬರೋದು. ಸುಳಿಯಾಕೆ ಈಸೋದು ಸಾವು ತಪ್ಪಿಸಿಕೊಂಡು ಬರೋದು. ಹುಲಿ ಬಾಯಾಗ ಕೈಯಿಟ್ಟು ಗಾಯ ಮಾಡಿಕೊಂಡು ಬರೋದು. ಎಷ್ಟು ದಿನ ಹೋದರೂ ಇವನಿಗೆ ಬುದ್ದಿ ಬರಲಿಲ್ಲವೇ.

ಗೌಡ	ಬರಲಿಲ್ಲಪ್ಪಾ.
ಕಾಚ	ಇವನಿಗೇನಾರಾ ಆದಾತು ಅಂತ ನಾವೆಲ್ಲ ನಡುಗುತಿರಬೇಕಾದರೆ ಇವನಿಗೆ ಇದೆಲ್ಲಾ ಬರೇ ಆಟ ಅಗಿಬಟ್ಟಿತು. ಹಾಡೀ ಏನಾರ ಆಗಲಿ ಬೂಡೇನಾರ ಆಗಲಿ ಇವನ ಆಟ ಇವಗೆ ದೊಡ್ಡದಾತು. ನನ್ನ ಕಾಕ ಅಂತ ಇವ ಹೇಳಿ ಅವರು ನನ್ನ ಹಿಡಿದರೆ ನಾ ಏನು ಮಾಡೋದು? ಕಾಕನ ಮರ್ಯಾದೆ ಇವನಿಗೆ, ಕಾಕನ ನೇಣು ನನಗೆ?
ಗೌಡ	ಏನು ಮಾಡೋದಪ್ಪಾ. ಮೆಲ್ಲಗೆ ಮಾತಾಡು, ಯಾರಾರ ಕೇಳ್ಯಾರು.
ಕಾಚ	ಇಲ್ಲ, ಯಾರೂ ಇಲ್ಲ. ಅತ್ತ ಇತ್ತ ನೋಡಿ ಯಾರೂ ಇಲ್ಲ ಅಂತ ತಿಳದೇ ನಾ ಹೇಳಿದ್ದು. ಇರಲಿ ಇತ್ತ ಬಾ. ಯಾರಾದರೂ ಕಂಡರೆ ಹೇಳಿಕಳುಹುವಾ ಬಂದಿದೀವಿ ಅಂತ. ದ್ಯಾವರು ಮಾಡಿದ್ದು ಆಗಲಿ. (ಎಂದು ಕಾಚ ಗೌಡ ಒಳಗೆ ಹೋಗುವರು.)
ಮಾಚ	(ಪೊದೆಯಿಂದ ಹೊರಕ್ಕೆ ಬಂದು) ಚೆನ್ನಾಯಿತು. ಇವರು ಕಾಡಿನ ಕುರುಬರು ಅಂದರೆ ಊರು ಕುರುಬರಿಗೆ ಚಳ್ಳೇಹಣ್ಣು ತಿನ್ನಿಸುತೀವಿ ಅಂತಾರೆ. ಕಾಕ ತಾನೇ ಬಂದು ಇವರಿಗೆ ಆಗದೋನು ಅಂದೂ ಈ ಕತ್ತೆ ಕಾಕ ಅಂದೂ ನಮ್ಮ ಕಣ್ಣಿಗೆ ಮಣ್ಣು ಹಾಕೋದೆ? ನಾನು ಮರೆಯಾಗಿದ್ದು ಕೇಳಲಾಗಿ ಆಯಿತಲ್ಲ. ಇಲ್ಲದೀರಾ ಇದ್ದರೆ ಏನು ಗತಿ? ಹೆಗ್ಗಡೆಗಳು ಕರಣೀಕರನ್ನ ಬಾಳ ಬುದ್ಧಿವಂತರು, ನಾನು ಒಳ್ಳೇ ಮನಸಾ ಅಂದರೆ ದಡ್ಡ ಅಂತಿದಾರೆ. ಇದ ಅವರಿಗೆ ಹೇಳುತೀನಿ. ನನ್ನ ಬುದ್ಧಿವಂತ ಅಂತಾರೋ ಕರಣೀಕರನ್ನ ಬುದ್ಧಿವಂತಾ ಅಂತಾರೋ ನೋಡೋಣ.

	(ಎಂದು ಮರೆಯಾಗುವನು.)
ಮೋನ	(ಏನನ್ನೋ ಒಂದು ಹಚ್ಚಡದಲ್ಲಿ ಕಟ್ಟಿ ಮೇಲೆ ಹಾಕಿಕೊಂಡು ಬಂದು) ಎಲ್ಲಪ್ಪಾ ಇವರು ಯಾರೂ ಕಾಣಲಲ್ಲೇ (ಎಂದು ಎರಡುಸಲ ಅತ್ತ ಇತ್ತ ಸುತ್ತಿ ನೋಡಿ) ಅಪ್ಪೋ ಅಪ್ಪೋ (ಎಂದು ಮೆಲ್ಲನೆ ಕರೆಯುವನು. ಗೌಡ ಕಾಚ ಬರುವರು.)
ಕಾಚ	ತಂದ್ಯ ಮೋನ?
ಮೋನ	ತಂದಿವಿನಿ, ಹೆಗ್ಗಡೆಗಳ ಕಾಣಿಕೆ.
ಗೌಡ	ಎಂತಾದೋ ಅದು?
ಕಾಚ	ನಾ ತಾ ಅಂದಿ, ತಂದದಾನೆ. ನಾ ನಿಂತಿರೋ ಕಡ್ಯಾಕೇ ನಿಂತಿರು ಮೋನ. ಬೇಕು ಬೇಡ ಅಂತ ನಾನು ತೋರುತೀನಿ. ಹುಯಿಲಿಟ್ಟರೆ ಹಂಗೆಮಾಡು. ಇಲ್ಲದೀರ ಇದ್ದರೆ ಸುಮ್ಮಕಿರು.
ಮೋನ	ಹಂಗೆ ಆಗಲಿ ಕಾಕ.
ಕಾಚ	ಎಲಾ ತಿಕ್ಕಲಣ್ಣ, ಕಾಕ ಅನಬೇಡ, ನಾನು ಕಾಕ ಅಲ್ಲ.
ಮೋನ	ತಿಳೀತು ಕಾಕ.
ಕಾಚ	ಅಯ್ಯೋ ನಿನ್ನ ಕಾಕವೇ! ಬಾಯಿ ತೆಗೆಯೋದು ಬೇಡೋ ಮಗನೆ (ಎಂದು ಅವನ ಬಾಯಿ ಮುಚ್ಚಿ) ಹೋಗಿ ಅಲ್ಲಿ ನಾಯಕರು ಕಂಡರೆ ನಾವು ಬಂದಿದೀವಿ ಅಂತ ಹೇಳು. (ಮೋನ ಒಳಗೆ ಹೋಗುತ್ತಾನೆ. ಕಾಚ ಹಾಡುತ್ತ ನಡೆಯುತ್ತಾನೆ.)

	ಕುರುಬರ ಬಳಿಗೇ ಮೊದಲಿಗ ಮಾದೇಶ್ವರನ ಮಗಾ ನಮ್ಮ ಕರಿಹೈದಾ ॥ ಕರಿಹೈದಾ ನಮ್ಮ ಕರಿಹೈದಾ ನಮ್ಮ ಕರಿಹೈದಾ ನಮ್ಮ ಕರಿಹೈದಾ ॥ ಕಾಡನು ಕಡಿದಾ ಹಾಡಿಯ ಮಾಡಿದ ಬೂಡನು ಕಟ್ಟಿದ ಕರಿಹೈದ॥ ಕರಿಹೈದಾ ನಮ್ಮ ಕರಿಹೈದಾ ನಮ್ಮ ಕರಿಹೈದ…. ॥ ಮರವನೆ ಏರಿದ ಹಣ್ಣನೆ ತಿಂದ ಸೀಯಿದು ಎಂದಾ ಕರಿಹೈದ ॥ ಕರಿಹೈದಾ ನಮ್ಮ ಕರಿಹೈದ…… ॥ ನೆಲವನೆ ಕೆರೆದಾ ಬೀಜಾ ಚೆಲ್ಲಿದ ಬೆಳೆಯನೆ ತೋರಿದ ಕರಿಹೈದ॥ ಕರಿಹೈದಾ ನಮ್ಮ ಕರಿಹೈದಾ….॥ ಹುಲಿ ನರಿ ಬೂಡಿಗೆ ಬರದಿರಿ ಅಂತಾ ಹಳುವಳೆ ಹೇಳಿದ ಕರಿಹೈದಾ ॥ ಕರಿಹೈದಾ ನಮ್ಮ ಕರಿಹೈದಾ…… ॥ ಹಾಡಿಯ ನಡುವಿಲಿ ಕೆಂಡದ ದೇವರ ಕಾವಲ ಮಾಡಿದ ಕರಿಹೈದಾ ॥ ಕರಿಹೈದಾ ನಮ್ಮ ಕರಿಹೈದಾ…… ॥ ಮರಗಳ ಮೈಯಾ ಅರಿವೆಯ ಕಂಡೂ ಅದ ತಿರಿತಂದಾ ಕರಿಹೈದಾ ॥ ಕರಿಹೈದಾ ನಮ್ಮ ಕರಿಹೈದಾ…… ॥ (ಎಂದು ತಟ್ಟನೆ ಗೌಡನ ಬಳಿಗೆ ಬಂದು)

	ಗೌಡಣ್ಣಾ, ಇವತ್ತು ಏನಾಗುತದೋ ಹೇಳೋಹಂಗಿಲ್ಲ. ನಾನು ನೋಡಿಕೊಂಡುಬರುತೀನಿ. ನೀನು ಹಾಡೀಗೆ ಹೋಗಣ್ಣ.
ಗೌಡ	ನಿನ್ನ ಇಲ್ಲಿ ಬಿಟ್ಟು?
ಕಾಚ	ನನಕ ಅಂಜಿಕೆ ಇಲ್ಲಪ್ಪ.
ಗೌಡ	ನನಕೇನ ಅಂಜಿಕಿ?
ಕಾಚ	ನಿನ್ನ ಇವರು ಹಿಡಿದರೆ?
ಗೌಡ	ನನ್ನ ಹಿಡಿದು ಏನ ಮಾಡತಾರೆ ತಿನಬಾರದ ಮಿಗನ್ನ ? ಇವತ್ತು ಹಿಡೀತಾರೆ, ನಾಳೆ ಬಿಡತಾರೆ. ಇನ್ನೂ ನೀನು ಹೋಗುದಾದರೆ ಹೋಗು ನಾನು ಇರುತೀನಿ.
ಕಾಚ	ನಿನ್ನ ಬಿಟ್ಟು?
ಗೌಡ	ಮತ್ತೆ ನಾ ನಿನ್ನ ಬಿಟ್ಟು? ಏನಂತಾದಾಗೋದು ನೋಡೋನ ಬಿಡು.
ಮೋನ	(ಬಂದು) ಅಪ್ಪಾ ಅವರು ಬರುತದಾರೆ. (ಹಿಂದೆ ಕರಣೀಕ ಮಾಚನಾಯಕ ಬರುವರು.)
ಕಾಚ, ಗೌಡ	ಒಡೆಯ ಕೈಮುಗಿದಿವಿ.
ಕರಣೀಕ	(ಅವರಿಗೆ) ಒಳ್ಳೇದು, ಒಳ್ಳೇದು. (ಮಾಚನಿಗೆ ಏನೋ ಹೇಳುವಂತೆ) ನೀನು ಹೊಂಚಿಕೇಳಿದ ಮಾತು ಹಂಗಿರಲಿ, ನಾ ಹೇಳಿದ ಹಂಗೆ ಇವನ ಹಿಂದಾಕಡೆಗೆ ಇದ್ದು ನಾ ಸನ್ನೆ ಮಾಡಿದಾಗ ಇವನ್ನ ತಬ್ಬಿ ಹಿಡುಕೊ. ಏನು? ತಿಳೀತೆ?

ಮಾಚ	ಆಗಲಿ ಬಿಡಿ ಅಯ್ಯನೋರೆ. ನಾ ಹರೆಯದಾಗೆ ಸಾಮು ಮಾಡಿದೋನು. ಈ ತೋಳಿಂದ ಅಪ್ಪಿಕೊಂಡೆನೇ ಬಿಡಿಸಿ ಕೊಂಬೋರ್ಯಾರು?
ಕರಣೀಕ	ಅಪ್ಪೋದೇನೋ ನಾಯಕ? ಇದೇನು ಚೆಲ್ಲಗಾತೀ ಬೀಡಲ್ಲ, ಹುಲಿ ಇಕ್ಕೆ. ಅಪ್ಪ್ಯಾನೇ ಅಂತ ಕಾದಿರೋ ಹೆಣ್ಣಲ್ಲ ಇವ. ಕಂಡ ಸಿಕ್ಕಿತು ಅಂತ ಬಾಯಿ ಹಾಕಿದರೂ ಹಾಕಿದ. ಜೋಕೆ.
ಮಾಚ	ಆಗಲಿ ಬಿಡಿ, ಅಯ್ಯನೋರೆ ಇವತ್ತು ನೀವು ನೋಡಿ.
ಕರಣೀಕ	ಆಗಲಿ ಮುಂದೆ ನಡಿ. ಹೆಗ್ಗಡೆಗಳು ಬಂದರು. (ಎಂದು ಕಾಚ ಗೌಡ ಇವರಿಗೆ) ಅಯ್ಯಾ ಗೌಡ, ಬುದ್ಧಿವಂತ ಇತ್ತ ಇತ್ತ ಬನ್ನಿ ಹೆಗ್ಗಡೆಗಳು ಅಡಿ ಬೆಳಸುತಿದಾರೆ.
ಕಾಚ	(ಗೌಡನಿಗೆ) ಇವರೇನು ನಮ್ಮನ್ನ ಬಿಡೋಹಂಗಿಲ್ಲ. ಮುಂದೆ ನಿಂತಿರು. ಅವರಕೂಟ ಮಾತನಾಡುತೀನಿ. ಹೊತ್ತು ನೋಡಿಕೊಂಡು ಓಡಬೇಕಾದಾತು. ನಾ ಹುಯಿಲಿಟ್ಟರೆ ಓಟಾಕೀಳು.
ಗೌಡ	ಸರಿ.
ಕಾಚ	(ಮೋನನಿಗೆ) ಆಚೇಕಡೇಕಿರು. ನಾ ಕೂಗತಾಲೇ ಹಾಕಿಬಿಡು, ಹುಯಿಲಿಡು. ಏನಾದರೂ ಸರ್ಯೆ ಗೌಡನ್ನ ಉಳಿಸಿಕೊಂಡು ಬಾ.
ಮೋನ	ಓ.
ಹೆಗ್ಗಡೆ	ಏನು ಕರಣೀಕರೆ? ಕಾಕ ಬಂದಿದಾನಂತೊ?

ಕರಣೀಕ	ಏನಯ್ಯಾ ಗೌಡ ಮೂರು ದಿನದ ಹಿಂದೆ ಹೇಳಿದಿರೆ, ಕಾಕನ್ನ ಕರತರತೀವಿ ಅಂತ. ಕರತಂದಿದೀರೊ?
ಕಾಚ	ನನ್ನೊಡೆಯ ಕಾಕ ಊರಾಗಿಲ್ಲ. ಯಾವಾಗ ಬರುತಾನೋ ತಿಳೀದು. ಅವ ಬಂದಮೇಲೆ ದಣಿಗಳ ಅಪ್ಪಣೆ ಅವನಿಗೆ ತಿಳಿಸುತೀವಿ. ಇದ ಹೇಳೋನ ಅಂತ ಬಂದಿವಿ.
ಹೆಗ್ಗಡೆ	ಕಾಕ ಬರದಿದ್ದರೆ ಬೇಡ. ಸಂದಾಯ ಈಗ ಎಂದಿನಂತೆ ಸಲ್ಲಿಸಿಬಿಡಿ. ಅವ ಬಂದಮೇಲೆ ಅದ ಕಡಮೆಮಾಡೋ ಮಾತಾಡೋಣ.
ಕಾಚ	ನನ್ನೊಡೆಯ ನಾವು ಸರವಿ ಜೇನು ಆನೆಕೊಂಬು ಮನೆಗಳಾಗೆ ಇಟ್ಟುಕೊಂಡಿರೋರಲ್ಲ. ನಾಲ್ಕು ದಿನ ಬಿಟ್ಟು ಸರವಿ ಜೇನು ಸಲ್ಲಿಸೋಕೆ ಈವತ್ತಿನಿಂದ ಹಾಡಿಯೋರೆಲ್ಲ ಹುಡುಕಬೇಕು. ಕಮ್ಮಿಮಾಡದ ಹಂಗ ಕೊಡಬೇಕಂದರೆ ನಾಲ್ಕು ತಿಂಗಳ ಕೆಲಸ ಆಯಿತು. ಜೇನನಾದರೂ ಏನಾರ ಮಾಡಿ ಕಲೆಹಾಕಬಹುದು. ಆನೆಕೊಂಬು ಹಿಡಿಯೋದು ಗಾಸಿ ನನ್ನೊಡೆಯ. ಅದು ನಮ್ಮ ಹಲ್ಲಿನ ಹಂಗೆ ಗಟ್ಟಿಯಾಗಿದ್ದುಬಿಡುತ್ತದೆ, ಬಿಳೋದಿಲ್ಲ. ಆನೇನ ಬೇಕಾದರೆ ತೋರಿಸಿಕೊಟ್ಟೇವು, ಕೊಂಬು ಕೊಯ್ಯುಕೊಳ್ಳೋದಾದರೆ. ಬಾಳ ಗಾಸಿ ನನ್ನೊಡೆಯ, ಬಾಳ ಗಾಸಿ.
ಹೆಗ್ಗಡೆ	ಅರವತ್ತು ವರ್ಷದಿಂದ ಸಲ್ಲಿಸಿದೋರು ಹೆಂಗೆ ಸಲ್ಲಿಸಿದರು?
ಕಾಚ	ಗಾಸಿಪಟ್ಟಿರು ನನ್ನೊಡೆಯ. ಆನೆಕೊಂಬು ಒಂದು ಸಿಕ್ಕಬೇಕಾದರೆ ಕಾಡನೆಲ್ಲ ಅಲೇಬೇಕು. ಆನೇ ಜಗಳ ಮಾಡೋದು ಕಾಯಬೇಕು. ಕೊಂಬು ಉಡಿದೋ ಮುರಿದೋ ಬಿದ್ದರೆ ಎತ್ತಬೇಕು. ಆನೆ

	ಮುದಿಯಾಗಿ ಸತ್ತು ಬಿದ್ದಿದೆಯೇ ಕಾಣಬೇಕು; ಅದು ಹೆಣ್ಣಾದರೆ ಬರೇ ಕೈಯೇ. ಗಂಡು ಸಾಯಲಂತ ಬೇಡಬೇಕು. ಅದರ ಗಾಸಿ ಬಹು ಗಾಸಿ. ಹೇಳಿ ಏನು ನನ್ನೊಡೆಯ.
ಕರಣೀಕ	ಗಾಸಿ ಇರಬಹುದು. ಅಂದರೆ ಇದು ಹೊಸತಲ್ಲ. ಹಿಂದಲಿಂದ ಕೊಡುತಾ ಇದ್ದದ್ದು.
ಕಾಚ	ಹಿಂದೆ ಕೊಡುತಾ ಇದ್ದಿವಿ ಒಂದು ಎರಡು. ಈಗ ಕೊಡು ಅಂತೀರಿ ನಾಲ್ಕು ಎಂಟು.
ಕರಣೀಕ	ಅರಸರ ಪಾಲು ಬೇರೆ, ಹೆಗ್ಗಡೇ ಪಾಲು ಬೇರೆ.
ಕಾಚ	ಅರಸರ ಪಾಲು ಎಷ್ಟು ನನ್ನೊಡೆಯ?
ಕರಣೀಕ	ಅದರ ಮಾತ್ಯಾಕೊ ನಿಮಗೆ? ನಾವು ಕೇಳಿದ್ದು ಕೊಡಬೇಕು.
ಕಾಚ	ಕೇಳಿದ್ದೇ ಕೊಡತೀವಿ. ಒಸಿ ನಮಗೆ ಹೇಳಿರ. ಹೆಗ್ಗಡೆಗಳ ಪಾಲು ಹೆಗ್ಗಡೆಗಳಿಗೆ ಆರಸರ ಪಾಲು ಅರಸರಿಗೆ ಸಲ್ಲಿಸುತೀವಿ.
ಕರಣೀಕ	ಅರಸರ ಪಾಲು ಅರಸರಿಗೆ ನೇರವಾಗಿ ಸಲ್ಲಿಸೋಕೆ ನೀನು ಯಾವೂರ ಗೌಡ? ನಿನ್ನ ಪಾಲಿಗೆ ಅರಸರಿಲ್ಲ, ಹೆಗ್ಗಡೆಗಳೇ ಅರಸರು.
ಕಾಚ	ಹಂಗಾರೆ ನಾ ಹೆಗ್ಗಡೆ.
ಕರಣೀಕ	ಎಲಾ ಎಷ್ಟೋ ಮಾತು, ಹೆಗ್ಗಡೆಗಳ ಎದುರಿಗೆ ನಿಂತು ನೀನೇ ಹೆಗ್ಗಡೆ ಆದಿಯ? ನೀ ಹೆಗ್ಗಡೆ ಅಂದರೆ ನಿನ್ನ ಹಿಡಿದು ನೇಣು ಹಾಕ ಬಲ್ಲರೆ?
ಕಾಚ	ಆಯಿತು ಒಡೆಯ, ಹೆಗ್ಗಡೆ ತಾನು ಅರಸ ಎಂದರೆ ಅರಸರು ಸುಮ್ಮನಿರುತಾರೆಯಾ?

ಹೆಗ್ಗಡೆ	ಬಿಡಿ ಕರಣೀಕರೆ; ಇವನ ಸಂಗಡ ಎಷ್ಟು ಮಾತು. ಅನಕಾ ಇದರಿಂದ ಕಾಣುತದೆ ನಮ್ಮ ಕಿವಿ ಮುಟ್ಟಿದ ಮಾತು ನಿಜ ಅಂತ.
ಕರಣೀಕ	ಹೌದು ಒಡೆಯರೆ.
ಕಾಚ	ಏನು ಒಡೆಯ ಆ ಮಾತು.
ಕರಣೀಕ	(ಹೆಗ್ಗಡೆಗೆ) ಹೇಳಲೆ ಒಡೆಯರೆ?
ಹೆಗ್ಗಡೆ	ಹೇಳಿ.
ಕರಣೀಕ	ನಿಮ್ಮ ಕಾಕ ಇನ್ನು ಬೇರೆಯಲ್ಲ. ಕಾಕ ಅನ್ನೋನು ನೀನೆ ಅಂತ ಹೆಗ್ಗಡೆಗಳಿಗೆ ಸುದ್ದಿ ಬಂದದೆ.
ಕಾಚ	ಸರಿ ನನ್ನೊಡೆಯ.
ಹೆಗ್ಗಡೆ	ಎಂದಿನಂತೆ ನಡಕೊಂಡರೆ ಒಳಿತಾಯ್ತು,. ಇಲ್ಲದಿದ್ದರೆ ನಿನ್ನ ಇಲ್ಲಿಂದ ಹೋಗೋಕೆ ಬಿಡೋದಿಲ್ಲ.
ಕಾಚ	ಸರಿ ನನ್ನೊಡೆಯ.
ಹೆಗ್ಗಡೆ	ಇಲ್ಲೇ ಹಿಡಿದು ಹಾಕುತೀವಿ.
ಕಾಚ	ಆಗಬಹುದು ನನ್ನೊಡೆಯ. ಅಂದರೆ, ಮೀನಾದರೆ ಹಿಡಿದು ತಿನ್ನಬಹುದೇ, ಹಾವು ಹಿಡಿದು ಏನು ಮಾಡುತೀರ?
ಕರಣೀಕ	ತಲೆ ಚಚ್ಚುತೀವಿ.
ಕಾಚ	ಒಳ್ಳೇನ ಹಿಡಿದು ತಲೆ ಚಚ್ಚಿದರೆ ನಂಜಿನ ಹುಳ ಸತ್ತಾತ. ನನ್ನ ಏನಾರ ಮಾಡಿದವರನ ಕಾಕ ಇರುತಾನೆ ನೋಡಿ ಕೋತಾನೆ.
ಕರಣೀಕ	ಹೆಗ್ಗಡೆಗಳ ಅಪ್ಪಣೆ ಏನು?

ಹೆಗ್ಗಡೆ	ಇವನೇ ಕಾಕ ಅಂದನಲ್ಲ ಅವನನ್ನ ಕರತರಿಸಿ. (ಕರಣೀಕನು ಒಳಗೆ ಹೋಗಿ ಮಾವನೊಂದಿಗೆ ಬರುವನು. ಮಾವನು ಇವರ ಕಡೆ ಕ್ರೂರದೃಷ್ಟಿಯಿಂದ ನೋಡುವನು. ಕಾಚನು ಅವನನ್ನು ನೋಡಿ ತಮ ತಮಗೆ ಸಂಕೇತವಿರುವಂತೆಯೂ, ಯಾರೂ ನೋಡದವೇಳೆ ಹೊಂಚಿದಂತೆಯೂ ನಟಿಸಿ ಅವನ ಕಡೆಗೆ ಕಣ್ಣು ಮಿಟಕಿಸುತ್ತಾನೆ.)
ಮಾವ	ಏನೋ ಅದು ಕಣ್ಣು ಮಿಟುಕಿಸುತೀಯಾ?
ಕಾಚ	ಕಣ್ಣ್ಯಾತರದು ಮಿಟಕಿಸೋದು? ಅದೇನೊ ಬಿದ್ದಹಂಗೆ ಆಯಿತು.
ಮಾವ	ಹಂಗೇ ನೋಡುತಾ ಇರು ಬೀಳುತದೆ ನೇಣು.
ಕಾಚ	ಬಿದ್ದರೆ ಹೋಯಿತೇನ ನನತೊಂದು ಉಸುರೆ?
ಹೆಗ್ಗಡೆ	ಇವರಲ್ಲಿ ಯಾರು ಕಾಕ ವಿಚಾರಿಸಿ ಕರಣೀಕರೆ.
ಕರಣೀಕ	ಎಲಯ್ಯ ಬುದ್ಧಿವಂತ ನೀನು ಕಾಕ ಅಂತ ಇವ ಅಂತಾನೆ.
ಕಾಚ	ಆಯಿತು ಗುರುವೆ.
ಕರಣೀಕ	ಇವ ಕಾಕ ಅಂತೀಯಾ ನೀನು.
ಕಾಚ	ಎಲ್ಲಾರ ಉಂಟೆ ನನ್ನೊಡೆಯ?
ಕರಣೀಕ	ಇವ ಕಾಕ ಅಂತ ನೀ ಹೇಳಿದಂತೆ. ಏನು ಮಾಚನಾಯಕ?
ಮಾಚ	ಹೌದು ನನ್ನೊಡೆಯ. ಈಗ ಇವ ಹೇಳುತಾ ಇದ್ದಾಗ ನಾ ಕೇಳಿದಿ.
ಕಾಚ	ಏನು ನಾಯಕರೆ ಇದನೇನು ನೀವು ಕನಸಾಗಿ ಕಂಡಿರೋ? ಕಾಕ ಊರಾಗಿಲ್ಲ ಆಂಕ ಹೇಳುತಿವಿನಿ. ಎತ್ತಾಗೋ ಹೋಗವ್ನೆ. ಇವ ನಮ್ಮ

	ಮಾವಣ್ಣ. ನನಕ ಮೊದಲು ದೇವರಗುಡ್ಡ ಆಗಿದ್ದೋನು. ನಾನಂದರೆ ನಂಜುಕಾರುತಾನೆ. ಇವ ಕಾಕ ಯಾಕಾದಾನು?
ಹೆಗ್ಗಡೆ	ಏನಯ್ಯ ಕಾಕ ಬೇರೆ ಇದಾನೊ?
ಮಾವ	ನಾನು ಮಾವಮೆಯ್, ಇವ ಕಾಕಮೆಯ್.
ಹೆಗ್ಗಡೆ	ಕರಣೀಕರೆ.
ಕರಣೀಕ	ಒಡೆಯರೆ.
ಹೆಗ್ಗಡೆ	ಆಗಲಿ.
ಕರಣೀಕ	ಮಾಚನಾಯಕ (ಎಂದು ಸನ್ನೆಮಾಡುತ್ತಾನೆ. ಮಾಚನಾಯಕನು ಕಾಚನನ್ನು ತಬ್ಬಿ ಹಿಡಿಯಲು ನೋಡುತ್ತಾನೆ.)
ಕಾಚ	ಅಯ್ಯೋ ಅಯ್ಯೋ, ಮೋನ, ಮೋನ (ಎಂದು ಕೂಗುತ್ತಾನೆ).
ಮೋನ	ಹಾವು ಹಾವು (ಎಂದು ಗುಂಪಿನ ಮಧ್ಯೆ ಒಂದು ಸತ್ತ ಹಾವನ್ನು ಹಾಕುತ್ತಾನೆ. ಅದು ಸತ್ತಿದೆಯೆಂಂದು ತಿಳಿಯದೆ ಎಲ್ಲರೂ ಹೆದರಿ ಹಾರುತ್ತಾರೆ. ಈ ಗಲಭೆಯಲ್ಲಿ ಕಾಚನು ಮಾಚನಾಯಕನ ಕೈಯಿಂದ ಬಿಡಿಸಿಕೊಂಡು ಓಡುತ್ತಾನೆ).
ಚಿಕ್ಕಯ್ಯ	ಎಲ ಮುಂಡೇದೆ ತಪ್ಪಿಸಿಕೊಂಡನೆ (ಎಂದು ಅವನ ಹಿಂದೆ ಓಡುತ್ತಾನೆ).

	(ಒಳಗೆ ಯಾರೋ ಬಿದ್ದ ಶಬ್ದ. ರಂಗದಲ್ಲಿ ಎಲ್ಲರೂ ಅಲ್ಲಿಂದ ಇಲ್ಲಿಗೆ ಇಲ್ಲಿಂದ ಅಲ್ಲಿಗೆ ಹಾರಾಡುತ್ತಿದಾರೆ. ಮಧ್ಯೆ ಕರಣೀಕನು ಒಬ್ಬನೇ ಇರುವಾಗ ಹಿಂದುಗಡೆಯಿಂದ ಮೋನ ಕಾಚ ಬರುತ್ತಾರೆ. ಕಾಚ ಅವನಿಗೆ ಬಾಯಿಗೆ ಬಟ್ಟೆ ನಡುವಿಗೆ ಒಂದು ಹಗ್ಗವನ್ನು ಸುತ್ತಿ ಕಟ್ಟುತ್ತಾನೆ. ಇಬ್ಬರೂ ಅವನನ್ನು ಹೊತ್ತುಕೊಂಡು ನಡೆಯುತ್ತಾರೆ. ಒಂದು ಕ್ಷಣದಲ್ಲಿ ಹೆಗ್ಗಡೆ ಬರುತ್ತಾನೆ. ಹಿಂದೆ ಮಾಚನಾಯಕ.)
ಹೆಗ್ಗಡೆ	ಮಾಚ, ಚಿಕ್ಕಯ್ಯ ಎತ್ತ?
ಮಾಚ	ಅವನ್ನ ಅಟ್ಟಿಕೊಂಡು ಇಲ್ಲಿಂದ ಓಡಿದರು. ಅಲ್ಲಿ ಬಿದ್ದದ ಕಂಡೆ. ಹಿಂದೆ ಹೋಗಿ ನೋಡಿದೆ. ಕಣ್ಣಿಗೆ ಕಾಣಲಿಲ್ಲೇ.
ಹೆಗ್ಗಡೆ	ಕರಣೀಕರು ಎತ್ತಹೋದರು?
ಮಾಚ	ನಾ ಈಗ ಇಲ್ಲಿ ಒಂದಾಗ ಇದ್ದರು; ಅತ್ತ ಹೋಗಿ ಬರೋ ವ್ಯಾಳ್ಯಾಕ್ಕೆ ಇರಲಿಲ್ಲ. ಏನಾದರೋ ತಿಳೀಲಿಲ್ಲೇ.
ಹೆಗ್ಗಡೆ	ಚಿಕ್ಕಯ್ಯನನ್ನ ಕರಣೀಕರನ್ನ ಅವರು ಹೊತ್ತುಕೊಂಡು ಹೋದರೇನೊ? ಹಂಗಾದರೆ ಇಲ್ಲಿ ಉಳಿದೋರ್ಯಾರು?
ಮಾಚ	ನನ್ನೊಡೆಯ ನಾ ಏನ ಹೇಳಲಿ, ಸತ್ತದ್ದು ಇದೊಂದು ಹಾವು ಸಾಯದಲೆ ಈ ಒಂದು ಹುಳ ಎರಡು ಉಳಿದದೆ ಇಲ್ಲಿ. ಬಾಳ ಮೋಸ ಆಯ್ತೇ.
ಹೆಗ್ಗಡೆ	ಸತ್ತ ಹಾವಿಗೆ ಹಾಗೆ ಹೆದರುವವರುಂಟೇ ಮಾಚನಾಯಕ?

ಮಾಚ	ಮಾಸೋಮಿ ಅದು ಸತ್ತದು ಅಂತ ತಿಳೀಲ್ಲ. ಹಾವು ಹಾವು ಅಂತ ಮೇಲೆ ಹಾಕುತಾಲೇ ಎಲ್ಲರೂ ಸುಗಿದರು. ನಾನೂ ಕೈ ಸಡಿಲಬಿಟ್ಟೆ. ಆ ಕಾಕ ತಪ್ಪಿಸಿಕೊಂಡೋನೇ ಓಡೇಬಿಟ್ಟ. ಚಿಕ್ಕಯ್ಯ ಅಟ್ಟಿಸಿಕೊಂಡು ಓಡಿದರು. ಬಿದ್ದುಬಿಟ್ಟರು. ಆಮೇಲೆ ಅವರು ಕಾಣಲ್ಲ. ಕರಣೀಕರು ಇಲ್ಲಿ ನಿಂತಿದ್ದರು. ಹಂಗೆ ನೋಡಿ ಹಿಂಗೆ ನೋಡೋ ಹೊತ್ತಿಗೆ ಅವರೂ ಇಲ್ಲ.
ಹೆಗ್ಗಡೆ	ಒಳ್ಳೇದಾಯ್ತು, ನೀನು ಪಾಳ್ಯದ ಕಡೆಗೆ ನೋಡಿಕೊ. ಆ ಮಾವ ಅನ್ನೋನನ್ನಾದರೂ ನಿಲ್ಲಿಸಿಕೊಂಡಿರು. ನಾ ಹೋಗಿ ಚಿಕ್ಕಯ್ಯನನ್ನಾದರೂ ನೋಡಿಕೊಂಡು ಬರುತೀನಿ.
ಮಾಚ	ನನ್ನೊಡೆಯ ಚಿಕ್ಕಯ್ಯನವರನ್ನ ನಾನೇ ನೋಡಿಕೊಂಡು ಬರುತೀನಿ. ತಾವು ಪಾಳ್ಯದಾಗ ನಿಂದಿರಬೇಕು.
ಹೆಗ್ಗಡೆ	ನನಗೆ ಈಗ ಇರೋನು ನೀನೊಬ್ಬ, ನಿನ್ನ ಕಳುಹಿಸಿಬಿಡಲೆ?
ಮಾಚ	ನಾ ಹೋದರೆ ಒಂದು ಕತ್ತೆ ಹೋಯಿತು. ಒಡೆಯರು ಕಾಡಿಗೆ ನಡೆದು ಏನಾದರೂ ಆದರೆ ನಾ ಕೋಟೆಗೆ ಏನಂತ ಹೋಗಲಿ?
ಹೆಗ್ಗಡೆ	ಒಳ್ಳೇದು. ಯಾರನಾದರೂ ಕಳುಹೋಣ ಬಾ. ಪಾಳ್ಯದ ಜನಕ್ಕೆ ಎಚ್ಚರವಾಗಿರಬೇಕಂತ ಹೇಳು. (ಎಂದು ಒಳಗೆ ಹೋಗುವನು).
ಮಾಚ	ಪಾಳ್ಯ ನಿದ್ದೆಹೋಗಿ ಚಿಕ್ಕಯ್ಯನನ್ನ ಕಳಕೊಂಡಿತೇ. ಇನ್ನು ಎಚ್ಚರದಿಂದಿದ್ದು ಅದು ಮಾಡೋದಾದರೂ ಏನು? ಯಾಕಾದರ

	ನಮ್ಮ ಕರಣೀಕರು ನನ್ನ ಮಾತು ಕೇಳದೀರ ಆ ಕಾಚನ್ನ ತಬ್ಬಿಕೋ ಅಂದರೋ. (ಎಂದು ಹಿಂದೆ ಹೋಗುವನು.)

೬

[ಸ್ಥಳ: ಕುರುಬರ ಹಾಡಿ. ಪುಂಡರ ಚಾವಡಿಯ ಮುಂದೆ. ಅದೇ ರಾತ್ರಿ. ಗೌಡ, ಕಾಚ, ಮೋನ, ಕರಣೀಕ; ಇನ್ನಿಬ್ಬರು ಚಿಕ್ಕಯ್ಯನನ್ನು ಎತ್ತಿಕೊಂಡು ಬರುತ್ತಾರೆ.]

ಕಾಚ	ಗೌಡಣ್ಣ ಅಯ್ಕುಸನವರನ್ನ ನನ್ನ ಬೂಡಾಗೆ ಕೂರಿಸಿರು. ಜೊತೆಯಾಗ ಒಬ್ಬನನ್ನು ಹಾಕು. ನಾನು ಚಿಕ್ಕ ಹೆಗ್ಗಡೆಗಳ ಮಾತು ನೋಡಿಕೊಂಡು ಬರುತೀನಿ.
ಕರಣೀಕ	ಎಲಯ್ಯ ಬುದ್ಧಿವಂತ, ಅವರಿಗೇನಾದರಾದೀತು ಜೋಕೆ, ಹೆಗ್ಗಡೆಗಳು ತಲೆ ಕೆಗೀತಾರೆ.
ಕಾಚ	ಆಯಿತು ನನ್ನೊಡೆಯ, ಆಲಬೇಡಿ ಸುಮ್ಮನಿರು. ಹೆಗ್ಗಡೆಗಳು ತಲೇ ತೆಗಿಯೋದು ಹೆಗ್ಗಡೆಗಳ ಕೋಟೇಲಿ, ಇಟ್ಟ ತಲೆ ತೆಗಿಯೋಕೆ ಕಾಕ ಬರಬೇಕು.
ಕರಣೀಕ	ಅನಕಾ ಜೋಕೆ (ಎಂದು ಹೋಗುವನು).
ಕಾಚ	ಯಾರವಾ, ಅಲ್ಲಿ.
ಮೊಲ್ಲೆ	ಏನಪ್ಪಾಜಿ (ಎಂದು ಒಳಗಿಂದ ಬರುವಳು. ನಿಶ್ಚೇಷ್ಟನಾಗಿರುವ ಚಿಕ್ಕಯ್ಯನನ್ನು ನೋಡಿ) ಯಾರಪ್ಪಾಜಿ ಇದು, ಏನಾತು? (ಮೋನಿ ಬರುವಳು.)
ಕಾಚ	ಹೆಗ್ಗಡೆಗಳ ಮಕ್ಕ, ನನ್ನಟ್ಟಿಸಿಕೊಂಡುಬಂದರು. ನಾಮರ ಬಳಸಿದಿ. ಅವರೂ ಬಳಸಿದರು. ಬೇರು ಎಡರಾಗಿ ಕೆಡೆದರು. ಅರಿವು ತಪ್ಪಿತು. ದೇವರು ಕೊಟ್ಟ ಬೇಟೆ ಅಂತ ಹೊರಿಸಿಕೊಂಡು ಬಂದಿನವ್ವ. ಎಲ್ಲಿ

	ದಾರಿ ಬಿಡಿರ್ಯ. ಇಲ್ಲಿ ಮಲಗಿಸಿ. ಮೊಲ್ಲೆ, ತಣ್ಣನೆ ಗಾಳಿ ಬೀಸಿ ಎಚ್ಚರಕೊಳಿಸು.
ಮೊಲ್ಲೆ	(ಕುಳಿತು ಚಿಕ್ಕಯ್ಯನನ್ನು ಜಗಲಿಯಮೇಲೆ ಮಲಗಿಸಿ) ಅವ್ವಯ್ಯಾ, ಕಾಲೇನಾತು?
ಕಾಚ	ಹೊರಳ್ಳದೆಯೋ ಮುರದದೆಯೋ ಕಾಣಲಿಲ್ಲವ್ವ. ಎಚ್ಚರದಾಗ ಮೊನಗುತಾರೆ. ನೋಯುತಾದಂತ ತೋಚುತದೆ. ನಾ ಹೋಗಿ ಆ ಕರಣೀಕರನ್ನ ನೋಡಿಕೊಂಡು ಬರುತೀನಿ. ಒಸಿ ಸೊಪ್ಪು ತರುತೀನಿ ಇವರ ಕಾಲಿಗೆ ಕಟ್ಟೋಕೆ. ಹಿಂಗ ಇವರನ್ನ ನೋಡಿಕೊಳ್ಳಿರ. ಏನಾದರೂ ಬೇಕಾದರೆ ಕರೀರ್ಯ, ಇಲ್ಲ ಮೋನನ ಕೈಲಿ ಹೇಳಿಕಳುವಿರ. (ಚಿಕ್ಕಯ್ಯ ಮೂರ್ಛೆಯಲ್ಲಿ ಮೊನಗುತ್ತಾನೆ.)
ಮೊಲ್ಲೆ	ಅವ್ವಯ್ಯಾ, ಪಾಪ, ಅದೇಸೊಂದು ನೋಯುತಾದೊ. ನಾವು ನೋಡಿಕೋತೀವಿ ಅಪ್ಪಾಜಿ ನೀ ಹೋಗಿ ಸೊಪ್ಪು ತಾ.
ಕಾಚ	ಬಂದಿ. ಬಾರೊ ಮೋನ. ಇಲ್ಲಿ ಆ ಹೈದನ್ನ ಇರು ಅನ್ನು. ಅವನಿಕೆ ತಿಳಿಯೋಕಿಲ್ಲ ನೀ ತರುವ್ಯಂತ ಸೊಪ್ಪ. (ಎಂದು ಮೋನನನ್ನು ಕರೆದುಕೊಂಡುಹೋಗುವನು. ಮೋನನು ಮೊಲ್ಲೆ ಚಿಕ್ಕಯ್ಯನನ್ನು ನೋಡುತ್ತಿರುವ ರೀತಿಯಿಂದ ಖಿನ್ನನಾಗಿ ಕಾಚನ ಹಿಂದೆ ನಡೆಯುವನು. ಹುಡುಗಿಯರು ಚಿಕ್ಕಯ್ಯನ ತಲೆಯ ಎರಡು ಕಡೆ ಕೂತು ಅವನನ್ನೇ ನೋಡುತ್ತಿರುವರು.)
ಮೋನಿ	ಇವನ ಮೀಶೆೊ, ಇವನ ಹುಬ್ಬೊ, ಮಿಗಿಲು ಅಂದಾಗದಾನೆ; ಅಲ್ಲ?

ಮೊಲ್ಲೆ	ಉಂ (ಎಂದು ತಲೆಯನ್ನು ಆಡಿಸಿ ಒಪ್ಪುತ್ತಾಳೆ).
ಮೋನಿ	ಅಂದಾಗದಾನೆ (ಎಂದು ಅವನ ಕುರುಳನ್ನು ತೀಡಿ ಕಣ್ಣಿಗೆ ತುಟಿಗೆ ಕೈಯಿಟ್ಟು ಕಣ್ಣಿಗೆ ಒತ್ತಿಕೊಳ್ಳುತ್ತಾಳೆ).
ಮೊಲ್ಲೆ	ಮೋನಿ, ನನ್ನ ಕಣ್ಣಿಗೆ ಒಸಿ ಇಕ್ಕು. (ಮೋನಿ ಅವಳ ಕಣ್ಣಿಗೂ ಒತ್ತುತ್ತಾಳೆ.)
ಚಿಕ್ಕಯ್ಯ	(ಕಣ್ತೆರೆದು ಮತ್ತೆ ಮುಚ್ಚಿ) ಯಾರು ಅದು?
ಮೋನಿ	ನಾ ಮೋನಿ.
ಮೊಲ್ಲೆ	ಮೋನಿ ನನ್ನ ಹೆಸರು ಹೇಳೆ. ನಿನಗೆ ನಾಕ ಇದಾನಲ್ಲ.
ಮೋನಿ	ನೀನೇನು ಇವನ್ನ ಮಾಡಿಕೊಂಡೀಯಾ ಮೊಲ್ಲೆ?
ಮೊಲ್ಲೆ	ಮಾಡಿಕೊಳ್ಳೋದೊ ಬಿಡೋದೊ. ನನ್ನ ಹೆಸರೂ ಹೇಳು.
ಮೋನಿ	ನಿನ್ನ ಹೆಸರೇಳೋಕೆ ನಾನ್ಯಾಕೆ ಬರಬೇಕು ಮೊಲ್ಲೆ? ನೀನೇ ಹೇಳು.
ಮೊಲ್ಲೆ	ನನಗೆ ನಾಚಿಕೆಯಾಗುತದೆ ಮೋನಿ.
ಮೋನಿ	ನಾಚಿಕೊಂಡರೆ ಆಗುತದಾವ್ವ? ಬೇಕು ಅನ್ನೋದು ತೋರಬೇಕು. (ಚಿಕ್ಕಯ್ಯ ಮತ್ತೆ ಕಣ್ಣು ತೆರೆಯುವನು.)
ಚಿಕ್ಕಯ್ಯ	ಯಾರು ಅದು?
ಮೊಲ್ಲೆ	ನಾ ಮೊಲ್ಲೆ.
ಚಿಕ್ಕಯ್ಯ	ಏನಾಯಿತು? ನನಗೆ ಕಾಲು ಬಹಳ ನೋಯುತದಲ್ಲ. ಅಪ್ಪಾಜಿ ಎಲ್ಲಿ?
ಮೊಲ್ಲೆ	ಇಲ್ಲೇ ಇತ್ತ ಹೋದರು ಬರುತಾರೆ.
ಚಿಕ್ಕಯ್ಯ	ನೀನ್ಯಾರವ್ವ ಹೆಣ್ಣುಮಗಳು ? ಇಲ್ಲೇನು ಬಂದೆ?

ಮೊಲ್ಲೆ	ನಾ ಇಲ್ಲೇ ಇರೋದು.
ಚಿಕ್ಕಯ್ಯ	ನೀನ್ಯಾರು ?
ಮೊಲ್ಲೆ	ಅಪ್ಪಾಜಿಯ ಮಗಳು.
ಚಿಕ್ಕಯ್ಯ	ಅಪ್ಪಾಜಿಯ ಮಗಳೆ (ಎಂದು ಎದ್ದು ಕುಳಿತು ಅವಳನ್ನೂ ಮೋನಿಯನ್ನೂ ನೋಡಿ ತಾನಿರುವ ಸ್ಥಳವನ್ನು ತಿಳಿದುಕೊಳ್ಳುವುದಕ್ಕೆ ಸುತ್ತ ಕಣ್ಣು ತಿರುಗಿಸುವನು).
ಮೋನಿ	ಕಾಕನ ಮಗಳು.
ಚಿಕ್ಕಯ್ಯ	ಕಾಕನ ಮಗಳೇ? ನಾವಿರೋದೆಲ್ಲಿ?
ಮೊಲ್ಲೆ	ಇದು ನಮ್ಮ ಹಾಡಿ.
ಚಿಕ್ಕಯ್ಯ	(ಮೆಲ್ಲನೆ ಎದ್ದು ನಿಲ್ಲುತ್ತಾನೆ. ನಡೆಯುವುದಕ್ಕೆ ನೋಡುತ್ತಾನೆ. ಆಗುವುದಿಲ್ಲ.) ಹ, ಹ, ಕಾಲು ಮುರಿದದೆಯೋ? ಏನೋ ಆಗ್ಯದೆಯೇ ನನಗೆ. ನನ್ನ ಇಲ್ಲಿ ಯಾರು ಕರತಂದರು?
ಮೊಲ್ಲೆ	ನಮ್ಮಪ್ಪಾಜಿ.
ಚಿಕ್ಕಯ್ಯ	ನಮ್ಮಪ್ಪಾಜಿ ಎಲ್ಲಿ? ಅವರನ್ನೂ ಹಿಡಿತಂದರೊ?
ಮೋನಿ	ಇಲ್ಲ. ಇನ್ನೊಬ್ಬರ ಕರತಂದವರೆ.
ಚಿಕ್ಕಯ್ಯ	ಓಹೊ ಹೀಗಾಯಿತ ಇದು (ಕುಳಿತು ಚಿಂತಿಸುವನು).
ಮೊಲ್ಲೆ	(ಮೋನಿಯನ್ನು ಒಂದು ಕಡೆಗೆ ಕರೆದುಕೊಂಡುಹೋಗಿ) ಯಾಕೆ ಮೋನಿ ಮುನಿಸಿಕೊಂಡದಾನೆ?
ಮೋನಿ	ಹಿಡಿದು ತಂದುಬಿಟ್ಟರೇ ಅಂತ ಇದ್ದಾತು.

ಮೊಲ್ಲೆ	ಹಳ್ಳದಾಗೆ ಬಿದ್ದ ಹುಲಿ ಹಂಗದಾನೆ. ಏನಾರ ಎರಡು ಮಾತು ಹೇಳಿ ಸಮದಾಯಿಸು.
ಚಿಕ್ಕಯ್ಯ	ನೀನು ಕಾಕನ ಮಗಳೇನವ್ವ?
ಮೊಲ್ಲೆ	ಹೌದು.
ಚಿಕ್ಕಯ್ಯ	ನೀನೋ ಅವ್ವ?
ಮೋನಿ	ನಾನು ಮೋನನ ತಂಗಿ. (ಚಿಕ್ಕಯ್ಯನು ಮೊಲ್ಲೆಯನ್ನು ಸುಮ್ಮನೆ ಸ್ವಲ್ಪಹೊತ್ತು ನೋಡುವನು.)
ಮೊಲ್ಲೆ	ಯಾಕ ಹಂಗ ನೋಡತಿ ನನ್ನ? ಚಂದಾಗದೀನಾ?
ಚಿಕ್ಕಯ್ಯ	(ಈ ಸ್ಪಷ್ಟೋಕ್ತಿಯಿಂದ ನಾಚಿ ನಕ್ಕು ತಲೆಯನ್ನು ತಿರುಗಿಸಿ) ಚಂದಾಕೆ ಇದೀಯ ಯಾಕಿಲ್ಲ? (ತನಗೆ ತಾನೇ) ಇದೇನಿಲ್ಲಿ ಯಾರೂ ಬೇರೆ ಜನವೇ ಇಲ್ಲ. ಈ ಇಬ್ಬರು ಹೆಣ್ಣುಮಕ್ಕಳನ್ನೇ ಬಿಟ್ಟು ಹೋಗಿದಾರೆ (ಎಂದು ಮೋನಿಗೆ) ಇಲ್ಲಿ ಹೈಕಳು ಯಾರೂ ಇಲ್ಲವೇನವ್ವ?
ಮೋನಿ	ಅದಾರೆ ಬರತಾರೆ. ನಿನಗೆ ಸೊಪ್ಪು ತರೋಕೆ ಹೋಗ್ಯಾರೆ.
ಚಿಕ್ಕಯ್ಯ	ನನಗೆ ಸೊಪ್ಪು ತರಾಕೆ ನಾನೇನು ಆಡಿನ ಮರಿ ಆದೇನೊ?
ಮೊಲ್ಲೆ	ನಿನ್ನ ಕಾಲ ಅದೇನೋ ಆಗ್ಯದ್ಯೆ, ಅದಕ್ಕೆ ಕಟ್ಟೋಕೆ ಸೊಪ್ಪು (ಮೋನ ಆದು ಏತರದೋ ಸೊಪ್ಪು ತರುವನು).
ಮೋನ	ಕಾಕ ಈ ಸೊಪ್ಪು ಅರೆಶಿಡು ಅಂದ. ಈಗಲೇ ಬಂದಾನಂತೆ ಹೆಗ್ಗಡೆ ಮಕ್ಕ ಕಾಲಿಗೆ ಕಟಲಾಕೆ. ಮೋನಿ ಇದ ಒಸಿ ಅರೆದಿಡು (ಎಂದು ಅವಳ ಕೈಗೆ ಸೊಪ್ಪನ್ನು ಕೊಡುವನು).

ಮೊಲ್ಲೆ	ಬಾ ಮೋನಿ ಅರೆಯೋಣ, ಅಪ್ಪಾಜಿ ಬರೋಮುಂದಾ (ಎಂದು ಸೊಪ್ಪನ್ನು ಅವಳ ಕೈಯಿಂದ ತೆಗೆದುಕೊಳ್ಳುವಳು. ಇವಳ ಆತುರದ ಕಾರಣವನ್ನು ಅರಿತಂತೆ ಮೋನಿ ಮೋನ ಒಬ್ಬರನ್ನೊಬ್ಬರು ನೋಡಿಕೊಳ್ಳುವರು.) ಮೋನ ಆ ಕಲ್ಲ ತತ್ತ ಇಲ್ಲಿ ಹಾಕು (ಎಂದು ಅವನಿಗೆ ಒಂದು ಕಲ್ಲನ್ನು ತೋರಿಸುವಳು. ಅವನು ಕಲ್ಲು ತಂದುಹಾಕಿ ಸೊಪ್ಪನ್ನು ಅರೆಯುವುದರಲ್ಲಿ ಕೆಲ ನಿಮಿಷ ಕಳೆಯುವುದು).
ಚಿಕ್ಕಯ್ಯ	ಅಯ್ಯಾ ನೀನ್ಯಾರು?
ಮೋನ	ಅಣ್ಣ ನನ್ನ ಮೋನ ಅಂತಾರ. ನಾ ಮೋನಿ ಅಣ್ಣ (ಎಂತ ತಂಗಿಯನ್ನು ತೋರುತ್ತಾನೆ).
ಚಿಕ್ಕಯ್ಯ	ನೀ ಮೊಲ್ಲೆಗೆ ಏನಾಗಬೇಕು.
ಮೋನ	ಇನ್ನೂ ಏನೂ ಇಲ್ಲ, ಏನಾರ ಆಗತೀನಿ ಅಂತೀನಿ. ಅವಳು ಒಪ್ಪಲ್ಲ.
ಚಿಕ್ಕಯ್ಯ	ನೀ ಕಾಕನಿಗೆ ಏನೂ ನಂಟಿಲ್ಲ?
ಮೋನ	ನಂಟ್ಯಾಕಿಲ್ಲ. ನಾ ಕಾಕನ ತಂಗೀ ಮಗ. (ಕಾಚ ಬರುತ್ತಾನೆ.)
ಕಾಚ	ಮೋನ, ಸೊಪ್ಪು ಅರದು ಆಯಿತೆ (ಎಂದು ಚಿಕ್ಕಯ್ಯ ಎದ್ದು ಕುಳಿತಿರುವುದನ್ನು ಕಂಡು) ಓ ಹೆಗ್ಗಡೆ ಮಕ್ಕ ಎದ್ದದಾರೆ. ಕೈಮುಗದೆ ನನ್ನೊಡೆಯ. (ಚಿಕ್ಕಯ್ಯನು ಅವನಿಗೆ ತಲೆಯನ್ನು ಸ್ವಲ್ಪ ಬಾಗುತ್ತಾನೆ, ಅವನನ್ನು ಸ್ವಲ್ಪ ಮೆಚ್ಚಿಕೆ ಸ್ವಲ್ಪ ಕೋಪದಿಂದ ನೋಡುತ್ತಾನೆ.) ಎಲ್ಲಿ

	ಈ ಕಾಲು ಹಿಂಗ ನೀಡಿರ. ಏನಾಗದೆ ನೋಡೋವ. ಬಾಳ ನೋಯುತದೆಯಾ?
ಚಿಕ್ಕಯ್ಯ	ನನ್ನ ಯೋಗಾ ಚೇಮಾನಾನಾ ಸುಳ್ಳು ಮಂದಿಗೆ ಹೇಳೋಲ್ಲ.
ಕಾಚ	ಯಾರು ಸುಳ್ಳು ಮುಂದಿ? ನಾನೊ?
ಚಿಕ್ಕಯ್ಯ	ಹೌದು. ನೀ ಸುಳ್ಳಲ್ಲವೇ?
ಕಾಚ	ಏನು ಸುಳ್ಳಾಡಿದಿ ನಾನು?
ಚಿಕ್ಕಯ್ಯ	ಕಾಕ ಬೇರೆ ಇದಾನೆ, ನಾ ಕಾಕ ಅಲ್ಲ ಅಂದ್ಯೆ. ನೀನೇ ಕಾಕ ಅಂತಾರೆ ಇವರು.
ಕಾಚ	ನಾ ಕಾಕ ಅಲ್ಲ ಅಂದೇ ಬದುಕಿ ಬರೋದು ಗಾಸಿ ಆಯಿತೇ. ನಾ ಕಾಕ ಅಂದಿದ್ದರೆ ನಿಮ್ಮ ಕರಣೀಕರು ಬಿಟ್ಟಿರೋರೆ. (ಮೊಲ್ಲೆ ಮೋನಿ ಇದೇನೋ ಮಾತಾಗುತ್ತಿದೆಯೆಂದು ಇವರ ಕಡೆ ನೋಡುತ್ತಿರುವರು.)
ಚಿಕ್ಕಯ್ಯ	ನೀನು ನಿಜ ಹೇಳಿದ್ದರೆ ನಾನು ನೋಡಿಕೋತಾ ಇದ್ದೆ.
ಕಾಚ	ನೋಡಿಕೋತಿದ್ದೋರು, ಒಮ್ಮೆ ಬಾಯಿ ತೆಗೆಯಲಿಲ್ಲೇ! ನೀವು ನೋಡಿಕೊಂಬೋರು ಅಂತ ನಮಕ ಹೆಂಗೆ ತಿಳಿಯಬೇಕು? ಆಯಿತು ಈ ಮಾತೆಲ್ಲ ಆಮೇಲೆ ಆಡಬಹುದು ಬನ್ನಿರ. ನಾ ಸುಳ್ಳಾದರೇನು ನಮ್ಮ ಸೊಪ್ಪು ಸುಳ್ಳಲ್ಲ. ನಿಮ್ಮ ಕಾಲು ವಾಸಿಯಾಗಿ ನಡೆಯೋಹಂಗಾಗಲಿ ಬನ್ನಿರ. (ಎಂದು ಮೊಲ್ಲೆಯ ಕೈಯಿಂದ ಸೊಪ್ಪಿನ ಉಂಡೆಯನ್ನು ತೆಗೆದುಕೊಳ್ಳುವನು. ಚಿಕ್ಕಯ್ಯನು ಸೊಪ್ಪನ್ನು ಹಾಕಿಸಿಕೊಳ್ಳುವುದೇ

	ಬೇಡವೇ ಎಂಬಂತೆ ಸೊಪ್ಪನ್ನೂ ಇವನ ಮುಖವನ್ನೂ ನೋಡುವನು.) ಯಾಕೆ ನನ್ನೊಡೆಯ ಈ ಸೊಪ್ಪು ಹಾಕ್ಕೊಂಡರೆ ಇನ್ನೇನಾದಾತೊ ಅಂತಲೊ?
ಚಿಕ್ಕಯ್ಯ	ಹಂಗೇ ಅನ್ನು, ಅದೇನಾದರೂ ನಂಜಿನ ಸೊಪ್ಪಾಗಿದ್ದರೆ?
ಮೋನಿ	ಅವ್ವಯ್ಯ. ನಾಯಿ ಕಾಲಿಗೆ ನಂಜಿನಸೊಪ್ಪ ಕಟ್ಟೋಲ್ಲ ಕಾಕ, ನಿನ್ನ ಕಾಲಿಗೆ ಕಟ್ಟುತಾನೆಯಾ?
ಚಿಕ್ಕಯ್ಯ	ನೋಡಿದ್ಯಾ ಕಾಕ?
ಕಾಚ	ನೋಡಿದಿ, ಕಾಕ. ತಾಯ ಕಾಣದ ತರುವಳಿ ಊರ ಹೆಣ್ಣನೆಲ್ಲ ತಾಯಂತು. ಕಾಕನ್ನ ಕಾಣದ ಮಕ್ಕಳು ನನ್ನ ಕಾಕ ಅನ್ನದೆ ಏನು ಮಾಡುತಾರೆ. ಇಲ್ಲಿ ಇಲ್ಲಿ ಕಾಲುಕೊಡಿರ. (ಎಂದು ಚಿಕ್ಕಯ್ಯನ ಕಾಲು ಹಿಡಿದು) ಎಲ್ಲಿ ನೋವುತದೆ? ಇಲ್ಯ ಇಲ್ಯ (ಎಂದು ಬಲಗಾಲಿನ ಅಡಿಯಿಂದ ಮೊಣಕಾಲಿನವರೆಗೆ ಅವುಕಿ ಅವುಕಿ ಕೇಳುವನು).
ಚಿಕ್ಕಯ್ಯ	ಅಹ, ಅಹ (ಎಂದು ಮೊನಗುವನು).
ಮೊಲ್ಲೆ	ಅಪ್ಪಾಜಿ, ನೊಂದಾತು ಅಪ್ಪಾಜಿ, ಮೆಲ್ಲಕೆ ಕಟ್ಟು.
ಕಾಚ	ಮೆಲ್ಲಕೇ ಅವ್ವ ಮೆಲ್ಲಕೇ. ಎಲಾ ಮೋನ ಇಲ್ಲಿ ಹಿಡೀ ಬಾ. (ಮೋನ ಚಿಕ್ಕಯ್ಯನ ಕಾಲನ್ನು ಸ್ವಲ್ಪ ಒರಟಾಗಿ ಹಿಡಿಯುವನು.)
ಮೊಲ್ಲೆ	ಮೆಲ್ಲಕೆ ಮೋನ, ಮೆಲ್ಲಕೆ. ನೊಂದಾತು ಹೆಗ್ಗಡೆ ಮಕ್ಕಕೆ.
ಮೋನ	ನೋಯದ ಹಂಗೆ ಕಾಲ ಹಿಡಿಯೋಕೆ ನಾನೇನು ಹೆಣ್ಣು ಮೊಗಾನಾ ಮೊಲ್ಲೆ? ಮೆಲ್ಲಿಕೆ ಮೆಲ್ಲಿಕೆ ಅನ್ನೋಳು ಬೇಕಾದರೆ ನೀನೇ ಬಂದು ಹಿಡಿ.

ಮೊಲ್ಲೆ	ಆಗಲಿ ಹಿಡೀತೀನಿ ಏಳು, ಬಿಡು ನೀನು. (ಎಂದು ಅವನನ್ನು ಬಿಡಿಸಿ ತಾನು ಅದನ್ನು ಹಿಡಿಯುವಳು.)
ಕಾಚ	ಅದೀಗ ಜಾಣ, ಎಲಾ ಮೋನ, ಹೋಗಿ ಗೌಡನ್ನ ಬರಹೇಳು. ನೀನೋ ನಾಕನೋ ಈಗಲೇ ಹೆಗ್ಗಡೆಗಳ ಪಾಳ್ಯಕ್ಕೆ ಹೋಗಿ, ನೀವು ಹಾಡೀಮೇಲೆ ಬರೋದು ಗಿರೋದು ಬ್ಯಾಡ, ನಾವು ಬಂದು ಮಾತನಾಡುತೀವಿ, ಹಂಗಲ್ಲದೆ ಹಾಡೀಮೇಲೇನಾರ ಬಂದರೆ ನಿಮ್ಮ ಕರಣೀಕರದೂ ನಿಮ್ಮ ಮಕ್ಳದೂ ಉಸುರು ತೆಗೀತೀವಿ, ಅಂತ...
ಮೊಲ್ಲೆ	ಅಯ್ಯೋ ಅಪ್ಪಾಜೀ!
ಕಾಚ	(ಅವಳಿಗೆ) ಅವ್ವಾ ನೀ ಸುಮ್ಮಕಿರು. (ಮೋನನಿಗೆ) ನಾವು ಬಂದು ಮಾತಾಡುತೀವಿ, ಅದಕೆ ಮುಂದಾಗಿ ಹಾಡೀ ಮೇಲೆ ಬಂದುಗಿಂದರೆ ಇವರ ಉಸುರು ತೆಗೀತೀವಿ, ಅಂತ ಹೇಳಿದಿ ಅಂತ ತಿಳಿಸಬೇಕು. ಹೋಗು ಗೌಡನ್ನ ಕರತಾ ಬೇಗನೆ, ಬೇಗನೆ. (ಎಂದು ಸೊಪ್ಪನ್ನು ಕಟ್ಟಿ ಮುಗಿಸಿ) ಬನ್ನಿ ನನ್ನೊಡೆಯ, ಈ ಬೂಡಾಗೆ ಒಸಿ ಮಲಗೋರಂತೆ (ಎಂದು ಚಿಕ್ಕಯ್ಯನನ್ನು ಎತ್ತಿಕೊಂಡು ಒಂದು ಕಡೆಗೆ ಹೋಗುತ್ತಾನೆ. ಮೋನ ಒಂದು ಕಡೆಗೆ ಹೋಗುತ್ತಾನೆ).
ಮೊಲ್ಲೆ	ಅಯ್ಯೋ ಅಯ್ಯೋ (ಎಂದು ತಡೆಯಲಾರದೆ ಅಳುತ್ತಾಳೆ).
ಮೋನಿ	ಮೊಲ್ಲೆ, ಇದ್ಯಾಕವ್ವ? ಏನಾತು? ಏನಾತು?
ಮೊಲ್ಲೆ	ಅಪ್ಪಾಜಿ ಹೆಗ್ಗಡೆ ಮಕ್ಕನ ಜೀವ ತೆಗೀತೀನಿ ಅಂದನಲ್ಲ ಮೋನಿ.

ಮೋನಿ	ಅವ್ವಾ ಅವ್ವ, ಹೆಗ್ಗಡೆ ಮಂದಿ ಹಾಡೀಮೇಗೆ ಬರದಿರಲಿ ಅಂತ ಹಂಗಂದ ಕಾಕ, ಇದಕೇ ಅಳೋದೆ?
ಮೊಲ್ಲೆ	ಹೆಗ್ಗಡೆ ಮಂದಿ ಬಂದರೆ?
ಮೋನಿ	ಅವ್ವಾ ಅವ್ವಾ, ನನ್ನ ಮೊಲ್ಲೆ ಹೂವಾ, ಹೆಗ್ಗಡೇಗೆ ಇವ ಮಕ್ಕ ಕಾಣವ್ವ. ಇವನ ಉಸುರು ಅಂದರೆ ನೀನೇ ಹಿಂಗೆ ಅಳಬೇಕಾದರೆ ಆ ಹೆತ್ತಪ್ಪ ಮಕ್ಕನ ಕಳಕೊಂಡು ನಕ್ಕಾನಾವ್ವ? ಮಂದೀನ ಹಾಡೀಮೇಲೆ ತಂದಾನಾವ್ವ? ಬಾಯಿತ್ತ. ಗೌಡ ಬಂದ. ಹಿಂದಾ ಕಡೆ ಮೋನ ಅದಾನೆ. ನೀ ಅಳೋದು ನೋಡಿ ಏನಂತ ಕೇಳ್ಯಾರು! (ಎಂದು ಅವಳನ್ನು ಕರೆದುಕೊಂಡುಹೋಗುತ್ತಿರುವಳು.)
ಗೌಡ	ಎಲವ್ವಾ ಮೋನಿ ಕಾಕ ಎಲ್ಲಿ?
ಮೋನಿ	ಇಕೋ ಇಲ್ಲಿ ಈ ಬೂಡಾಗ (ಎಂದು ಕೈತೋರುವಳು. ಎಲ್ಲರೂ ಹೋಗುವರು).

೭

[ಅದೇ ಸ್ಥಳ. ಆರು ದಿನದಮೇಲೆ. ಕಾಚ.]

ಕಾಚ	(ತನಗೆ ತಾನೇ ಹಾಡಿಕೊಳ್ಳುತ್ತಿದಾನೆ.) ಮಾದೇಶ್ವರಾ ನಿನ್ನ ನಂಬದಾ ಮಂದಿ ಬಾಳಲ್ಲ ಸಾಯಲ್ಲ ಬಾಡುವರು ಕಂದಿ, ಮಾದೇಶ್ವರಾ ನನ್ನ ಸಲಹೆಂದ ಉಸುರು ಬಾಡಲ್ಲ ಬಳಲಲ್ಲ ಎಂದೆಂದು ಹಸುರು. ಮಾದೇಶ್ವರಾ ನಿನ್ನ ನಂಬದಾ ಬಾಳು ಹುಲ್ಲಲ್ಲ ಮಣ್ಣಲ್ಲ ಹೊಟ್ಟಲ್ಲ ಹಾಳು, ಮಾದೇಶ್ವರಾ ನೀನೆ ಗತಿಯೆಂದ ಬಾಳು ಹೊಟ್ಟಲ್ಲ ಬರಡಲ್ಲ ಜಾಳಲ್ಲ ಕಾಳು. ಮಾದೇಶ್ವರಾ ನಿನ್ನ ಕಾಣದಾ ಕೊಬ್ಬು ಹೆರೆಯಿಲ್ಲದಿರುಳಿನಾ ಕಾವಳದ ಮಬ್ಬು. ಮಾದೇಶ್ವರಾ ನೀನೆ ನಡಸಂದ ಜೀವಾ ನಗುವುದು ನಲಿಯುವುದು ಅದು ಎಲ್ಲತಾವಾ ಮಾದೇಶ್ವರಾ ನೀನೆ..... (ಗೌಡ ಬರುತ್ತಾನೆ.) ಬಾ ಗೌಡಣ್ಣ.
ಗೌಡ	(ಬಂದು) ತಮ್ಮಗೌಡ ಮೈಸೂರಕ ಹೋಗಿ ಹತ್ತು ದಿನ ಆಯಿತೇ?
ಕಾಚ	ಆಯಿತಲ್ಲಪ್ಪ. ಹತ್ತು ದಿನ ಆಯಿತು. ಅವನ ಸುದ್ದಿಯಿಲ್ಲೆ!

ಗೌಡ	ಅರಸರು ಊರಾಗಿಲ್ಲೇನೊ?
ಕಾಚ	ಹಂಗಾರೆ ಇವನು ಹಿಂದಕ ಬರಬೇಕಾಗಿತ್ತು.
ಗೌಡ	ಕರಹಟ್ಟಿ ತಾಕ್ಕೆ ಬರಲಿಲ್ಲೇನೊ?
ಕಾಚ	ಏನೊ?
ಗೌಡ	ಇಲ್ಲ ಇವ ಹೇಳಿಕೊಂಡರೆ ತಿಳೀಲಿಲ್ಲೊ?
ಕಾಚ	ಏನೋ ಕಾಣಲಿಲ್ಲೆ?
ಗೌಡ	ಇಲ್ಲ ಎತ್ತಾಗಾದರೂ ಹಾಳಾಗಿಹೋಗಲಿ ಎಂದುಬಿಟ್ಟರೊ.
ಕಾಚ	ಹೆಂಗಾರ ಇವನು ಹಿಂದಕ್ಕೆ ಬರಬೇಕಲ್ಲಪ್ಪ. ಅರಸರು ನನ್ನ ಮರತರೇನೂ ಸೋಜಿಗ ಅಲ್ಲ ಅನ್ನು. ಅಂದರೆ ಅವರು ಮರೆಯೋರಲ್ಲ. ಅಲ್ಲದೀರ ನಾನು ಈ ಕೈಯಿಂದ ಅವರ ಕಾಲು ಮುಟ್ಟಿ ಆನೆಯಿಂದ ಇಳಿಸಿವಿನಿ. ಮರತಿಲ್ಲ ಅವರು. ಅಂದರೇನಾಯಿತೋ ತಿಳೀಲ್ಲೆ!
ಗೌಡ	ತಮ್ಮಗೌಡ ಬರೋದು ಇನ್ನಾ ದಿನಾ ಆದರೆ ಏನು ಮಾಡೋದು?
ಕಾಚ	ನೋಡು ಗೌಡಣ್ಣ. ನನ್ನ ಹಣ್ಯಾಗಿನ ಬರಾವು ಕೆಟ್ಟದು. ಅದು ನನ್ನ ಜನಕೆ ತಟ್ಟಿತು. ಎಲ್ಲಾ ಗೆಲ್ಲತಾ ಬಂದಿನೆ, ಇದನೂ ಗೆಲ್ಲತೀನಿ, ಇದು ದೇವರ ಮನಸು ಅಂತ ತಿಳಿದಿ. ನಾನು ಯಾವ ಹೊತ್ತಿನಾಗ ಮೈಸೂರಿಗೆ ಹೋದೆನೊ, ಈ ಜನಾನ ಏನಾರ ಮಾಡಿ ಅರಸರಿಗೆ ಒಪ್ಪಿಸಬೇಕು ಅಂತ ಅಂದುಕೊಂಡೆ. ಇವರಿಗೆ ಇತ್ತಾಗ ಕಾಡು

	ಇತ್ತಾಗ ಹೆಗ್ಗಡೆ ಆದರೆ ಉಳಿಬಾಳಿಲ್ಲ ಅಂತ ನನಗೆ ಕಂಡತು, ನೋಡಿದ್ಯಾ? ಅದಕಾಗಿ ಈಸು ಮಾಡಿದ್ದಾಯಿತು. ಹೆಗ್ಗಡೆ ಇತ್ತಲಾಗೆ ಬಂದದ್ದು, ಕಾಕನ್ನ ಕರತಾ ಅಂದದ್ದು, ಆವತ್ತು ಹೋಗತಾ ದಾರೀಲಿ ಸತ್ತ ಹಾವು ತಾನೇ ಕಂಡದ್ದು, ಈ ಹೈದ ನನ್ನ ಅಟ್ಟಿಸಿಕೊಂಡುಬಂದು ಬಿದ್ದದ್ದು, ಎಲ್ಲಾ ನೋಡಿದರೆ ಈ ಆಟ ನಮ್ಮ ಕಡೆಗೆ ಗೆಲ್ಲಬೇಕು ಅನಸತದೆ. ಅರಸರು ಈಗ ಬರಬೇಕು; ನಮ್ಮ ಜನದ ಕೈಹಿಡಿಯಬೇಕು; ನಾವು ಬದುಕಬೇಕು. ಬರಬೇಕು; ಬರಲಿಲ್ಲ. ಹಂಗಾರೆ ಏನು ಮಾಡೋದು? ಈಸೆಲ್ಲ ಆದದ್ದು ಕೆಟ್ಟುಹೋಯಿತು ಅನ್ನೋದು, ಹೆಗ್ಗಡೆ ಹತ್ತಿರ ತಪ್ಪಾಯಿತು ಅಂತ ಹೇಳಿ ಎಂದಿನಂತೆ ಹೊಡಬಾಳು ಬಾಳೋದು. ನನ್ನ ಬರಾವು ಕೆಟ್ಟದು ಅನ್ನೋದು, ನನ್ನ ದಾರಿ ನಾ ಹಿಡೋದು.
ಗೌಡ	ಅನಕಾ ನೀ ಹೇಳಿಕಳುವಿಶಿದರೆ ಅರಸರು ಬರುತಾಕೆ ಅಂದ್ಯೆ. ನನಗೆ ಅನಸತದೆ, ಇದನ್ನ ಹೆಂಗೆ ಹೇಳೋದು, ಬಂದರಾತು ಇಲ್ಲದಿದ್ದರೆ ಇಲ್ಲ, ಅಂತ. ಏನೋ, ದೊರೆಗಳ ಮನಸು, ಹೆಂಗೆ ಹೇಳೋದು?
ಕಾಚ	ಗೌಡಣ್ಣ. ದೊರೆಗಳ ಮನಸು ಸರ್ಯೆ. ಅಂದರೆ ರಣಧೀರನ ಮನಸು ಅದ್ಯೆ, ನಮ್ಮ ಈ ದೊರೆಗಳ ಮನಸು, ನೀ ಕಾಣೆ, ಅದ. ಆ ಕಾಲು ನಾ ಮುಟ್ಟಿವಿನಿ. ಆ ನಾಲಿಗಿಂದ ಕಾಚ ಅಂತ ಕರೆಸಿಳೊಂಡಿವಿನಿ. ನೀ ಹೇಳಿಕಳುಹು ನಾವು ಬರುತೀವಿ ಅಂತ ಮಾತಕೊಂಡಿವಿನಿ. ಬರತೀವಿ ಅಂತ ಅರಸರು ಬಾರದೀರ ಇದ್ದರೆ ನಾ ಏನ ಮಾಡಲಿ ಗೌಡಣ್ಣ.

ಗೌಡ	ಅದೇನದು ಆದದ್ದು, ನೀನು ಅರಸರನ್ನ ಮುಟ್ಟಬೇಕಾದರೆ, ನಿನ್ನ ಅವರು ಹಂಗೆ ತಿಳೀಬೇಕಾದರೆ, ನೀ ಕರದರೆ ಬರುತೀವಿ ಅನಬೇಕಾದರೆ.
ಕಾಚ	ಬಂದಿದ್ದರೆ ಆ ಮಾತು ಹೇಳಬಹುದಿತ್ತು. ಈಗ ಅದ್ನೇನ ಮಾಡೋದು? ಬಾ,ಇನ್ನೊಂದು ಮಾತು ಮಾಡಿ ನೋಡೋಣ. ಈ ಕರಣೀಕರ ಕೈಲಿ ಅರಸರಿಗೆ ಒಂದು ಅರಿಕೆ ಬರದು ಕಳುಹೋದು. ನಾಕನಿಗೆ ಕೊಟ್ಟು ಮೈಸೂರಕ ಹೋಗಿ ತಮ್ಮಗೌಡನಿಗೆ ಸಲ್ಲಿಸಿ, ಅದನ್ನ ಏನಾರ ಮಾಡಿ ಅರಸರಿಗೆ ಮುಟ್ಟಿಸಬೇಕು, ಮುಟ್ಟಿಸಿದರೂ ಸರ್ಯೆ, ಬಿಟ್ಟಿರೂ ಸರ್ಯೆ, ಆದದ್ದೇನು ಅಂತ ನಾಕನ ಕೈಲಿ ಹೇಳಿಕಳುಹಿಸಬೇಕು, ಅಂತನ್ನೋದು. ನಾಕ ನಾಲ್ದು ದಿನಕ ಬರತಾನೆ. ಆವತ್ತು ಹಣ್ಣಾದರೂ ಸರ್ಯೆ, ಕಾಯಾದರೂ ಸರ್ಯೆ. ಹೆಗ್ಗಡೆ ಮಕ್ಕನ್ನ, ಕರಣೀಕರನ್ನ ಹಿಂದಕ್ಕೆ ಕಳುವಿಬಡೋದು.
ಗೌಡ	ಕಂದಾಯದ ಮಾತು?
ಕಾಚ	ಅದಕ್ಕೆ ನೀವುಂಟು ಹೆಗ್ಗಡೆ ಉಂಟು. ನಾ ಏನಾದರೂ ದಾರೀ ಹಿಡೀತೀನಿ. ತಪ್ಪುದಾರೀಗೆ ಎಳದೋನು ಅಂತ ಜನ ಹೆಗ್ಗಡೆಗೆ ಹಿಡಿದುಕೊಡೋದಾದರೂನೂ ನನಗೆ ಒಪ್ಪಿಗೇನೆ.
ಗೌಡ	ಆ! ಯಾತರ ಮಾತು ಆಡತೀ ಬಿಡು! ಬಾ, ಹೋಗೋಣ ಕರಣೀಕರ ತಾಕ್ಕೆ (ಎಂದು ಹೋಗುವರು. ಮೊಲ್ಲೆ ಮೋನಿ ಬರುವರು).
ಮೋನಿ	ನೀ ಹೆಗ್ಗಡೆ ಮಕ್ಕನ್ನ ನಮ್ಮ ಹಾಡಿಯಾಗಿನ ಹೈದ ಅಂತ ತಿಳಿದಾ ಮೊಲ್ಲೆ?

ಮೊಲ್ಲೆ	ಅದ್ಯಾಕಂತಿ?
ಮೋನಿ	ಯಾಕಂತಿ? ನೀ ಹಂಗ ಆಡತಿ! ನೀ ಈಗ ಇವಗೆ ಮಾಡೋ ಹಂಗೆ ನಾ ನಾಕಗೆ ಮಾಡಿದಿ ಕಾಡಿಗೆ ಹೋಗೋ ಮುಂದ.
ಮೊಲ್ಲೆ	ಏನ ಮಾಡಿದಿ ಹೇಳು?
ಮೋನಿ	ಅವ ಇದ್ದ ತಾವು ಇರತೀನಿ ಅನ್ನೋದು; ಅವ ಹೋದ ತಾವು ಹೋಗತೀನಿ ಅನ್ನೋದು; ಬೇಕಂದರೂ ಬ್ಯಾಡಂದರೂ ಅವನ್ನ ಮುಟ್ಟತೀನಿ ಅನ್ನೋದು; ನಾಯಿ ಹಿಂದೆ ತಿರುಗೋ ನಕ್ಕನ ಹಂಗೆ ಅವ ಎತ್ತ ಹೋದರೆ ಅತ್ತ ಕಣ್ಣಾಡೋದು.
ಮೊಲ್ಲೆ	ಮೋನಿ ದಿಟವಾಗಿ ನನಗೆ ಹಿಂಗೇ ಆಗದೆ ಈಗ. ಹೆಗ್ಗಡೆ ಮಕ್ಕನ್ನ ನಂಗೆ ಹೆಂಗಾರ ಮಾಡಿಸಿಕೊಡಬಾರದೇನೆ?
ಮೋನಿ	ಅದನೇ ಮೊಲ್ಲೆ ನಾ ಹೇಳಿದ್ದು. ಇವತ್ತು ಇದ್ದು ನಾಳೆ ಅವರ ಕೋಟೆಗೆ ಹೋಗೋನ್ನ ನೀ ಹಿಂಗೆ ಒಲದದೀಯ. ಇದೇನುಮಾತು ಅಂತ?
ಮೊಲ್ಲೆ	ಹೋಗೋಕಂಟ ಚೆನ್ನಾಗಿದ್ದರಾತು.
ಮೋನಿ	ಏನು ಒಂದು ದಿನ?
ಮೊಲ್ಲೆ	ಯಾಕೆ? ಇವರು ನಾಳೆ ಹೋಗತಾರಂತೇನು?
ಮೋನಿ	ನಾಳೆ ಅಲ್ಲದೀರ ಇದ್ದರ ನಾಲ್ಕು ದಿನಕ ಹೋಗತಾರ.
ಮೊಲ್ಲೆ	ನಾಲ್ಕು ದಿನ ಸಾಕು, ಮೋನಿ. ಹೆಗ್ಗಡೆ ಮಕ್ಕನ್ನ ಕೇಳುತೀಯೇನೆ?

ಮೋನಿ	ಏನಂತ ಮೊಲ್ಲೆ ಕೇಳೋದು? ಕೂಡಿದರೆ ಕೂಡಿ ಇರಬೇಕು. ಇಂದು ಕೂಡಿ ನಾಳೆ ಬಿಟ್ಟರೆ ಬೂಡಿನ ಹೊರಾಕ್ಕೆ ನಿಲಸತಾರೆ. ನೀ ಕಾಣ್ಯಾವ್ವ?
ಮೊಲ್ಲೆ	ನಿಲ್ಲಿಸಲಿ ಮೋನಿ. ನಿಂತಬಿಡುತೀನಿ.
ಮೋನಿ	ಕಾಕನ ಮಗಳು?
ಮೊಲ್ಲೆ	ಕಾಕನ ಮಗಳಾದರೇನು? ಆಚೆಗೆ ನಿಲ್ಲು ಅಂದರೆ ನಿಲ್ಲೋದೆ.
ಮೋನಿ	ಅರಿಯದ ಮೊಗಾನ್ನ ಬಟ್ಟೆಗೆಡಿಸಿದಳು ಅಂತ ನನ್ನ ಸಿಗಿಯುತಾರಲ್ಲವ್ವ?
ಮೊಲ್ಲೆ	ನೀ ಇದರ ಮಾತಿಗೆ ಬಂದಿ ಅಂತ ನಾ ಹೇಳೋಲ್ಲ.
ಮೋನಿ	ಯಾರ್ಯಾಕೆ ಹೇಳಬೇಕು ಮೊಲ್ಲೆ. ಹಾಡೀ ಎಲ್ಲ ಬಲ್ಲುದು ಇದನ. ನಾಕ ನನಮೇಲೆ ಏನು ಸಿಟ್ಟ ಅಂತೀಯಾ!
ಮೊಲ್ಲೆ	ಯಾಕಂತೆ?
ಮೋನಿ	ನಿನ್ನ ಹೆಸರಿಟ್ಟು ನಾನು ಹೆಗ್ಗಡೆ ಮಕ್ಕನ ಹಿಂದೆ ಅಲೀತೀನಂತೆ.
ಮೊಲ್ಲೆ	ಮೋನಿ ನೀ ದಿಟವಾಗಿ ಹೇಳು ಹೆಗ್ಗಡೆ ಮಕ್ಕ ಚಂದಾಗಿದಾನಲ್ಲ?
ಮೋನಿ	ಅವನ ಹುಬ್ಬು ತುಟಿ ಚಂದಾಗವೆ. ಮಿಕ್ಕೋದು ನಾಕನೇ ಚಂದ.
ಮೊಲ್ಲೆ	ನಾಕ? ಏನಂದಿ ಮೋನಿ! ಮೋನಿ, ಆ ಮಾತತ್ತಿರಲಿ ಹೆಗ್ಗಡೆ ಮಕ್ಕನ್ನ ಕೇಳೋಣೇನೆ?

ಮೋನಿ	ಕೇಳೋನೆಂದರೆ ಕೇಳೋನವ್ವ. ಇಕೊ ಹೆಗ್ಗಡೆಯ ಮಕ್ಕ ಬಂದೇ ಬಂದ. ಏನಾರ ಮಾತನಾಡಿಸು. ಹೊರಡೋ ಮುಂದ ಅವನ ಕಣ್ಣಿಗೆ ಈ ಕಲ್ಕ ಹಚ್ಚು. ಒಲದು ನೋಡತಾನೆ. (ಚಿಕ್ಕಯ್ಯ ಬರುತ್ತಾನೆ.)
ಚಿಕ್ಕಯ್ಯ	ಏನು ಮೊಲ್ಲೆ, ಮೋನಿ.
ಮೋನಿ	ಕೈಮುಗಿದಿವ, ಒಡೆಯ. (ಮೊಲ್ಲೆ ಮಾತನಾಡುವುದಿಲ್ಲ) ಮೊಲ್ಲೆ ಮಾತಾಡೆ.
ಮೊಲ್ಲೆ	ಕೈಮುಗಿದಿವಿ, ಒಡೆಯ.
ಚಿಕ್ಕಯ್ಯ	ಕಾಕನ ಸೆರೆಯಾಳು ನಾನು. ನನಗೇನು ಕೈಮುಗೀತೀವ್ವ?
ಮೊಲ್ಲೆ	ನಿನ್ನ ಕಾಲು ಹೆಂಗದೆ ಈಗ?
ಚಿಕ್ಕಯ್ಯ	ಸರಿಯಾತು, ನಡೀತೀನಿ. ಬಾವಿಲ್ಲ, ನೋವಿಲ್ಲ.
ಮೋನಿ	ಮೊಲ್ಲೆ, ಕಾಲು ಸರಿಯಾತ ನೋಡು, ಇಲ್ಲ ಒಸಿ ಸೊಪ್ಪು ತರೋನೊ? ಕುಂತಿರು ನನ್ನೊಡೆಯ, ಮೊಲ್ಲೆ ಕಾಲು ನೋಡಲಿ. (ಚಿಕ್ಕಯ್ಯನು ಕುಳಿತುಕೊಳ್ಳುವನು.)
ಮೊಲ್ಲೆ	(ಅವನ ಕಾಲ ಬಳಿ ಕುಳಿತು ಕಾಲನ್ನು ಮುಟ್ಟಿ ಅವುಕಿ) ನೋಯುತದಾ? ನೋಯುತದಾ?
ಚಿಕ್ಕಯ್ಯ	ಇಲ್ಲ ಅಂದಿನೇ, ನೋವು ಒಸೀನೂ ಇಲ್ಲ.
ಮೋನಿ	ಒಡೆಯನಿಗೆ ಇಲ್ಲಿ ಹೊತ್ತು ಕಳೆಯೋದೇ ಗಾಸಿ. ಹಾಡೀ ಹೈಕಳಾದರೆ ಕಾಡಿಗೆ ಹೋಗಿ ಬರತಾರೆ.

ಚಿಕ್ಕಯ್ಯ	ಗಾಸಿ ಏನೂ ಇಲ್ಲ. ನೀನೂ ಮೊಲ್ಲೆ ಮಾತಾಡಸತಾ ಇದ್ದರೆ ನೋಡುತ ಇದ್ದಹಂಗೆ ಹೊತ್ತು ಹೋಗತದೆ.
ಮೊಲ್ಲೆ	ಮೋನೀ (ಎಂದು ಸಂತೋಷದಿಂದ ಅವಳ ಕಡೆ ನೋಡುತ್ತಾಳೆ).
ಮೋನಿ	ನೆನ್ನೆ ನಮ್ಮ ಹೈಕಳು ಕುಣಿದದ್ದು ಚಂದಾಗಿತ್ತು ಅಂದಿ. ನಮ್ಮ ಮೊಲ್ಲೆ ಒಂದು ಹೊತ್ತುಟ್ಟು ಕುಣಿತ ಅಂತ ಕುಣೀತಾಳೆ. ಬಹಳ ಚಂದಾಗಿರತಾದೆ.
ಚಿಕ್ಕಯ್ಯ	ದಿಟವಾಗಿ? ಇವತ್ತು ನೋಡಬಹುದು.
ಮೋನಿ	ಹೊರಗಿನ ಮಂದಿ ಮುಂದೆ ಹೆಣ್ಣುಮಕ್ಕುಳು ಕುಣೀಬಾರದಂತಾರೆ.
ಚಿಕ್ಕಯ್ಯ	ನಾ ಯಾಕೆ ಹೊರಗಿನ ಮಂದಿ, ನಾವು ಕೋಟೆ ಕುರುಬರು, ನೀವು ಹಾಡೀ ಕುರುಬರು. ನಮ್ಮ ಹೆಣ್ಣುಮಕ್ಕಳೂ ಕುಣಿಯುತಾರೆ.
ಮೋನಿ	ನಿಮ್ಮ ಕುಣಿತ ಬೇರೆ ಹಂಗೆ ಇರಬೇಕು. ಮೊಲ್ಲೇ ಹೊತ್ತುಟ್ಟು ಕುಣಿತ ಒಸಿ ತೋರಿಸು ಒಡೆಯನಿಗೆ.
ಮೊಲ್ಲೆ	ನೀ ಹಾಡಿ ಪರೆ ಕುಟ್ಟುತೀಯಾ ಮೋನಿ.
ಮೋನಿ	ಊಂ ಕುಟ್ಟುತೀನಿ. (ಎಂದು ಮೆಲ್ಲನೆ ಕೈಯಿಂದ ತಾಳ ಹಾಕುತ್ತ ಹಾಡುವಳು; ಮೊಲ್ಲೆ ಕುಣಿಯುವಳು.) ನೇಸರ ನೋಡು ನೇಸರ ನೋಡು ನೇಸರ ನೋಡು ನೇಸರ ನೋಡು ॥ ಮೂಡಣ ಬೈಲಿಂದ ಮೇಲಕೆ ಹಾರಿ ದೂರದ ಮಲೆಯಾ ತಲೆಯನೆ ಏರಿ

	ನೇಸರ ನೋಡು ನೇಸರ ನೋಡು ॥ ದೂರದ ತಗ್ಗಿಂದ ಬಾನಿಗೆ ಚಿಗಿದು ಮಲೆಗಳ ತಲೆಯನು ಮೆಟ್ಟಿ ನೆಗೆದು ನೇಸರ ನೋಡು ನೇಸರ ನೋಡು ॥ ಹೊರಳಿತು ಇರುಳು ಬೆಳಕಿನ ಬೂಡು ತೆರೆಯತು ನೋಡು ಬೆಳಗಿತು ನಾಡು ನೇಸರ ನೋಡು ನೇಸರ ನೋಡು ॥ ಬಣ್ಣವೇನೊ ಇದು ಪರಿಪರಿ ಪರಿಯಾ ಮಾದೇಶ್ವರನಿಗೆ ಕಡಿದರೊ ಮರಿಯಾ ನೇಸರ ನೋಡು ನೇಸರ ನೋಡು ॥ ಪರಿಪರಿ ಬಣ್ಣದ ಹಾರುವ ಹಕ್ಕಿ ಮಾಡಿತು ನೋಡೋ ಅಕ್ಕಿ ಬಿಕ್ಕಿ ನೇಸರ ನೋಡು ನೇಸರ ನೋಡು ॥ ಅಕ್ಕೀ ಬಿಕ್ಕಿ ಆಯಿತು ಚಿಕ್ಕೀ ಬೆದರಿತು ಓಡಿತು ಹಾಡಿತು ಹಕ್ಕೀ ನೇಸರ ನೋಡು ನೇಸರ ನೋಡು ॥ ಹಾಡಿತು ಕೇಳೋ ಕೋಗಿಲೆ ಗೊರವ ಗೂಡನೆ ಬಿಟ್ಟು ಸಾರಿತು ಮರವ ನೇಸರ ನೋಡು ನೇಸರ ನೋಡು ॥ ಹಾಡುವ ಹಕ್ಕಿಯ ಕೊರಲನು ಹೇಳು

	ದನಿಯಿದು ಎನಿತು ಐದಾರೇಳು ನೇಸರ ನೋಡು ನೇಸರ ನೋಡು ॥ ಮರವನು ಸಾರಿದ ತಾಯನು ಕರೆದು ಮೊರೆಯುತ ಇದೆ ಮರಿ ಹಂಗನು ತೊರೆದು ನೇಸರ ನೋಡು ನೇಸರ ನೋಡು ॥ ಹಂಗನು ತೊರೆದೇ ಹೂತಿದೆ ಬಳ್ಳಿ ನೋಡೋ ಬೂರುಗ ಹಿಡಿದಿದೆ ಕೊಳ್ಳಿ ನೇಸರ ನೋಡು ನೇಸರ ನೋಡು ॥ ಬೂರುಗ ಹಿಡಿದಾ ಸೊಡರನು ನೋಡು ಕೇಳದರೆಡೆ ಗಿಳಿ ಹಾಡುವ ಹಾಡು ನೇಸರ ನೋಡು ನೇಸರ ನೋಡು ॥ ಹಾಡುವ ಗಿಳಿಗೆ ಹಣ್ಣನು ಕೊಟ್ಟು ಮೆದುವಾಯಿತ್ತೊ ಮಾವಿನ ತೊಟ್ಟು ನೇಸರ ನೋಡು ನೇಸರ ನೋಡು ॥
ಚಿಕ್ಕಯ್ಯ	ಇದೇಸೊತ್ತು ಕುಣಿಯೋಕಾಗತದವ್ವಾ ಹಿಂಗೆ? ಇದೇನು ಮನಸರಕೆ ಸಾಕಾಗೋದಿಲ್ವೆ?
ಮೋನಿ	ಮೊಲ್ಲೆ, ಸಾಕಂತೆ ಬಿಡವ್ವ, ನಾಲ್ಕು ಹೆಜ್ಜೆಹಾಕಿ ನಿಲ್ಲಿಸು. ಹುಟ್ಟುವ ನೇಸರ ನೋಡಿ ನೋಡಿ ನಲಿದಾಡಿತು ಕರಿಹೈದನ ಹಾಡಿ, ಕರಿಹೈದನ ಬಳಿ ನಲಿಯಲಿ ಎಂದೂ

	ನಲಿಯಲಿ ಬೆಳೆಯಲಿ ಇಂದೂ ಮುಂದೂ (ಎಂದು ನಿಲ್ಲಿಸುವಳು. ಈ ವೇಳೆಗೆ ಕಾಚ, ಗೌಡ ಬಂದು ಒಂದು ಕಡೆಗೆ ನಿಂತು ಇವರನ್ನು ನೋಡುತ್ತಿರುವರು.)
ಚಿಕ್ಕಯ್ಯ	ನೇಸರ ನೋಡು, ನೇಸರ ನೋಡು ಅಂತ ಅಂದದ್ದನ್ನೇ ಅಂತಿದ್ದರೆ ತಲೆ ಚಿಟಗುಟ್ಟುತದೆ.
ಮೋನಿ	ಮೊಲ್ಲೆ, ಹೆಗ್ಗಡೆ ಮಕ್ಕಗೆ ತಲೆ ಚಿಟಗುಟತದಂತೆ, ಆ ಕಲ್ಕ ಹಚ್ಚು. (ಮೊಲ್ಲೆ ಕಲ್ಕವನ್ನು ತೆಗೆದುಕೊಂಡು ಹತ್ತಿರ ಹೋಗುವಳು.)
ಚಿಕ್ಕಯ್ಯ	ಚಿಟಗುಟೋದು ಅಂದರೆ ಬೇಸರತದೆ ಅಂದಿ. ನನಕೆ ತಲೆ ಏನೂ ಆಗಲ್ಲ.
ಮೋನಿ	ಅಂದರೂ ಈ ಕಲ್ಕ ಒಳಿತು.
ಚಿಕ್ಕಯ್ಯ	ಹಂಗಾದರೆ ಹಚ್ಚವ್ವ. ಯಾಕೆ ಬೇಡ ಅನ್ನಲಿ. ನಮ್ಮ ಮೊಲ್ಲೆ ಏನ ಮಾಡಿದರೂ ಚಂದಾಗೆ ಇರುತದೆ. (ಮೊಲ್ಲೆ ಅವನ ಕಣ್ಣಿಗೆ ಕಲ್ಕವನ್ನು ಹಚ್ಚುವಳು. ಚಿಕ್ಕಯ್ಯನು ಅವಳನ್ನೇ ನೋಡುತಿದ್ದು ಅವಳು ಕಲ್ಕವನ್ನು ಹಚ್ಚಿ ಮುಗಿಸಿದನೇಲೆ ಸರಸಕ್ಕೆ ಅವಳ ಗಲ್ಲವನ್ನು ಅಲುಗಿಸುವನು.)
ಕಾಚ	(ಗೌಡನ ಒಡನೆ ಒಳಕ್ಕೆ ಬಂದು) ಏನಿದು ಮೊಲ್ಲೆ ? ಯಾತರದಿದು ಮೋನಿ? ಹಾಡಿ ಹೆಣ್ಮಕ್ಕಳು ಹಿಂಗೇನ ಮಾಡೋದು? (ಮೊಲ್ಲೆ ಮೋನಿ ಬೆಚ್ಚಿ ನಿಲ್ಲುವರು. ಚಿಕ್ಕಯ್ಯನೂ ಎದ್ದು ನಿಲ್ಲುವನು.)
ಚಿಕ್ಕಯ್ಯ	ಅವರೇನೂ ಮಾಡಲ್ಲ.

ಕಾಚ	ಸರಿ ಒಡೆಯ, ಸರಿಯಾತು. ಹೆಗ್ಗಡೆ ಮಕ್ಕಳೇ ಆಗಲಿ ಹೆಣ್ಮೊಗಾನ ಹಿಂಗೆ ಮುಟ್ಟೋದ?
ಚಿಕ್ಕಯ್ಯ	ಅರಿಯದ. ಹಸುಮೊಗೆ ಅಂತ ಮುಟ್ಟಿದಿ. ಮೋನಿ ಇಲ್ಲೇ ಇದ್ದಲು.
ಕಾಚ	ಮೋನಿ ಒಬ್ಬ ಕೂಡಾಳಿ; ಮೊಲ್ಲೆ ಒಂದು ಮಕ್ಕು; ನಡೀರವ್ವ ಬೂಡಿಗೆ. (ಅವರು ಇಬ್ಬರೂ ಹಿಂದೆ ಹಿಂದೆ ನೋಡುತ್ತ ಹೋಗುವರು.) ಒಡೇರ ಕಾಲು ಸರಿಯಾಗಲಿ, ಆ ವೇಳೆಗೆ ಕಾಕ ಬರತಾನೆ, ಅಂತ ತಡದಿ. ಕಾಕ ಬರಲಿಲ್ಲ. ಒಡೇರ ಕಾಲು ಸರಿಯಾತು. ನಾಳೆ ಅಲ್ಲ ನಾಡದ್ದು ನಿಮ್ಮ ಅಪ್ಪಾಜಿಯೋರ ತಾವಕ್ಕೆ ಹೋಗಬಹುದು. ಅದುವರೆಗೆ ನಮ್ಮ ಹೆಣ್ಮಕ್ಕಳ ನಡತಿ ಉಳಿಸಿಕೊಡಬೇಕು.
ಚಿಕ್ಕಯ್ಯ	ತಿಳಿದು ಮಾತನಾಡು ಕಾಕ, ನಾ ಏನೂ ಮಾಡಿಲ್ಲ.
ಕಾಚ	ಮಾಡಲಲ್ಲ ಸರ್ಯೆ ಒಡೆಯ, ಇನ್ನು ಮಾಡಬೇಡಿರ ಅಂತೀನಿ. ಬಿಡಾರಕ್ಕೆ ನಡೀರ.
ಚಿಕ್ಕಯ್ಯ	ವಾರದ ದಿನ ಸಾಕಿದೋನು. ಅಂತ ಸುಮ್ಮನಿದೀನಿ. ಇಲ್ಲದಿದ್ದರೆ ಈ ಮಾತಿಗೆ ನಿನ್ನ ಬಡೀಬೇಕು.
ಕಾಚ	ಆಗಬಹುದು ನಡೀರ. ಹೆಗ್ಗಡೆ ಸೇಲಸಾ ಅದೇನೆ. ಬಡೀವಿರಂತೆ, ನಡೀರ. (ಚಿಕ್ಕಯ್ಯ ಕೋಪದಿಂದ ಹೊರಟುಹೋಗುವನು.)

	ಗೌಡಣ್ಣ, ಮೋನನ್ನ ಕರಿ, ಈ ಅರಿಕೆ ಮೈಸೂರಿಗೆ ಕಳುವು. ನಾಡಿದ್ದಲ್ಲ ಆಚೆದಿನ ಅವ ಬಂದರೂ ಆತು, ಬಿಟ್ಟರೂ ಆತು. ನನಗೆ ಈ ಆಟ ಸಾಕು ಅನಿಸತದೆ. ಮೊಲ್ಲೆ ಹಿಂಗಾದಲೇ!

೮

[ಹೆಗ್ಗಡೆಯ ಪಾಳ್ಯದ ಮುಂದೆ. ರಣಧೀರ, ಶಿಂಗಾಜೆಟ್ಟಿ, ತಮ್ಮಗೌಡ ಬರುವರು.]

ರಣಧೀರ	ಹೆಗ್ಗಡೆ ಪಾಳ್ಯ ಇಲ್ಲೇಯೋ.
ತಮ್ಮಗೌಡ	ಹೌದು ನನ್ನೊಡೆಯ.
ರಣಧೀರ	ಒಳ್ಳೇದು ಅವರ ಕಡೆಯವರನ್ನ ಕರೆದು ಹೇಳು. ಅರಸರ ಕಡೆಯಿಂದ ಯಾರೋ ಬಂದಿದಾರೆ ಅಂತ.
ತಮ್ಮಗೌಡ	ಹೇಳುತೀನಿ ನನ್ನೊಡೆಯ.
ರಣಧೀರ	ಅರಸರು ಬಂದಿದಾರೆ ಅಂತ ಬಾಯಿತಪ್ಪಿ ಹೇಳಬಾರದು.
ತಮ್ಮಗೌಡ	ಇಲ್ಲ ನನ್ನೊಡೆಯ (ಎಂದು ಒಳಗೆ ಹೋಗುವನು).
ರಣಧೀರ	ನೀನಾದರೂ, ಶಿಂಗ, ನಮಗೆ ಬಹಳ ಮರ್ಯಾದೆ ತೋರಿ ನಾವು ಅರಸರು ಅನ್ನೋದನ್ನ ಬಿಟ್ಟುಕೊಡಬಾರದು.
ಶಿಂಗಾ	ಇಲ್ಲಾ, ಪ್ರಭುವೆ. ತಿರುಚನಾಪಳ್ಳಿಗೆ ಹೋಗಿದ್ದಾಗ ನೋಡಲ್ಲಿಲ್ಲವೆ?
ರಣಧೀರ	ನಮ್ಮ ಕೈ ಮೇಲಾಗಿದ್ದಷ್ಟು ಹೊತ್ತೂ ಎಚ್ಚರಿಕೆಯಿಂದ ಇದ್ದೆ. ಸ್ವಲ್ಪ ಏನೋ ಕೆಳ ಕೈಯಾಯಿತು ಅಂತ ಕಾಣಲೂ ಸರೀ ಹಿಡಿತ ಹಿಡೀಬೇಕು ಒಡೆಯಾ ಎಂತ ಕೂಗಿಕೊಂಡೆ.
ಶಿಂಗಾ	ಹೌದು ಮಹಾಸ್ವಾಮಿ. ಮನಸ್ಸು ತಡೆಯಲಿಲ್ಲ; ಕೂಗಿಬಿಟ್ಟೆ. ದೊರೆಗಳಿಗೆ ಹೇಳದೆ ಹೊರಟದ್ದಾಯಿತೇ, ತಿರುಚನಾಪಳ್ಳಿಯಲ್ಲಿ ಏನಾದರೂ ಆಗಿಹೋದರೆ ನಾ ಮೈಸೂರಿಗೆ ಯಾವ ಮೊಕದಲ್ಲಿ ಹೋಗೋದು ಅಂತ ಭಯಪಟ್ಟೆ.

ರಣಧೀರ	ನಿನ್ನ ಭಯನೇನೋ ನ್ಯಾಯ. ಅಂದರೆ ಮರೆಸಿಕೊಂಡು ಹೋಗಿದ್ದದು ತೆರಪಾಗುತ್ತಿತ್ತು.
ಶಿಂಗಾ	ನಮ್ಮ ಮಾತಿನಲ್ಲಿ ನಾ ಕೂಗಿದರೆ ಆ ತಿಗಳರಿಗೆ ಏನು ತಿಳಿಯಬೇಕು?
ರಣಧೀರ	ಅನಕಾ, ಅವರ ಮಾತು ನಮಗೆ ತಿಳಿಯುವುದಿಲ್ಲ, ನಮ್ಮ ಮಾತು ಅವರಿಗೆ ತಿಳಿಯುವುದಿಲ್ಲ, ಅಲ್ಲ?
ಶಿಂಗಾ	ಅವರ ಮಾತು, ನಮಗೇನು ಮಹಾಸ್ವಾಮಿ, ಅವರಿಗೇ ತಿಳಿಯೋಲ್ಲ. ಆಮ್ ಅಂತ ಒಂದು ಮಾತಿನಲ್ಲಿ ತುಟಿಗೆ ತುಟಿ ಮುಟ್ಟಿಸತಾರೆ. ಮಿಕ್ಕಾದ ಮಾತೆಲ್ಲ ತೆರೆದ ಬಾಯಲ್ಲೇ ಆಡೋದು. ಏನು ಮಾತು ಹೇಳಿದರೂ ಬೈದ ಹಂಗೆ ಕೇಳಿಸುತದೆ.
ರಣಧೀರ	ಅಂದರೆ ನಿನಗೆ ಒಂದು ಸುಖ ನೋಡು, ಹೇಳೋದು ಏನೂ ತಿಳಿಯೋದಿಲ್ಲ. ಬೈದರೂ ನಗುತಾ ಕೇಳುತಿರತೀಯ.
ಶಿಂಗಾ	ಅದೂ ನನಗೆ ಸಮ್ಮತ ಮಹಾಸ್ವಾಮಿ, ಬೈದರೂ ಸರಿ, ಹೊಡೆದರೂ ಸರಿ, ಮೈಸೂರು ಮುಖ ನಗುಮುಖ ಅಂತಾರೆ.
ರಣಧೀರ	ನಗುಮುಖ ಅಂತ ಹೇಳಿ ಮುಗಿಸುತಾರೋ ಮಂಗಳಾರತೀನೂ ಮಾಡುತಾರೊ?
ಶಿಂಗಾ	ಮಂಗಳಾರತೀ ಮಾಡೋಕೆ ನಾನೇನು ಅವರಿಗೆ ಸೋತೆನೇ ಮಹಾಸ್ವಾಮಿ? ನನ್ನ ಕೂಡ ಹೋದ ಜಟ್ಟಿ ಅವರ ಜಟ್ಟೀನ ಬಡದನಲ್ಲಾ? ಕಬ್ಬದಯ್ಯ ಹೇಳಿದಹಾಗೆ, ಅವರ ಜಟ್ಟಿ ಆಮೇಲೆ ತನ್ನ

	ತೋಳಲ್ಲಿ ಜಟ್ಟೀ ಒಬ್ಬನ್ನ ಹಿಡಿಯೋ ಹಾಗಿಲ್ಲ. ಇನ್ನವನು ಹಿಡಿಯೋದು ಏನಿದ್ದರೂ ಸ್ವರ್ಗ ಲೋಕದ ಸುಂದರಿಯರನ್ನ.
ರಣಧೀರ	ಅಯ್ಯೋ ಪಾಪ, ಅಯ್ಯೋ ಪಾಪ ಅವರ ಹಣೇಲಿ ಇನ್ನೇನೇನು ಬರೆದಿದೆಯೋ? ಇದು ಯಾರು ಬಂದವರು? ಇವನು ಹೆಗ್ಗಡೆ ಉಂಟೆ? (ತಮ್ಮಗೌಡನೊಡನೆ ಮಾಚಣ್ಣ ಬರುವನು.)
ತಮ್ಮಗೌಡ	ಅರಿಸಿದಿವಿ ಒಡೆಯ, ಬರುತೀವಿ ಅಂದರು.
ರಣಧೀರ	ಇವನ್ಯಾರು?
ತಮ್ಮಗೌಡ	ಹೆಗ್ಗಡೆ ದಲಾಯಿತರು.
ಮಾಚ	ನನ್ನ ಮಾಚನಾಯಕ ಅಂತಾರೆ ಗುರುವೆ.
ರಣಧೀರ	ಒಳ್ಳೇದು ಮಾಚನಾಯಕ, ಹೆಗ್ಗಡೆಗಳು ಬಂದರೆ ಹೇಳು.
ಮಾಚ	ಅಪ್ಪಣೆ ಸ್ವಾಮಿ.
ರಣಧೀರ	(ಶಿಂಗನಿಗೆ) ಕಬ್ಬದಯ್ಯ ಬರೆದದ್ದು ನಿನಗೆ ಜ್ಞಾಪಕ ಇದೆಯೇ?
ಶಿಂಗಾ	ಮಹಾಸ್ವಾಮಿ ನನಗೇನಿದ್ದರೂ ನಾಲ್ಕು ಪಟ್ಟು ಜ್ಞಾಪಕ ಇದೆ. ಈ ಕಬ್ಬ ಕಗ್ಗ ನನ್ನ ತಲೆಗೇ ಹೋಗೋದಿಲ್ಲ ಪ್ರಭು.
ರಣಧೀರ	ಒಳ್ಳೇದಾಯಿತು ಬಿಡು. ಇಂತಾದೆಲ್ಲಾ ತಲೆ ಹೊಕ್ಕರೆ ಅದು ಮೆತ್ತಗಾಗುತದೋ ಏನೋ! (ಮಾಚಣ್ಣ ಹತ್ತಿರ ಬರುವನು) ಏನಯ್ಯ ಅದು.
ಮಾಚ	ಸ್ವಾಮಿಯವರು ಅತ್ತಲಾಗೆ ದಯಮಾಡಬೇಕು ಅಂತಾರೆ.
ರಣಧೀರ	ಆಯಿತು, ಬಂದೇ ಶಿಂಗ, ಇಲ್ಲೇ ಇರು.

	(ಎಂದು ಒಳಕ್ಕೆ ಹೋಗುವನು ಮಾಚಣ್ಣ ಹಿಂದೆ ನಡೆಯುನನು.)
ಶಿಂಗಾ	ಆ ನಾಯಕನನ್ನ ಏನಾದರೂ ಕೇಳಿದೇನಯ್ಯ? ಏನಾಯಿತು ಆಚೆಗೆ ಸಮಾಚಾರ?
ತಮ್ಮ	ದಾರೀಲಿ ಕೇಳಿದ ಮಾತು. ನಿಜ ನನ್ನೊಡೆಯ. ಎಲ್ಲಾ ತಲಕೆಳಗಾಗ್ಯದೆ. ಆಗ ಇವರು ನಮ್ಮ ಬೆದರಿಸುತಿದ್ದರು. ಈಗ ನಮ್ಮ ಕಾಕ ಇವರ ಬೆದರಿಸುತಿದ್ದಾನೆ.
ಶಿಂಗಾ	ಏನಾಯಿತಂತೆ?
ತಮ್ಮ	ಕಾಕ ಬಂದು ಮಾತನಾಡಿದನಂತೆ. ಇವರು ಅವನ್ನ ಹಿಡಿಯೋಕೆ ಹೋದರು. ಅವ ಹೆಗ್ಗಡೆ ಮಕ್ಕನ್ನ ಹಿಡುಕೊಂಡುಹೋಗ್ಯವನಂತೆ. ಹೆಜ್ಜೆ ಮುಂದಕ್ಕೆ ಇಟ್ಟರೆ ಮಗನ್ನ ಕೊಲ್ಲುತೀನಿ ಅಂತಾನೆ. ಬಿಟ್ಟು ಹೋಗಲಾಕಿಲ್ಲ, ಬಿಡಿಸಿಕೊಳ್ಳೋಣ ಅಂತ ಮುಂದೆ ನಡೆಯು ಹಂಗಿಲ್ಲ, ಅಂದ ನಮ್ಮ ನಾಯಕ.
ಶಿಂಗಾ	ಹೌದಲ್ಲಯ್ಯ, ನೀನು ಮೈಸೂರಿಗೆ ಬಂದೋನು, ಕಾಚ ಹೇಳಿದ ಅನ್ನದ ಹಂಗೆ ಕಾಕ, ಕಾಕ ಅಂತ ಹೇಳಿ ಅರಸರಿಗೆ ತಿಳಿಯದೆ ಮಾಡಿಬಿಟ್ಟೆ. ಕಾಚ ಬರಹೇಳಿದ ಅಂದರೆ ಆ ಹೊತ್ತೇ ಬಂದಿರೋರು. ಎಲ್ಲಾ ಸರಾಗ ಅಗಿತ್ತು.
ತಮ್ಮ	ಏನೋ ನನ್ನೊಡೆಯ ನನಕ ಕಾಕನೇನು ಕಾಚನೇನು? ನನಕ ಗೊತ್ತಲ್ಲ, ನಿಮಕೂ ಗೊತ್ತು, ಅಂತ ತಿಳಿದಿ.
ಶಿಂಗಾ	ಅನಕಾ ತಡವಾಯಿತು. ಇಲ್ಲಿ ಈ ರಾದ್ಧಾಂತ ನಡೆಯಿತು.

ತಮ್ಮ	ಈಗ ದಣಿಗಳು ಬಂದಿದೀರಾ ಇನ್ನೆಲ್ಲ ಸಿಕ್ಕೂ ಬಿಡಿಸಬೇಕು. ಎಲ್ಲಾ ಮೊಕದ ಸುಕ್ಕೂ ಹೋಗಿ ನಗುಮೊಕನಾಗಬೇಕು.
ಶಿಂಗಾ	ಆಗತದೆ, ಆಗತದೆ; ದಣಿಗಳು ಬಂದಮೇಲೆ ನಗುಮೊಕನಾಗದೇ ಇರುತದೆಯಾ. ಅಂದರೆ ನಿಮ್ಮ ಜನರೂ ನೀನೂ ಅವರನ್ನ ಅರಸರು ಅಂತ ಹೇಳಬಾರದು. ಅರಸರ ಕಡೆಯ ಮನಸರು ಅನ್ನಬೇಕು. ಈ ಕರೇ ಕಳುಹಿಸಿರೋನು ತಮ್ಮ ಕಾಚ ಹೌದೋ ಅಲ್ಲೋ ಅಂತ ಅರಸರಿಗೆ ಇನ್ನೂ ಅರೆಮನಸು. ಅವರು ಅವನ್ನ ನೋಡೋತನಕ ಈ ಮಾತ ನೀನು ಹೇಳಬಾರದು.
ತಮ್ಮ	ಇಲ್ಲ ನನ್ನೊಡೆಯ. ಅಂದರೆ ನಿಮ್ಮ ಕಾಚ ಅಲ್ಲದೀರಾ ಇದ್ದರೂ ನೀವು ಅವನಿಗೆ ಏನೂ ಮಾಡಬಾರದು.
ಶಿಂಗಾ	ಏನೂ ಮಾಡೋದಿಲ್ಲ. ನಿನಗೆ ಆ ಭಯ ಬೇಡ.
ತಮ್ಮ	ಸರಿ ನನ್ನೊಡೆಯ. (ಮೋನ ಬರುತ್ತಾನೆ.) ಏನೆಲಾ ಮೋನ.
ಮೋನ	ನೀನೇ ಗೌಡಣ್ಣ, ನಿನ್ನ ಹಂಗೆ ದನಿಯಾತು. ಹೌದೋ ಅಲ್ಲೋ ಅಂತ ಬಂದಿ. ನಾ ನಿನ್ನ ನೋಡಾಕೆ ಮೈಸೂರಿಗೆ ಒಂಟಿದ್ದಿನಿ.
ತಮ್ಮ	ಅದೇನ ನನ್ನ ನೋಡಾಕೆ?
ಮೋನ	ದಿನ ಆತು, ಒರಲ್ಲ, ಈ ಓಲೆ ನಿನ್ನ ಕೈಗೆ ಕೊಟ್ಟು ದೊರೆಗಳಿಗೆ ಮುಟ್ಟಿಸು ಅಂತ ಹೇಳಂದರು. ತಕ್ಕೊಂಡವನೆ ಹೊಂಟೆ. (ಎಂದು ಓಲೆಯನ್ನು ಅವನ ಕೈಗೆ ಕೊಡುವನು.)

ತಮ್ಮ	ಒಳಿತಾತು. (ಎಂದು ಅದನ್ನು ತೆಗೆದುಕೊಂಡು) ಮುಟ್ಟಿಸೋಣ, ಅರಸರ ಕಡ್ಯಾಗಿಂದ ಹಿರಿಯೋರು ಬಂದವರೆ, ಅವರ ಕೈಗೆ ಕೊಟ್ಟರೆ ಅವರೇ ಮುಟ್ಟಿಸತಾರೆ, ಇತ್ತಾಗ ಬಾ ಅವರು ಬಂದರು. (ಹೆಗ್ಗಡೆ ರಣಧೀರ ಬರುವರು; ಹಿಂದೆ ಮಾಚಣ್ಣ.)
ಹೆಗ್ಗಡೆ	ಮೈಸೂರರಸರಿಗೂ ಇದಕ್ಕೂ ಸಂಬಂಧ ಇಲ್ಲ. ದ್ಯಾವಣ್ಣ ಹೆಗ್ಗಡೇ ಕೋಟೆಯ ಎಲ್ಲೆ ಇದು. ಇಲ್ಲಿ ಕಂದಾಯ ಸಂದಾಯ ನಾವು ನೋಡೋ ಮಾತು. ನಮಗೆ ಕಂದಾಯ ಸಲಿಸೋರು ಅರಸರಿಗೆ ದೂರು ಹೇಳಿದರೆ. ಅರಸರು ಅವರ ಮಾತು ಕೇಳಿ ನಿಮ್ಮನ್ನ ಇಲ್ಲಿಗೆ ಕಳುವಬಹುದೇ.
ರಣಧೀರ	ಆರಸರು ಏನು ಮಾಡಬಹದು ಏನು ಮಾಡಬಾರದು ನಾವು ಹೇಳುವವರಲ್ಲ. ನಮ್ಮನ್ನಿಲ್ಲಿ ಕಳುಹಿಸಿದಾರೆ. ಇದೇನಾಗಿದೆ ಎಂತ ನೋಡ ಎಂತ. ನೀವು ಒಪ್ಪಿದರೆ ಏನು ಸಂಗತಿ ಎಂತ ಕೇಳುತೇವೆ. ಆಗದು ಎಂದರೆ ಹಿಂದಕ್ಕೆ ಹೋಗಿ ಇದನ್ನ ಅರಿಕೆಮಾಡುತ್ತೇವೆ.
ಹೆಗ್ಗಡೆ	ನಮ್ಮ ಕರಣೀಕರಾದರೂ ಇದರೆ ಚೆನ್ನಾಗಿತ್ತೆ. ಅವರೂ ಕಾಕನ ಕೈಲಿ ಸಿಕ್ಕಿ ಕೊಂಡಿದ್ದಾರೆ.
ರಣಧೀರ	ನಮಗೆ ದಾರೀಲಿ ಈ ಸುದ್ಧೀನೂ ತಿಳೀತು. ನಿಮ್ಮ ಮಗನ್ನ ಕರಣೀಕರನ್ನ ಅವರು ಸೆರೆ ಹಿಡಿದಿದಾರಂತೆ.
ಹೆಗ್ಗಡೆ	ನನ್ನ ಗ್ರಹಚಾರ ಎಲ್ಲಾ ಆಯಿತು.

ರಣಧೀರ	ಅವರನ್ನಾದರೂ ಬಿಡಿಸಿಕೊಂಡು ಬರಬೇಕಲ್ಲ, ನೀವು ನೀವು ಹಠಮಾಡುವುದರಲ್ಲಿ ನಿಮ್ಮ ಮಗನಿಗೆ ಏನಾದರೂ ಆದರೆ ತೊಂದರೆ.
ಹೆಗ್ಗಡೆ	ನಿಜ. ನಿಮ್ಮ ಇಷ್ಟದಂತೆ ಆಗಬಹುದು. ತಾವು ಮಾಡುವ ವಿಚಾರಣೆ ಮಾಡಿ. ಅರಸರಲ್ಲಿ ಆಮೇಲೆ ಅರಿಕೆಮಾಡಿಕೊಂಡರೆ ಆಯಿತು.
ರಣಧೀರ	ಹಾಗಾದರೆ ರಾತ್ರಿ ಅವರ ಹಾಡಿಯ ಕಡೆಗೆ ಹೊರಡೋಣ. ನೀವೂ ನಮ್ಮ ಜೊತೆಗೆ ಬನ್ನಿ, ನಿಮ್ಮ ಜನಕ್ಕೆ ತಿಳಿಸಿ.
ಹೆಗ್ಗಡೆ	ಆಗಬಹುದು. ಎಲಾ ಮಾಚ, ಇದು ನೋಡಿಕೊ.
ತಮ್ಮ	ಅರಸರಿಗೆ ಮುಟ್ಟಿಸಬೇಕಂತ ಈ ಓಲೆ ಬಂದದೆ.
ರಣಧೀರ	ಏನು ಓಲೆ (ಎಂದು ತೆಗೆದು ಓದುತ್ತಾನೆ). ಓಲೆ ಸ್ವಲ್ಪ ವಿಚಿತ್ರವಾಗಿದೆ. ಕುರುಬರ ಹಾಡೀಲಿ ಯಾರಿದಾರೆ ಈ ಓಲೆ ಬರೆಯೋಕೆ ಅರಸರಿಗೆ.
ಹೆಗ್ಗಡೆ	ನಮ್ಮ ಕರಣೀಕರು ಬರೆದಿರಬಹುದು.
ಮೋನ	ಹೌದು, ಹೌದು.
ರಣಧೀರ	ಓಹೋ, ನಿಮ್ಮ ಕರಣೀಕರು ಬರೆದದ್ದೊ ಇದು, ಚೆನ್ನಾಗಿ ಬರೆದಿದ್ದಾರೆ.
ಹೆಗ್ಗಡೆ	ಅವರು ಯಾವಾಗಲೂ ಹಾಗೆಯೆ ಒಕ್ಕಣೆ ಗಿಕ್ಕಣೆ ಅನ್ನೋದು ಚೆನ್ನ ಬಲ್ಲಂತವರು.
ರಣಧೀರ	ಹಾಗೆಂತಲೇ ಕಾಣುತದೆ. ರಾತ್ರೆ ಹೊರಡೋಣ ಕಾಕನ ಹಾಡೀಗಾಗಿ. ಏನಾಗದೇ ಇದ್ದರೂ ಕರಣೀಕರನ್ನ ಹೆಗ್ಗಡೆ ಮಕ್ಕಳನ್ನ ಬಿಡಿಸಿಕೊಂಡು ಬರೋಣ. ಏನಯ್ಯ ಶಿಂಗ?

ಶಿಂಗಾ	ಆಗಬಹುದು ಪ್ರಭು.
ರಣಧೀರ	ಪ್ರಭು ಅನ್ನೋದು ದೊಡ್ಡಮಾತು. ಹೀಗೆಲ್ಲ ಹೇಳಬೇಡ.
ಶಿಂಗಾ	ಅಪ್ಪಣೆ ಪ್ರ....ಅಪ್ಪಣೆ ಆಗಬಹುದು.

೯

[ಕುರುಬರ ಹಾಡಿಯಲ್ಲಿ ಚಾವಡಿಯ ಮುಂದೆ, ಮಾರನೆಯ ಬೆಳಿಗ್ಗೆ ಮೋನಿ ಮೊಲ್ಲೆ ಬರುತ್ತಾರೆ.]

ಮೋನಿ	ಮೊಲ್ಲೇ, ನನ್ನ ಮೊಲ್ಲೇ, ಹಗಲೆಲ್ಲ ಅತ್ತಾತು, ಇರುಳೆಲ್ಲ ಅತ್ತಾತು. ಇನ್ನೂ ಸಾಕಾಗಲಿಲ್ಲೇ ನಿನಕ, ಅತ್ತು ಅತ್ತು?
ಮೊಲ್ಲೆ	ಅತ್ತದ್ದು ಸಾಕಾಗಲಿಲ್ಲ ಮೋನಿ, ಬದುಕಿದ್ದು ಸಾಕಾತು.
ಮೋನಿ	ಯಾಕೇ ನನ್ನವ್ವ, ಇಂತಾ ಮಾತಾಡತಿ? ಕಣ್ಣ ತೆರೆಯೊ ಮುನ್ನ?
ಮೊಲ್ಲೆ	ತೆರೆಯನೊಲ್ಲೆ ಮೋನಿ ನಾ ನನ ಕಣ್ಣು, ನೇಣೋ ನೀರೋ ನೋಡಿ ಕಣ್ಮುಚ್ಚೋದೆ ಚಂದ ಅನಸತದೆ.
ಮೋನಿ	ಯಾಕಾಗಿ ಈ ಮಾತು? ಹೆಗ್ಗಡೆ ಮಕ್ಕಗಾಗಿ?
ಮೊಲ್ಲೆ	ಹೌದು ಹೆಗ್ಗಡೆ ಮಕ್ಕಗಾಗಿ.
ಮೋನಿ	ಕಾಕ ಏನಂದಾನು?
ಮೊಲ್ಲೆ	ತಪ್ಪುಮಾಡಿದ ನನ್ನ ಮಗಳು ಸತ್ತರೆ ಸತ್ತಲು ಅಂದಾನು.
ಮೋನಿ	ಮೋನ ಏನಂದಾನು?
ಮೊಲ್ಲೆ	ಯಾಕೇನಂದಾನು?
ಮೋನಿ	ನಾ ಏನಾಗಲಿ?
ಮೊಲ್ಲೆ	ನೀ ನಾಕನ ಜೊತೆಗಿರುತೀಯಲ್ಲ.

ಮೋನಿ	ನಾಕ ಇದ್ದಾನು ಒಸಗ್ಯಾಗಿ, ನಾನ್ಯಾಕ ಇರಲಿ? ನೀ ನೇಣೋ ನೀರೋ ನೋಡಿದರೆ ನಾನೂ ನೋಡೋದೆ. ಅಂದರೆ ಹಂಗೆ ಸತ್ತರೆ ನೆರಳಾಗಿ ತಿರಗಬೇಕು ಅಂತಾರೇ, ಅದಕಾಗಿ ಅಂಜಿಕೆ.
ಮೊಲ್ಲೆ	ಹಿಂಗೆ ತುಂಬಿಕೊಂಡಿರೋಳು ನೀ ನೆರಳೇನಾದೀ ಮೋನಿ?
ಮೋನಿ	ಒಡಲುಳ್ಳ ಉಸಿರಾದರೆ ಗೂಡಾಗಿರೋ ಹಕ್ಕಿ, ಒಡಲು ಉಡಿದ ಹೊತ್ತಿಗೆ ಅದು ಹಾರತಿದ್ದ ಹಂಗಾಯಿತು. ರಕ್ಕೆ ಬರೋ ಮುನ್ನ ಗೂಡು ಬೇಡೆಂದರೆ, ಅವ್ವ ಇಲ್ಲ, ಬಾನು ಇಲ್ಲ, ಕೆಡತದೆ ಹಕ್ಕಿ ಅಂತಾರೆ.
ಮೊಲ್ಲೆ	ಇದ್ದರೂ ಕೆಡೋದೆ ಆಯ್ತು. ಸತ್ತು ಕೆಡೋಣಂತೆ.
ಮೋನಿ	ಇದ್ದು ಕೆಟ್ಟರೆ ಅಯ್ಯೋ ಪಾಪ ಅಂತಾರೆ. ಸತ್ತು ಕೆಟ್ಟರೆ ಅಂದಾರೆ? ಈಗ ನಾ ಮೊಲ್ಲೆ ಅಂದರೆ ನೀನು ಆ ಅಂತೀಯ. ನೆರಳಾಗಿ ಮೊಲ್ಲೆ ಅಂದೆನೆ ಅಂಜಿಕೊಂಡು ಓಡುತೀಯ. ಒಡಲಿದ್ದು ಹಸಿದರೆ ಉಣ್ಣಬಹುದು ; ಒಡಲಿಲ್ಲದೆ ಹಸಿದರೆ ಸೊರಗೋದೆ. ಸಾವು ಅಂತನ್ನೋದು ಸೀಗೆಣಸಲ್ಲ ಮೊಲ್ಲೆ. ನನ್ನ ಮಾತು ಕೇಳು, ನಾಲ್ಕು ದಿನ ತಡಕೊ.
ಮೊಲ್ಲೆ	ಹೆಗ್ಗಡೆ ಮಕ್ಕ ಹೊಂಟೋದಮ್ಯಾಕ್ಕೆ ನಾ ಇರ ಒಲ್ಲಿ ಮೋನಿ. ಮೋನಿ ಮೋನಿ ಈವೊತ್ತು ಅವನ್ನ ಒಮ್ಮೆ ನೋಡಿದರಾದಾತಲ್ಲೆ!
ಮೋನಿ	ಕಾಕ ಏನಂದಾನು? ಅವನ ಮನಸಾದರೂ ಹೆಂಗಿದ್ದಾತೊ?

ಮೊಲ್ಲೆ	ಮೋನಿ ಮೋನಿ, ಅಕೊ ನೋಡಲ್ಲಿ ಬರತದಾನೆ, ಹೆಗ್ಗಡೆ ಮಕ್ಕ. ಅವನ್ನ ಕೇಳು, ಏನಂತಾನೆ, ನನ್ನ ನೋಡುತೀನಿ ಅಂದರೆ ಕರಿ, ನಾ ಬರತೀನಿ.
ಮೋನಿ	ನೀನೇ ಇದ್ದು ಮಾತಾಡಿಸು ; ಬಾರದ್ಯಾಕೆ ಮೊಲ್ಲೆ?
ಮೊಲ್ಲೆ	ಇಲ್ಲ, ನೀನಾಡಿಸು, ನಾ ದಂಡೀಲೆ ಇರತೀನಿ. (ಎಂದು ಸ್ವಲ್ಪದೂರ ಹೋಗುವಳು. ಚಿಕ್ಕಯ್ಯ ಬರುವನು.)
ಚಿಕ್ಕಯ್ಯ	ಅಬ್ಬಾ ಅಬ್ಬಾ (ಎಂದು ಚಿಂತೆಯಿಂದ ಅತ್ತ ಇತ್ತ ತಿರುಗುವನು.)
ಮೋನಿ	ಹೆಗ್ಗಡೆ ಮಕ್ಕಾ.
ಚಿಕ್ಕಯ್ಯ	(ಬೆಚ್ಚಿ) ಯಾರದು?
ಮೋನಿ	ನಾ ಮೋನಿ.
ಚಿಕ್ಕಯ್ಯ	ಮೋನೀನಾ? ಏನವ್ವಾ?
ಮೋನಿ	ಏನೀವೊತ್ತು, ಹೊತ್ತಿಗೆ ಮುಂಚೇ ಎದ್ದಿಲ್ಲಿ ತಿರಗತಿದೀಯಾ?
ಚಿಕ್ಕಯ್ಯ	ರಾತ್ರೆಲ್ಲ ನಿದ್ದೆ ಬರವೊಲ್ಲದು, ಎಂತೆಂತಾದೊ ಕನಸು. ಕರಣೀಕರ ಕುತ್ತಿಗೆ ಕೊಯ್ದಂತೆ. ನಮ್ಮಪ್ಪಾಜಿ ಏನೋ ಆದಂತೆ. ಮೊಲ್ಲೆ ಭಾವಿಗೆ ಬಿದ್ದಳು ಅಂತ. ಏನೇನೋ ಕನಸು!
ಮೋನಿ	ಕರಣೀಕರು ಬಾಳಬೇಕು, ನಿಮ್ಮಪ್ಪಾಜಿ ಬದುಕಬೇಕೇ! ನನ್ನ ಮೊಲ್ಲೆ ಏನಾದರೆ ನಿನಗೇನಂತೆ?
ಚಿಕ್ಕಯ್ಯ	ಮೊಲ್ಲೇನೂ ಬಾಳಬೇಕು ಬದುಕಬೇಕು ಮೋನಿ.
ಮೋನಿ	ಬಾಳಬೇಕು ಬದುಕಬೇಕು ಅನ್ನೋನು ಬಾಳಿಸಿ ಬದುಕಿಸುತೀಯಾ?

ಚಿಕ್ಕಯ್ಯ	ಹೆಂಗೆ ಮಾಡಳಿ ತಿಳೀದೆ?
ಮೋನಿ	ಅವಳನೇ ಕೇಳು ಕರೀತೀನಿ. ಮೊಲ್ಲೆ ಬಾ ಇತ್ತ. ಬಾ ಬೇಗನೆ, ನಾಚಬ್ಯಾಡ. (ಮೊಲ್ಲೆ ಬರುವಳು) ಹೆಗ್ಗಡೆ ಮಕ್ಕ, ಇವಳನ್ನು ನೋಡು. ಮೊಲ್ಲೆ ಅಂದರೆ ಮೊಲ್ಲೆ. ಇವರವ್ವ ಹಿಂಗೇ ಇದ್ದಲು, ಕಾಡಾಗಿದ್ದು ಸತ್ತಲು. ಇವಳ ಈ ಹರೆಯಕ್ಕೆ ನೀನಿಲ್ಲಿ ಬಂದಿದೀಯಾ, ಜೊತೆಗೆ ಬರುತೇನಂತಾಳೆ; ಕರೆದುಕೊಂಡು ನಡಿ. ಇಲ್ಲಿ ಎತ್ತ ಎಂದರೆ ನಾ ಏನಾರ ಬೊಂಕತೀನಿ. ಹೋಗಿ ಪಾಳ್ಯ ಸೇರಿಕೊಂಡು ಕಾಕನಿಗೆ ಹೇಳಿಕಳುವು. ಕೊಂಡುಹೋದದಾಯಿತಂತಾ ಒಪ್ಪಿಕೋತಾನೆ. ಮೊಲ್ಲೆ, ಹೋಗುತೀಯೇನೆ? (ಮೊಲ್ಲೆ ಸುಮ್ಮನಿರುವಳು.)
ಚಿಕ್ಕಯ್ಯ	ಏನಂತೀ ಮೊಲ್ಲೆ?
ಮೋನಿ	ನನಗೇನೂ ತೋಚದು. ನೀ ಹೆಂಗಂದರೆ ಹಂಗೆ.
ಚಿಕ್ಕಯ್ಯ	ಕಾಕನ್ನ ಮೋನೀನ ಬಿಟ್ಟು ಬರೋಕಾಗತದಾ? (ಮೊಲ್ಲೆ ಸುನ್ಮುನೆ ಇದ್ದು ಕಣ್ಣೀರು ಸುರಿಸುವಳು.) ಬಿಡಲಾರಿ, ಅಂದರೂ ಬಿಟ್ಟೀಯ. ನೀನು ಹೆಣ್ಮಗಳು. ಅಂದರೆ ಹೇಳದೆ ಕೇಳದೆ ಹೋಗೋದು ನಿನ್ನ ಕಳುವುಮಾಡೋದು ನನಗೆ ಚಂದಲ್ಲೆ.
ಮೋನಿ	ಇಂಥ ಹೊತ್ತಿನಾಗ ಚಂದ ನೋಡಿದರಾದಾತ?

ಚಿಕ್ಕಯ್ಯ	ನಾ ಓಡಿಹೋದೆನೆಂದರೆ ಕರಣೀಕರನ ಏನು ಮಾಡುತಾರೊ? ಇದಕ್ಕೆ ಅನುವಾದಿ ಅಂತ ನಿನ್ನ ಏನು ಮಾಡುತಾರೋ?
ಮೋನಿ	ಕರಣೀಕ ಏನಾದರೇನು ಅವನೊಬ್ಬ ಸುಳ್ಳಾಟದ ಮನಸ.
ಚಿಕ್ಕಯ್ಯ	ಯಾಕೆ ನಿನಗೇನ ಮಾಡಿದರು?
ಮೋನಿ	ಮಾಡ್ಯಾನು ಈ ಮನಸ, ನಾ ಆಗಲಿ ಅಂತಂದರೆ. ನಿನ್ನ ನೋಡಲಾಕೆ ನಾನೂ ಮೊಲ್ಲೆ ಬರತಿದ್ದರೆ ನೋಡತಾನಪ್ಪ ನಮ್ಮನೊಂದು ತಿನಗಣ್ಣ ನೋಟದಾಗೆ. ಕುರುಬರ ಹಾಡೀನ ಮುದುಕ ಕೋಟೆ ಅಂತ ತಿಳಿದನೇನೋ? ಹೋಗಲಿ ಅವನ ಮಾತೇನು, ನನತಾದರೂ ಯಾಕೆ? ನನ್ನ ಏನು ಬೇಕಾರ ಮಾಡಲಿ. ಮೊಲ್ಲೆ ಚೆಂದಾಗಿದ್ದರಾತು.
ಮೊಲ್ಲೆ	ನೀನೇನಾರಾ ಆದರೆ ನಂದೆಂತ ಚಂದ? ಆದಹಂಗಾಗಲಿ ನಾವು ಓಡಿಹೋಗೋದು ಬ್ಯಾಡ.
ಮೋನಿ	ಬೂಡಾಗೆ ಒಬ್ಬರಿಗೂ ಗಾಸಿ ಆಗಬಾರದು ಅಂದರೆ ನೀ ಉಣ್ಣೋದು ಯಾವ ಹರವಿನ ಉಣಿಸನ್ನ? ಹೋಗಲಿ, ಈಗಲಾರ ಹತ್ತಿಲಿ ಕುಂತಿರು. ನಾ ಇತ್ತಾಗ ನೋಡಿಕೊತೀನಿ. (ಎಂದು ಒಂದು ಕಡೆಗೆ ತಿರುಗಿ ಸ್ವಲ್ಪ ಮರೆಗೆ ನಿಂತುಕೊಳ್ಳುವಳು.)
ಮೊಲ್ಲೆ	ಇಲ್ಲಿ ಕುಂತುಕೊ (ಎಂದು ಚಿಕ್ಕಯ್ಯನನ್ನು ಒಂದು ಕಡೆ ಕೂರಿಸಿ ಪಕ್ಕದಲ್ಲಿ ಕುಳಿತು ಭುಜದಮೇಲೆ ತಲೆಯಿಟ್ಟು ಅವನನ್ನು

	ನೋಡುತ್ತಿರುವಳು. ಅವನು ಅವಳ ಕುರುಳನ್ನು ತೀಡಿ ಗಲ್ಲವನ್ನು ಹಿಡಿದು ನೋಡುತ್ತ)
ಚಿಕ್ಕಯ್ಯ	ಇದು ಎಂತಾ ಹಸುಳೆ ನೀನು ಮೊಲ್ಲೆ।
ಮೊಲ್ಲೆ	ಯಾಕ? ಏನಮಾಡಿದೀ?
ಚಿಕ್ಕಯ್ಯ	ನೀ ಏನೂ ತಪ್ಪು ಮಾಡೋಲ್ಲ. ಅಂತ ಎಳೇ ಮನಸು ನಿನ್ನದು. ನಮ್ಮಲ್ಲಿ ಹುಡುಗೇರು ನಿನ್ನ ವಯಸ್ಸಿಗೆ ಅದೇನೇನೊ ಆಗಿಬಟ್ಟಿರತಾರೆ.
ಮೊಲ್ಲೆ	ಹಂಗಾರೆ ನಾ ಒಳ್ಳ್ಯೇಳು ಅಂತೀಯಾ?
ಚಿಕ್ಕಯ್ಯ	ಬಾಳ ಒಳ್ಳ್ಯ್ಯೇಳು.
ಮೊಲ್ಲೆ	ನನ್ನ ಒಂದಿಗೆ ಕರಕೊಂಡು ಹೋಗತೀಯಾ?
ಚಿಕ್ಕಯ್ಯ	ಅದೇ ಹೆಂಗಂತ ತಿಳೀಲಿಲ್ಲೇ!
ಮೊಲ್ಲೆ	ನಾ ಕಾಕನ ಕೇಳತೀನಿ, (ಮೋನಿ ಮರೆಯಿಂದ ಬರುತ್ತ)
ಮೋನಿ	ಅವ್ವಯ್ಯಾ, ಇದು ಯಾರೊ ಬಂದರೆ. (ರಣಧೀರನು ಒಂದು ಮರದ ಮರೆಯಿಂದ ಬರುವನು. ಚಿಕ್ಕಯ್ಯ ಎದ್ದು ನಿಲ್ಲುವನು.)
ರಣಧೀರ	(ಮಾಚ, ತಮ್ಮಗೌಡ ಬರುವರು) ಯಾರು ಇವರು? (ಎಂದು ಬೇರೆಯಾಗಿ ಕೇಳುವನು.)
ತಮ್ಮ	(ಅವನಿಗೆ) ಈ ಹೆಣ್ಣು ನಮ್ಮ ಕಾಕನ ಮಗಳು. ಇವರು ಹೆಗ್ಗಡೆ ಮಕ್ಕ.

ರಣಧೀರ	ಇವರ ರೀತಿ ನೋಡಿದರೆ ಒಂದು ಕಥೆ ಇದ್ದಹಾಗಿದೆಯಲ್ಲಾ. ಇವನನ್ನ ಸ್ವಲ್ಪ ಆಡಿಸೋಣ. (ಎಂದು ಇವರ ಹತ್ತಿರ ಬಂದು ಚಿಕ್ಕಯ್ಯನಿಗೆ) ಅಯ್ಯಾ ನೀನು ಯಾರು?
ಚಿಕ್ಕಯ್ಯ	ನಾ ಚಿಕ್ಕಯ್ಯ. ಹೆಗ್ಗಡೆ ದೇವಣ್ಣನವರ ಮಗ. (ಈ ವೇಳೆಗೆ ಶಿಂಗಾಜಟ್ಟಿ ಬಂದು ಅರಸನ ಹಿಂದೆ ನಿಲ್ಲುವನು.)
ರಣಧೀರ	ಇಲ್ಲಿ ಸೆರೆಯಾಗಿರೋನೋ?
ಚಿಕ್ಕಯ್ಯ	ಹೌದು.
ರಣಧೀರ	ಈ ಹೆಣ್ಣು ಕಾಕನ ಮಗಳು?
ಚಿಕ್ಕಯ್ಯ	ಹೌದು.
ರಣಧೀರ	ಇದೇನು. ಊರಿಗೆ ಮುಂಚೆ ಎದ್ದು ಇವಳನ್ನು ಇಲ್ಲಿ ಕೂರಿಸಿಕೊಂಡು ಸರಸ ಆಡುತಾ ಇದೀಯ?
ಚಿಕ್ಕಯ್ಯ	ಈ ಮಾತು ಕೇಳೋಕೆ ನೀವು ಯಾರು?
ರಣಧೀರ	ಈ ಮಾತು ಯಾರು ಬೇಕಾದರೂ ಕೇಳಬಹುದು.
ಚಿಕ್ಕಯ್ಯ	ಯಾರು ಬೇಕಾದರೂ ಕೇಳಬಹುದು. ಆದರೆ ಎಲ್ಲಾರಿಗೂ ನಾ ಹೇಳಬೇಕಾಗಿಲ್ಲ.
ರಣಧೀರ	ಯಾರಿಗಾದರೆ ಹೇಳಬೇಕು? ನಮ್ಮನ್ನ ಮೈಸೂರರಸರು ಕಳುಹಿಸಿದ್ದಾರೆ.
ಚಿಕ್ಕಯ್ಯ	ಇರಬಹುದು, ಇರಬಹುದು. ಈ ಮಾತು ಕೇಳು ಅಂತ ಅವರು ನಿಮಗೆ ಹೇಳಿಲ್ಲ.

ರಣಧೀರ	ತಮ್ಮಗೌಡ, ಹೆಗ್ಗಡೇನ ಕರಿ. ಮಗ ಮಾಡುತಿರೋ ಕೆಲಸ ನೋಡಲಿ. (ತಮ್ಮಗೌಡ ಒಳಗೆ ಹೋಗಿ ಹೆಗ್ಗಡೆಯನ್ನು ಕರೆತರುವನು. ಚಿಕ್ಕಯ್ಯನು ಮೊಲ್ಲೆಯನ್ನು ಬಿಟ್ಟು ಸ್ವಲ್ಪ ದೂರ ಸರಿದು ತಂದೆ ಬಂದಾಗ)
ಚಿಕ್ಕಯ್ಯ	ಅಪ್ಪಾಜಿ ನೀವಿಲ್ಲಿ ಬಂದಿರಾ? (ಎಂದು ಹೋಗಿ ಅವನ ಕಾಲು ಮುಟ್ಟಿ ಕೈಹಿಡಿದು ಕಣ್ಣಿಗೆ ಒತ್ತಿಕೊಳ್ಳುವನು.)
ಹೆಗ್ಗಡೆ	ಅಪ್ಪಾ ಚಂದಾಗಿದೀಯಾ, ಇವರ ದಯದಿಂದ ನಾ ನಿನ್ನ ನೋಡಬಹುದಾಯಿತು. (ಎಂದು ರಣಧೀರನನ್ನು ತೋರಿಸುವನು.)
ಚಿಕ್ಕಯ್ಯ	ಕೈಮುಗಿದೆ, ನನ್ನೊಡೆಯ.
ಹೆಗ್ಗಡೆ	ಕರಣೀಕರು ಎಲ್ಲಿ?
ಚಿಕ್ಕಯ್ಯ	ಗುಡಲಲ್ಲಿದ್ದಾರೆ.
ರಣಧೀರ	ಈಗಲಾದರೂ ನನಗೆ ಉತ್ತರ ಹೇಳುತೀಯಾ?
ಚಿಕ್ಕಯ್ಯ	ಅದು ಇದು ಬೇರೆ ಮಾತು.
ರಣಧೀರ	ಗೌಡ, ಕಾಕನಿಗೆ ಹೇಳಿಕಳುಹು, ಅರಸರ ಕಡೆಯವರು ಬಂದಿದಾರೆ ಅಂತ.
ಗೌಡ	ಅಪ್ಪಣೆ (ಎಂದು ಮೋನನನ್ನು ಕರೆದು ಹೇಳಿಕಳುಹಿಸುವನು.)
ರಣಧೀರ	ಏನು ಹೆಗ್ಗಡೆಗಳೆ, ನಿಮ್ಮಾ ಕಾಕನಾ ಜಗಳ ಹರಿಸೋಣ ಅಂತ ನಾವು ಬಂದರೆ, ನಿಮ್ಮ ಮಗ ಕಾಕನ ಮಗಳನ್ನು ಕಳವು ಮಾಡೋದರಲ್ಲಿದಾನಲ್ಲ!

ಚಿಕ್ಕಯ್ಯ	ಏನಿದು. ಒಡೆಯ, ಕಳವು ಗಿಳವು ಅಂತ ತುಟಿಮೀರಿದ ಮಾತನ್ನೇ ಆಡುತಾ ಇದೀರ?
ರಣಧೀರ	ತುಟಿಮೀರಿದ ಮಾತಾಡುತಿರೋದು ನೀವು. ನಾವು ಅರಸರ ಕಡೆ ಮನುಷ್ಯರು, ಇದ ಹೇಳಬಹುದು.
ಚಿಕ್ಕಯ್ಯ	ಈ ಹೆಣ್ಣು ಕಳವು ಮಾಡಿದ್ಯೇನೋ ಅಂತ ನಮ್ಮಪ್ಪಾಜಿ ಹೇಳಬಹುದು. ಅವಳಪ್ಪ ಕಾಕ ಹೇಳಬಹುದು. ತುದೀ ಮೀರಿದರೆ ಮೈಸೂರಿನ ಆರಸರಾದರೂ ಹೇಳಬಹುದೇನೊ? ಅಪ್ಪ ಅಪ್ಪಾಜಿ ಹೇಳಬಹುದು, ನಾಡರಸರು ಹೇಳಬಹುದು, ಅನ್ನೋ ಮಾತನ್ನ ದಾರೀಲಿ ಹೋಗತಾ ಹೋಗತಾ ದೊಡ್ಡವರನ್ನೋರೆಲ್ಲ ಹೇಳಬಾರದು.
ರಣಧೀರ	ಹಾಗೇ ಆಗಲಿ ಚಿಕ್ಕ ಹೆಗ್ಗಡೆಗಳೆ. ಹೆಣ್ಣಿನಪ್ಪ, ನಿಮ್ಮಪ್ಪಾಜಿ, ಇವರೇ ಹೇಳಲಿ. ಏನು ಹೆಗ್ಗಡೆಗಳೆ?
ಹೆಗ್ಗಡೆ	ಅದರ ಮಾತು ಆಮೇಲೆ ಆಡಬಹುದು. ಈಗ ಇವರ ಆ ಕಾಕನ್ನ ಕರೆಸಿ ತಾವು ಬಂದಿರೋ ಮಾತು ನೋಡಿದರೆ ಇದ್ದೀತು.
ರಣಧೀರ	ಓಹೋ ನೀವೂ ಹೀಗೇ ಹೇಳುತೀರೋ. ಒಳ್ಳೇದು ಆ ಹೆಣ್ಣಿನ ಅಪ್ಪ ಬರಲಿ. (ಕಾಚ ಬರುತ್ತಾನೆ. ಹಿಂದೆ ಗೌಡ, ಕರಣೀಕ.)
ಕಾಚ	(ತಮ್ಮಗೌಡನಿಗೆ) ಅರಸರು ಬರೋಕಾಗಲ್ಲ ಅಂದರೆ? ಹೋಗಲಿ ಕಡೇಕೆ ಯಾರನಾದರೂ ಕಳುವಿದರಲ್ಲ. ಒಳಿತಾತು. ನೀ ಬರಲೂ

	ಇಲ್ಲ ಸುದ್ದೀನೂ ಇಲ್ಲ, ಅಂತ ನಾ ನೆನ್ನೆ ಒಂದು ಎಲೆ ಬರದು ಕಳುವಿದೆನೇ,
ತಮ್ಮ	ಅದೂ ದಾರೀಲಿ ಸಂದತು. ಅವರ ಮುಂದಿಗೆ ಮುಟ್ಟಿಸಿವಿನಿ. (ರಣಧೀರನು ಮುಖವನ್ನು ಸ್ವಲ್ಪ ಮರೆಸಿಕೊಳ್ಳುವನು.)
ಕಾಚ	ಸರ್ಯೆ. (ಎಂದು ಮುಂದೆ ಬಂದು ಶಿಂಗಾಜಟ್ಟಿಯನ್ನು ನೋಡಿ) ಓಹೊ, ನಮ್ಮ ಜಟ್ಟಿಗಳು. ಕೈಮುಗಿದಿ, ಜಟ್ಟಿ ದಣಿಗಳೆ. ಯಾರು ಬಂದಿರೋರು?
ಶಿಂಗಾ	ನೋಡು (ಎಂದು ರಣಧೀರನನ್ನು ತೋರಿಸುವನು.)
ಕಾಚ	(ಹತ್ತಿರ ಬಂದು ರಾಜನನ್ನು ಗುರುತಿಸಿ ಬೆಚ್ಚಿ) ಆರಸರ ಕಡಿಂದ ಯಾರೋ ಬಂದಿದಾರೆ ಅಂದರು. ನನ್ನ ದೇವರು ಬಂದರು ಅಂತ ಹೇಳಲಿಲ್ಲೇ! ನನ್ನೊಡೆಯಾ, ನನ್ನ ಕಾಕ, ಬಂದಿರಾ, ನನ್ನ ಬದುಕಿಸೋಕ? (ಎಂದು ರಣಧೀರನ ಕಾಲಿಗೆ ಬಿದ್ದು ಹೊರಳಾಡುವನು.)
ರಣಧೀರ	ಕಾಚಾ ಕಾಚಾ, ಏಳು. ನೀನೇ ಏನೋ ಕಾಕ? ನಿನ್ನ ತಮ್ಮಗೌಡ ಹೇಳಿದಾಗ ಹಾಗಂತಲೇ ಅಂದುಕೊಂಡೆವು. ಆದರೂ ಹೌದೋ ಅಲ್ಲೋ ಅಂತ ನೋಡಲಿಕಾಗಿ ಹೀಗೆ ಬಂದೆವು. ಏಳು ನಿಲ್ಲು. (ಎಂದು ಮುಟ್ಟಿ ಹಿಡಿದು ಎಬ್ಬಿಸುವನು.)
ಕಾಚ	ಏನ, ತಮ್ಮಗೌಡ, ಅರಸರು ಬಂದದಾರೆ ಅನ್ನದೀರ, ಯಾರೋ ಬಂದರು ಅಂದ್ಯೆ? ದೇವರ ಪಾದ ನಮ್ಮ ಹಾಡೀಗೆ ಬೆಳದಾ ಈ

	ಹೊತ್ತು, ಬಾನಲ್ಲಿ ಗುಡಿ ಇಲ್ಲ, ಚಾವಡಿ ಮುಂದೆ ತೋರಣ ಇಲ್ಲ. ಹಿಂಗಾತೆ! ಹಿಂಗಾತೆ! ಗೌಡ, ಬಾ ಇತ್ತ. ಅರಸರೇ ಬಂದದಾರೆ ಕಾಲಿಗೆ ಬೀಳು. ನಿನ್ನ ಮಂದೀ ಕಷ್ಟ ಹರೀತನ್ನು ಇನ್ನು. ಕಾಲಿಗೆ ಬಿದ್ದು ಗುಡಿ ತೋರಣ ಕಟ್ಟು, ಗುಡಿ ತೋರಣ ಕಟ್ಟು, (ಗೌಡನು ರಾಜನಿಗೆ ಅಡ್ಡಬಿದ್ದು ಹೋಗುವನು.) ಕಾಚನ ಮಾತ ಕೇಳಿ ನೀವು ಬಂದೇ ಬಂದಿರಾ ನನ್ನೊಡೆಯಾ!
ಹೆಗ್ಗಡೆ	(ಈ ವೇಳೆಗೆ ಇವನು ರಾಜನೆನ್ನುವುದನ್ನು ತಿಳಿದು) ಮಹಾಪ್ರಭು ಕೈಮುಗಿದೆ (ಎಂದು ಬಾಗಿ ನಮಸ್ಕಾರ ಮಾಡುವನು. ಎಲ್ಲರೂ ಹಾಗೆಯೇ ಅರಸನಿಗೆ ನಮಸ್ಕಾರ ಮಾಡುವರು.)
ರಣಧೀರ	(ಕಾಚನಿಗೆ) ತಮ್ಮಗೌಡ ನಿನ್ನ ಹೆಸರು ಹೇಳಲಿಲ್ಲ. ಇಲ್ಲದಿದ್ದರೆ ನಾವು ಅಂದೇ ಬಂದಿರಬೇಕು. ನೀನು ನಮ್ಮ ಜೀವ ಉಳಿಸಿದೋನು ಕಾಚ. ಅದ ನಾವು ಮರೆಯುವಂತಿಲ್ಲ.
ಕಾಚ	ದೇವರು ಉಳಿಸಿದನಾತು ದೇವರ ಜೀವಾನ, ನಾಡಿನ ತಾತೀನ, ಉಳಿಸಬಹುದು ಏನ ಈ ಹುಳುವಂತ ಮನುಸ?
ರಣಧೀರ	ನೀವು ಬಲ್ಲಿರಾ ಹೆಗ್ಗಡೆಗಳೆ, ಇವ ನಮ್ಮ ಕಾದದ್ದನ್ನ?
ಹೆಗ್ಗಡೆ	ಮಹಾಸ್ವಾಮಿ, ಅಪ್ಪಣೆಯಾಗಬೇಕು.
ರಣಧೀರ	ನಾಗ ಎಂತ ನಮ್ಮ ಆನೆ. ಅದರಮೇಲೆ ಒಂದು ದಿನ ಕೂತಿರಬೇಕಾದರೆ ಅದಕ್ಕೆ ಏನೋ ಹುಚ್ಚು ತಿರುಗಿತು. ಅದು ಓಡೋಕೆ ಮೊದಲು ಮಾಡಿತು. ಮಾವುತ ಏನೇನೋ ಮಾಡಿದ.

	ಅದು ನಿಲ್ಲಲಿಲ್ಲ. ಕಾಚ ಅಲ್ಲೆಲ್ಲೋ ಇದ್ದವನು ನೋಡಿದ. ಆನೆ ಎದುರಿಗೆ ಬಂದ. ಅದೇನೋ ಒಂದು ಸದ್ದು ಮಾಡುತಾನೆ ಸಿಂಹ ಗರ್ಜಿಸಿದಹಾಗೆ, ಆ ಸದ್ದುಮಾಡಿದ. ಹುಚ್ಚು ಹಿಡಿದು ಓಡುತ್ತಿದ್ದ ಆನೆ ತಟ್ಟನೆ ನಿಂತಿತು. ಇವ ಹತ್ತಿರ ಬಂದು ಆ ಶಬ್ದ ಮಾಡುತಾ ಮಾಡುತಾಲೇ ಅದರ ಪಕ್ಕೆಗೆ ಕೈಯಿಟ್ಟು ಹಸ್ತಾನ ನಮ್ಮ ಕಾಲಿಗೆ ಮೆಟ್ಟಿಲು ಮಾಡಿದ. ಅದರಮೇಲೆ ಅಡಿಯಿಟ್ಟು ನಾವು ಕೆಳಕ್ಕೆ ದುಮುಕಿದೆವು. ಆ ವೇಳೆಗೆ ನಾಗನ ಕಾಲಿಗೆ ತೊಡರುಹಾಕಿದರು, ನಿಲ್ಲಿಸಿದರು. ಕಾಚ ಓಡಿಬಂದು ಆ ಗರ್ಜನೆಮಾಡಿ ನಿಲ್ಲಿಸದೆ ಇದ್ದಿದ್ದರೆ ನಾವು ಈ ದಿವಸ ಇಲ್ಲಿ ಮಾತನಾಡುತ್ತ ಇರುತ್ತಿರಲಿಲ್ಲ.
ಕರಣೀಕ	ಕಾಚ ಅಂದು ಮಾಡಿದ ಸಾಹಸದಿಂದ ಇಂದು ನಮಗೆ ಮಹಾಸ್ವಾಮಿಯವರ ಸಂದರ್ಶನದ ಪುಣ್ಯ ಲಭಿಸಿತು.
ರಣಧೀರ	ತಾವು ಕರಣೀಕರೊ?
ಕರಣೀಕ	ಹೌದು ಮಹಾಪ್ರಭು.
ರಣಧೀರ	ನೀವು ಕಾಚನಿಗೆ ನಿನ್ನೆ ಒಂದು ಓಲೆ ಬರೆದು ಕೊಟ್ಟಿರಂತೆ.
ಕರಣೀಕ	ಹೌದು ಮಹಾಪ್ರಭು.
ರಣಧೀರ	ಇಲ್ಲಿ ರಾಯಸದವರು ಯಾರೂ ಇಲ್ಲ. ಅದನ್ನು ಸ್ವಲ್ಪ ಓದಿ ಹೇಳಬೇಕು.
ಕರಣೀಕ	ಮಹಾಪ್ರಭು, (ಎಂದು ಹಿಂದು ಮುಂದು ನೋಡುವನು.)

ರಣಧೀರ	(ಅವನ ಕೈಗೆ ಓಲೆಯನ್ನು ಕೊಟ್ಟು) ಓದಿ; ಎಲ್ಲರೂ ಕೇಳಲಿ; ಒಕ್ಕಣೆ ಮುಂತಾದ್ದು ಹೇಗಿದೆ.
ಕರಣೀಕ	ಅಪ್ಪಣೆಯಾದರೆ ಪ್ರಭುಗಳು ಸ್ವಲ್ಪ ವಿಶ್ರಮಿಸಿಕೊಂಡಮೇಲೆ ಓದಿ ಹೇಳುತ್ತೇನೆ.
ರಣಧೀರ	ನಾಚಿಕೊಳ್ಳಬೇಡಿ, ಕರಣೀಕರೆ, ಓದಿ ಹೇಳಿ.
ಕರಣೀಕ	(ಓದಿ ಹೇಳುತ್ತಾನೆ.) "ಸ್ವಸ್ತಿ ಶ್ರೀಮನ್ಮಹಿಸೂರ ನಾಡರಸರು ಮಹಾರಾಜ ಪ್ರಭು ರಣಧೀರ ಕಂಠೀರವ ನರಸರಾಜ ಒಡೆಯರ ದಿವ್ಯ ಪಾದಪದ್ಮಗಳಲ್ಲಿ ಅಡಿಯಾಳು ಕಾಕನಕೋಟೆ ಕುರುಬರ ಹಾಡಿಯ ಕಾಕ ಇನ್ನೊಂದು ಹೆಸರು ಕಾಚ ಮಾಡುವ ಶಿರಸಾಷ್ಟಾಂಗ ಪ್ರಣಾಮ ಪೂರ್ವಕ ವಿಜ್ಞಪ್ತಿ. ಅದಾಗಿ, ಈಗ ಎಂಟು ದಿವಸದ ಹಿಂದೆ ಮಹಾಸ್ವಾಮಿ ಇಲ್ಲಿಗೆ ದಯಮಾಡಿಸಿ ನಮಗೂ ನಮ್ಮ ಹೆಗ್ಗಡೆಗಳಿಗೂ ಉಂಟಾಗಿರುವ ವಿವಾದವನ್ನು ಪರಿಹರಿಸಬೇಕೆಂದು ಬೇಡಿ ಒಬ್ಬ ಮನುಷ್ಯನನ್ನು ಕಳುಹಿಸಿಕೊಟ್ಟಿದ್ದೆ. ಈಚೆಗೆ ಈ ವಿವಾದ ನಮ್ಮ ಎರಡು ಪಕ್ಷದವರಿಗೂ ಸಮ್ಮತವಾಗುವಂತೆ ನಮ್ಮನಮ್ಮಲ್ಲೇ ವ್ಯವಸ್ಥೆಯಾಗಿದೆ. ಮಹಾಸ್ವಾಮಿಯವರು ಈ ಬಗ್ಯಾಗಿ ಇಲ್ಲಿಗೆ ಬರಕೆಲಸವಿಲ್ಲ. ಬರಬೇಕೆಂದು ಬೇಡಿ ಬಳಿಯಟ್ಟಿದ್ದನ್ನು ಮನ್ನಿಸಿ ಅಡಿಯಾಳನ್ನು ಉದ್ಧಾರ ಮಾಡಬೇಕು. ಪಾಡ ಈಕಡೆ ಬೆಳೆಯಬೇಕಾದ ಕಾರಣ

	ಲೇಶವಾದರೂ ಇಲ್ಲವೆಂದು ಮತ್ತೆ ವಿನಯಪೂರ್ವಕವಾಗಿ ಬಿನ್ನವಿಸುತ್ತೇನೆ. ಇಂತೀ ಶಿರಸಾಷ್ಟಾಂಗ ಪ್ರಣಾಮಪೂರ್ವಕ ವಿಜ್ಞಪ್ತಿ.'' (ಕಾಚನು ಕರಣೀಕನನ್ನು ಅಶ್ಚರ್ಯದಿಂದ ನೋಡುತ್ತಾನೆ.)
ರಣಧೀರ	ನೀ ಬೇಡ ಅಂದರೂ ನಾವು ಬಂದಹಾಗಾಯಿತು, ಕಾಕ.
ಕಾಚ	ನಾ ಬೇಡ ಅಂತ ಬರೀರಿ ಅನಲಿಲ್ಲ. ನಮ್ಮ ಕರಣೀಕರು ಎಂತ ಆಟ ಮಾಡಿದ್ದಾರೆ!
ರಣಧೀರ	ಏನು ಕರಣೀಕರೆ, ಅವನೊಂದು ಹೇಳಿದರೆ. ನೀವೊಂದು ಬರೆದಿರಾ?
ಕರಣೀಕ	ಮಹಾಸ್ವಾಮಿ, ಏನೋ ಒಂದೆರಡು ಮಾತು ಬೇರೆ ಬರೆದೇ ನಿಜ. ಹೆಗ್ಗಡೇ ಕಾಕನ ಜಗಳಕ್ಕೆ ಅರಸರು ಯಾಕೆ ಇಷ್ಟು ದೂರ ಬರಬೇಕು ಅಂತ ಹಾಗೆ ಬರೆದೆ.
ಗೌಡ	ಕರಣೀಕರು ನಿನ್ನೆ ಕಳುವೋ ಮುಂದೆ ಕಾಗದ ಓದಿ ಹೇಳಿದಾಗ ಬಂದೇ ಬರಬೇಕು, ಬರದಿದ್ದರಾಗೋಲ್ಲ ಅಂತ ಬರದಿವ್ನಿ ಅಂತ ಓದಿದರೆ!
ರಣಧೀರ	ಹಾಗೆ ಓದಿದರೇನು?
ಶಿಂಗಾ	ಒಂದಿರುತಾ ಒಂದೋದನ್ನು ಕರಣೀಕರಿಗೆ ಹೇಳಿಕೊಡಬೇಕೆ?
ಕರಣೀಕ	ಮಹಾಸ್ವಾಮಿ, ಮೂರು ದಿನಕ್ಕೆ ಎಂತಿದ್ದರೂ ನಾವು ಪಾಳ್ಯಕ್ಕೆ ಹೋಗೋದು ಆಂತಾಯತು. ಇಲ್ಲಿ ಸಿಕ್ಕಿ ನರಳುತ ಚಿಕ್ಕಯ್ಯ ಬೇರೆ ಸೆರೆಯಾಗಿರಬೇಕಾದರೆ, ಬಿಡಿಸಿಕೊಂಡುಹೋಗಿ ಆಮೇಲೆ ಮಾತಾಡೋಣ ಅನ್ನೋದಕ್ಕಾಗಿ ಹೀಗೆ ಮಾಡಿದ್ದುಂಟು

	ಮಹಾಸ್ವಾಮಿ. ಹೆಗ್ಗಡೆಗಳ ಮನೆ ಉಳಸೋಕೆ ಒಂದು ಸುಳ್ಳು ಹೇಳದಹಾಗೆ ನಾನು ಸತ್ಯದ ವ್ರತ ಹಿಡಿದಿರೋದು ಏನು ಮಹಾಸ್ವಾಮಿ? ನನಗೆ ಅನ್ನ ಬಟ್ಟೆ ಇಟ್ಟವರು ಬದುಕಲಿ, ನಾನು ಸುಳ್ಳನಾದರೆ ಆದೆ, ಅಂದೆ. ಇಷ್ಟು ಮಹಾಸ್ವಾಮಿ ಆದದು.
ಚಿಕ್ಕಯ್ಯ	ಕರಣೀಕರು ದಿಟವಂತರು. ಈ ಕಾಗದದ ಮಾತು ನಾಕಾಣೆ. ಇಲ್ಲಿ ನನ್ನ ಇವರನ್ನ ಸೆರೆತಂದಾಗ ನೀವೇನಾರ ಓಡಿಹೋದರೆ ಹೆಗ್ಗಡೆ ಮಗನ್ನ ಕೂಂದುಬಿಡುತೇವಿ ಅಂದರು. ನೀವು ಓಡಿಹೋಗಿ ಬದುಕಿಕೊಳ್ಳಿ, ನನ್ನ ಇವರೇನೂ ಮಾಡೋಲ್ಲ, ಹಂಗೇನಾದರ ಮಾಡಿದರೆ ನೋಡಿಕೊಳ್ಳೋಣ, ಅಂತ ನಾನು ಹೇಳಿದೆ. ಇವರು ಹೋಗೋಲ್ಲ ಅಂದರು. ತಾವು ಓಡಿಹೋಗಿ ನಗೇನಾದರೂ ಆದರೆ ತಮ್ಮ ಜನ್ಮ ವ್ಯರ್ಥ ಅಂದರು.
ಶಿಂಗಾ	ಹಾಗಾದರೆ ಕರಣೀಕರು ಬರೇ ಸುಳ್ಳಲ್ಲ.
ಕರಣೀಕ	ಅರಸರ ಹಿಂದೆ ಕಾವಲಾದೋರು ನೀವು ಬರೇ ಸತ್ಯವಂತರಾದೀರಿ ನಾಯಕರೆ ಜೋಕೆ. ಕಷ್ಟಕಾಲದಲ್ಲಿ ಒಂದಲ್ಲ ಹತ್ತು ಸುಳ್ಳು ಹೇಳಿ ಅವರನ್ನು ಉಳಿಸಿಕೊಳ್ಳಿ. (ಗೌಡನು ಎರಡು ಮಕ್ಕರಿಯಲ್ಲಿ ಹೂವು ಹಣ್ಣನ್ನು ತರುವನು.)
ಕಾಚ	ಹೋಗು, ಒಂದು ಮಂಕರಿ ಅವರ ಕಾಲಿಗಿಟ್ಟುಬಾ. (ಗೌಡನು ಹಾಗೆ ಮಾಡುವನು.) ಮಹಾಸ್ವಾಮಿ, ತಾವು ಬಂದದ್ದು ದೇವರು ಬಂದಹಾಗಾಯಿತು. ಬಂದಾರು ಅಂತ ಒಂದು ವಾರ ಹಣ್ಣು ಹೂವು ಇಟ್ಟಿದ್ದಿವಿ, ಬರಲಿಲ್ಲ. ಇಂದು ಬರೋದು ತಿಳೀಲ್ಲ. ಹಿಂಗೆ

	ಬರುಗೈಯಾಗಿದೀವಿ. ಹೂವಿಲ್ಲ ಹಣ್ಣಿಲ್ಲ, ಎಲವ್ವಾ ಮೊಲ್ಲೆ ಬಾ ಇತ್ತ (ಮೊಲ್ಲೆ ಇವನ ಹತ್ತಿರ ಬರುವಳು.) ಇದೋ ಇದು ಒಂದು ನಂದು ಅಂತ ಅದೆ. ಇದನ್ನ ಒಪ್ಪಿಸಿಕೋಬೇಕು. (ಎಂದು ಮೊಲ್ಲೆಯನ್ನು ದೊರೆಯ ಕಾಲಿನಮೇಲೆ ಹಾಕುವನು. ಮೊಲ್ಲೆ ಎದ್ದು ಹಿಂದಕ್ಕೆ ಬಂದು ಇವನನ್ನು ಹಿಡಿದುಕೊಂಡು)
ಮೊಲ್ಲೆ	ಅಪ್ಪಾಜಿ ನಾ ಒಲ್ಲಿ, ನಾ ಒಲ್ಲ, ನಾ ಒಲ್ಲಿ.
ಕಾಚ	ಯಾಕಲೇ ಮಕ್ಕೆ? ಅರಸರ ಕಾಲು ಹಿಡಿಯೋಕೆ ಒಲ್ಲಿ ಒಲ್ಲಿ ಅಂತಿ?
ಮೋನಿ	ಅರಸರ ಕಾಲಲ್ಲ. ಹೆಗ್ಗಡೆ ಮಕ್ಕನ ಕಾಲಹಿಡಿ ಅನ್ನು.
ಕಾಚ	ಯಾತರದ ಇವಳ ಮಾತು? ಕೂಡಾಳಿ ಹೆಣ್ಣಿನದು?
ರಣಧೀರ	ತಡಿ, ಕಾಚ. ಆತರ ಪಡಬೇಡ, ಸ್ವಲ್ಪ ತಡೆದುಕೊ. ನಾವು ಬೆಳಗಾಗ ಇತ್ತ ಬಂದಾಗ ಇವರು ಇಲ್ಲಿ ಕೂತಿದ್ದರು. ನೋಡಿದೆವು. ಈ ಮಗು ಹೆಗ್ಗಡೆ ಮಗನನ್ನ ಮದುವೆಯಾಗೋಕೆ ಒಪ್ಪುತಾಳಂತ ಕಾಣುತ್ತದೆ, ಈ ಮದುವೆಯಾಗೋದಾದರೆ ನಮಗೆ ಬಹಳ ಸಂತೋಷ. ನಿಮಗೆ ಇದು ಇಷ್ಟವೆ ಹೆಗ್ಗಡೆಗಳೆ?
ಹೆಗ್ಗಡೆ	ಕುಲದವರು ಒಪ್ಪಬೇಕೆ? ಏನು ಕರಣೀಕರೆ?
ಕರಣೀಕ	ಇಂಥ ಸಂಬಂಧ ಆದದ್ದು ಹಿಂದೆ ಉಂಟು ಮಹಾಸ್ವಾಮಿ. ಇಬ್ಬರೂ ಒಂದೇ ಕುಲ. ಇವರು ಊರುಗಳಲ್ಲಿದ್ದೂ, ಇವರು ಕಾಡುಗಳಲ್ಲಿದ್ದೂ ಬೇರೆಬೇರೆ ಅನ್ನೋಹಾಗೆ ನಡೆದುಕೊಳ್ಳುತಾರೆ. ಮಹಾಸ್ವಾಮಿ ಆಗಬೇಕು ಅಂದರೆ ಸಂಬಂಧ ಆಗಬಹುದು.

ರಣಧೀರ	ಏನು ಕಾಚ?
ಕಾಚ	ನಾ ಬೇರೆ ಏನೂ ಕೊಡಲ್ಲ, ಮಹಾಸ್ವಾಮಿಗೆ.
ರಣಧೀರ	ನೀ ಒಂದು ಕಾಲದಲ್ಲಿ ನಮಗೆ ಜೀವಕೊಟ್ಟಿದ್ದು ಸಾಕು. ಇನ್ನೇನೂ ಬೇಡ. ಈ ಮಗು ನಮ್ಮ ಮಗಳಹಾಗೆ. ಹೆಗ್ಗಡೆ ಮಗನಿಗೆ ಕೊಟ್ಟು ಮದುವೆಮಾಡೋಣ. ನಿಮ್ಮ ನಿಮ್ಮ ವಿವಾದವೂ ಇದರಿಂದ ತೀರಿತು.
ಕಾಚ	ಅಪ್ಪಣೆ ಮಹಾಸ್ವಾಮಿ.
ಮೋನಿ	ಮೊಲ್ಲೇ, ನನ ಮೊಲ್ಲೇ (ಎಂದು ಬಂದು ಅವಳನ್ನು ಸೆಳೆದು ಅಪ್ಪಿಕೊಳ್ಳುವಳು).
ಶಿಂಗಾ	ಎಲ್ಲರನೂ ಕೇಳಿ ಆಯಿತು, ಹುಡುಗನ್ನ ಹುಡುಗೀನ್ನೇ ಕೇಳಲಿಲ್ಲ.
ರಣಧೀರ	ಏನವ್ವಾ ಮೊಲ್ಲೆ, ನೀನು ಇವರನ್ನ ಮಡುವೆ ಆದೀಯಾ? (ಅವಳು ಏನೂ ಹೇಳುವುದಿಲ್ಲ, ನಗುತ್ತ ತಲೆಬಾಗಿ ನಿಲ್ಲುವಳು.) ಇದು ನೋಡು, ಶಿಂಗಾ, ಹೆಣ್ಣೆಲ್ಲ ಹೀಗೆಯೇ. ಅಕೊ ನೋಡು, ಹಾಗೆ ನಿಂತರೆ ಆಗುತೇನೆ ಅಂತ ಅರ್ಥ.
ಶಿಂಗಾ	ಮಹಾಸ್ವಾಮಿಯ ಅನುಭವಕ್ಕೆ ತಿಳಿಯದ ವಿಚಾರವೆ?
ರಣಧೀರ	(ನಕ್ಕು) ನಮ್ಮ ಮಾನ ಕಳೆಯುತೀಯೇನೋ ಎಲ್ಲರೆದುರಿಗೆ? (ಎಂದು ಚಿಕ್ಕಯ್ಯನಿಗೆ) ನೀವು ಈ ಹುಡುಗಿಯನ್ನ ಮದುವೆಯಾಗುತ್ತೀರಾಯ್ಯ?
ಚಿಕ್ಕಯ್ಯ	ಅಪ್ಪಣೆ, ಮಹಾಸ್ವಾಮಿ.

ರಣಧೀರ	ನೀವು ಯಾರು ಕೇಳೋಕೆ ಅಂತ ಆಗ ಕೇಳಿದಹಾಗೆ ಕೇಳುವುದಿಲ್ಲವಲ್ಲ?
ಚಿಕ್ಕಯ್ಯ	ಅರಸರಂದಿದ್ದರೆ ಆಗಲೂ ಕೇಳುತಿರಲಿಲ್ಲ, ಮಹಾಸ್ವಾಮಿ.
ರಣಧೀರ	ಸರಿಯಾಗಿ ಮಾತನಾಡತಾರೆ ನಮ್ಮ ಹೆಗ್ಗಡೇ ಮಕ್ಕಳು. ಹೆಗ್ಗಡೆಗಳೆ, ಈ ಮದುವೆ ನಾಳೆ ಇಲ್ಲಿ ಆಗಲಿ. ಇಲ್ಲಿಂದ ಹೋಗಿ. ನಿಮ್ಮೂರಲ್ಲಿ ವಿಜೃಂಭಣೆಯಿಂದ ನಡೆಸಿ. ಈ ಹಾಡಿಗಳ ಸೀಮೆ ಇನ್ನುಮೇಲೆ ನಮ್ಮ ಸ್ವಂತದ್ದು ಅಂತ ಇಟ್ಟುಕೊಳ್ಳುತೇವೆ. ಇದಕ್ಕೆ ನಮ್ಮ ಕಾಚ ಕಾಕ ಅಂತ ಇರಲಿ.
ಕಾಚ	ಮಹಾಸ್ವಾಮಿ, ನನಗೆ ಕಾಕತನ ಬ್ಯಾಡ. ಇವರೆಲ್ಲ ನನ್ನ ಕಾಕ ಕಾಕ ಅಂದರು. ನಾ ಕಾಕ ಅಲ್ಲ, ಬೇರೆ ಅದಾನೆ ಅಂದಿ. ದಿಕ್ಕಿಲ್ಲದ ಈ ಮಂದಿಗೆ ನೀವೇ ಕಾಕ. ನಾ ಕಾಕನಾಗಿ ಇವರನ್ನ ಏನು ಕಾದುಕೊಂಡೇನು? ನೀವು ಇದಕ್ಕೆ ಕಾಕನಾಗಿರಬೇಕು.
ರಣಧೀರ	ಹಾಗಾದರೆ ಈ ಸೀಮೆಯನ್ನು ನಿನ್ನ ಮಗಳಿಗೆ ಉಂಬಳಿ ಹಾಕಿಕೊಡುತೇವೆ. ಇಲ್ಲಿಗೆ ಅವಳ ಗಂಡ ಹೆಗ್ಗಡೆಯಾಗಿರಲಿ, ಅವಳು ಹೆಗ್ಗಡಿತಿ. ಇದರ ಕಂದಾಯ ಸಂದಾಯ ಇನ್ನು ಮುಂದೆ ನಾವೇ ವಿಚಾರಿಸಿಕೊಳ್ಳತಕ್ಕವರು. ತಿಳೀತೇ ಹೆಗ್ಗಡೆಗಳೆ?
ಹೆಗ್ಗಡೆ	ತಿಳೀತು ಮಹಾಸ್ವಾಮಿ, ಕರಣೀಕರೆ ತಿಳುಕೊಳ್ಳಿ.
ಕರಣೀಕ	ತಿಳಿದೆ ಹೆಗ್ಗಡೆಗಳೆ.

ರಣಧೀರ	ಈ ಪ್ರಾಂತವನ್ನು ಇನ್ನುಮೇಲೆ ಕಾಕನಕೋಟೆ ಎಂದು ಕರೆಯತಕ್ಕದ್ದು. ಈಗ ಹೆಗ್ಗಡೆಗಳ ಪಾಳೆಯ ಇರುವಕಡೆ ಒಂದು ಕೋಟೆ ಕಟ್ಟಿಸಬೇಕು ಕಾಚ.
ಕಾಚ	ನನ್ನೊಡೆಯ ದಣಿಗಳು ಕಾಕನಾಗಿರಲಾಗಿ ಕೋಟೆ ಯಾಕೆ ಬೇಕು? ಅಲ್ಲದೀರ ಹಿರಿಯರು ಅಂದಿದಾರೆ ಕಾಡು ನಾಡಾಗಬೇಡ ನಾಡು ಬಯಲಾಗಬೇಡ ಅಂತ. ಕಾಡುದೇವರು ಒಲಿದಿರೋಮಂದಿ ಊರ ಕಟ್ತಿತೀವಿ ಅನಬಾರದಂತೆ.
ರಣಧೀರ	ಹಾಗೆ?
ಕಾಚ	ಏನು ಗೌಡಣ್ಣ?
ಗೌಡ	ಹೌದು ನನ್ನ ದೇವರೆ, ಈಗ ನಮ್ಮ ಹಕ್ಕಳು ಕಾಡಾಗೆ ನಡೀತಿರಲೀಕೆ ಹರಿದಾರೀಲಿರೋ ಆನೆ ಕಂಪು ಮೂಗಿಗೆ ತಿಳೀತದೆ. ತರಗಿನೊಳಗೆ ತೆಕ್ಕೆ ಬಿದ್ದಿರೋ ಸರಪಾ ಕಣ್ಣಿಗೆ ಕಾಣುತದೆ. ಜಿಂಕೆ ಹಿಂದೆ ನಡಿಯೋ ಹುಲಿ ಹೆಜ್ಜೆ ಸಪ್ಪಳ ಕೊಂಬಿನ ದೂರದಲ್ಲಿ ಕಿವೀಗೆ ಕೇಳತದೆ. ಜೇನ ಹುಡುಕುತಾ ಹೋಗತಿದ್ರೆ ನೊಣ ಬಂದು ದಾರೀ ತೋರತದೆ. ಊರು ಕಟ್ಟಿ ನಿಂತಿವಿ, ಇದೊಂದೂ ಆಗಲ್ಲ.
ರಣಧೀರ	ಶಿಂಗಾ, ಈ ವಿಚಿತ್ರವನ್ನ ಕೇಳಿದೆಯಾ?
ಶಿಂಗಾ	ಕೇಳಿದೆ ಮಹಾಪ್ರಭು. ಕಾಡಿನಲ್ಲೇ ಇರುತ್ತೇವೆ ಅನ್ನೋರಿಗೆ ಇದೂ ಇಲ್ಲದೆ ಇದ್ದರೆ ಬದುಕುವುದು ಸಾಧ್ಯವೆ?

ಕಾಚ	ಗೋಡೇಲಿ ಮಾಡಿದ ಕೋಟೆ ಏಸುದಿನ ತಡೆದಾತು ನನ್ನೊಡೆಯ? ಈ ಕಾಡಿಗೆ ಕೋಟೆ ನಮ್ಮ ದಣೀ ಹೆಸರು.
ರಣಧೀರ	ಶಿಂಗೆ ಇವನ ಮಾತು ಸ್ವಲ್ಪ ನಮ್ಮ ಕಬ್ಬದಯ್ಯನ ಮಾತಿನ ಹಾಗೆ ಇದೆ ಅಲ್ಲವೆ?
ಶಿಂಗಾ	ಹೌದು ಮಹಾಸ್ವಾಮಿ, ಇವನೂ ಅದೇಜಾತಿ ಮನುಷ್ಯ. ಅವರ ಹತ್ತಿರ ಹೋಗುತಾ ಬರುತಾಲೂ ಇದ್ದ. ಇಂತವರ ಮಾತೆಲ್ಲ ಒಂದೇರೀತಿ.
ರಣಧೀರ	ಒಂದೇರೀತಿ ಅಂದರೆ?
ಶಿಂಗಾ	ಕೇಳೋಹೊತ್ತಿಗೆ ಚೆನ್ನಾಗಿರುತದೆ; ಮೂರುಪಾಲು ನಿಜವಲ್ಲ.
ರಣಧೀರ	ಅಷ್ಟೇ ಅಂತೀಯಾ?
ಶಿಂಗಾ	ಅಷ್ಟೇ ಮಹಾಸ್ವಾಮಿ, ರಟ್ಟೇಲಿ ಬಲ ಇಲ್ಲದೋನು ರಾಮನಾಮ ಹೇಳಿ ಜಟ್ಟಿ ಆಗತಾನೆಯೇ ಪ್ರಭುವೆ?
ರಣಧೀರ	ಅದು ನಿಜ. ಅಂದರೆ ಇವನು ಹೇಳಿದ್ದು ಬೇರೆ ಮಾತು ಎಂತ ಕಾಣುತ್ತದೆ. ಒಳ್ಳೇದು ಕಾಚ, ನಿನ್ನ ಇಷ್ಟದಂತೆ ಆಗಲಿ.
ಕಾಚ	ಅಪ್ಪಣೆ ನನ್ನೊಡೆಯ.
ರಣಧೀರ	ನಡೆಯಿರಿ, ಇನ್ನು ಹೋಗೋಣ. ಈ ಮದುವೆ ಏರ್ಪಾಡು ಮಾಡಿ.
ಕಾಚ	ಅಪ್ಪಣೆ ನನ್ನೊಡೆಯ. ನನ್ನ ದೇವರು ಬಂದಾರು ಅಂತ ಒಂದು ಪದ ಮಾಡಿಸಿವ್ನಿ. ಆಗಬಹುದಂದರೆ ಅದನ ಹೇಳಿ ಎಲ್ಲಾ ಕುಣೀತೀವಿ.
ರಣಧೀರ	ಆಗಬಹುದು.

	(ಕಾಚ ಹಾಡುವನು. ಉಳಿದವರು ಜೊತೆಗೆ ಕರೆಯುತ್ತ ಕುಣಿಯುವರು.) ಗೆಲ್ಲೋ ರಣಧೀರ ಗೆಲ್ಲೊ ಕಂಠೀರವ; ಗೆಲು ನರಸರಾಜ ಹಗೆಗಳಿಗೆ ಭೈರವ. ಗೆಲ್ಲು ಮೈಸೂರೊಡೆಯ ಗೆಲ್ಲು ನಮ್ಮರಸ; ಆಳೀ ಬಾಳೀ ನೂರೊಂದು ವರುಸ. ಬಹುಕಾಲ ಆಳಲಿ ನಮ್ಮ ನಾಡೊಡೆಯ ; ಹರಡಿ ಹೆಚ್ಚಲಿ ನೆರಳು ಅವನ ಬಿಳಿಕೊಡೆಯ. ಕಾಯೋ ಮಾದೇಶ ಕಾಯಿ ನಮ್ಮ ದೊರೆಯ ;

	ಹರಿಸು ನಾಡಲಿ ಕೃಪೆಯ ಇನಿಹಾಲ ತೊರೆಯ. ಗೆಲ್ಲೋ ಗೆಲ್ಲೋ ಗೆಲ್ಲೋ ಗೆಲ್ಲೋ ಗೆಲ್ಲೋ ಗೆಲ್ಲೋ ಗೆಲ್ಲೋ ಗೆಲ್ಲೋ. (ತೆರೆ ಬೀಳುವುದು.)